ಶ್ರೀ ಕೆ.ಎಂ. ಕೃಷ್ಣಮೂರ್ತಿ :– ಸಚಿವರು ಈಗ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಇದರ ಜೊತೆಗೆ ನನ್ನ ಕ್ಷೇತ್ರದವರೇ ಇಬ್ಬರಿಗೆ ಆ ತರಹವಾಗಿದೆ. ಕಡೂರು ವಿಧಾನ ಸಭಾ ಕ್ಷೇತ್ರದಲ್ಲಿ ಇಬ್ಬರು ಮಕ್ಕಳಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಆಗಿಲ್ಲ. ಅದಕ್ಕೆ ಈ ಹಿಂದೆ ಅಧಿಕಾರಿಗಳು ತಪ್ಪು ಮಾಡಿದ್ದಾರಲ್ಲಾ, ಅಂಥವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಬೇಕಲ್ಲಾ ?. . . .

ಅಧ್ಯಕ್ಷರು :– ಈಗ ಕೃಷ್ಣಮೂರ್ತಿಯವರೆ, ಎನ್‌ಕ್ವಯರಿ ಮಾಡುತ್ತೇವೆ ಎಂದು ಬಹಳ ಹಿಂದೆ ಹೇಳುತ್ತಿದ್ದರು. ಆ ತರಹ ನಾಟಕದ ತರಹ ಆಗಿದೆ. ಎನ್‌ಕ್ವಯರಿಯಾದ ಮೇಲೆ ಯಾರ ಮೇಲೂ ಆಕ್ಷನ್ ತೆಗೆದುಕೊಂಡಿಲ್ಲ.(ಗೊಂದಲ) ಇದೇನು ? ಆ ಕಾರಣದಿಂದ ಅದು ಯಾರಿಗೂ ಅರ್ಥವಾಗುವುದಿಲ್ಲ. ಈ ಕಡೆ ಇದ್ದಾಗ ಒಂದು ತರಹ ಮಾತನಾಡುವುದು, ಆ ಕಡೆ ಹೋದಾಗ ಇನ್ನೊಂದು ತರಹ ಮಾತನಾಡುವುದು. ಅಂತೂ ಇಂತು ಏನೆಂದರೆ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ ಅಂದ ಹಾಗೆ ಜನರು . . . .

ಶ್ರೀ ಕೆ.ಎಂ. ಕೃಷ್ಣಮೂರ್ತಿ :– ಅದಕ್ಕೆ ಆ ಕಡೆಯಿಂದ ಈ ಕಡೆ ಮಾತನಾಡಿದರೆ, ಈ ಕಡೆಯಿಂದ ಆ ಕಡೆ ಮಾತನಾಡಿದರೆ . . . .

(ಗೊಂದಲ)

ಅಧ್ಯಕ್ಷರು :– ದಯಮಾಡಿ, ಶ್ರೀನಿವಾಸಗೌಡರೆ, ಮಾತನಾಡಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:– ಯಾರು 23 ಜನರಿಗೆ ಹಾಲ್‌ಟಿಕೆಟ್ ಕಳುಹಿಸಿಲ್ಲ . . . .

ಅಧ್ಯಕ್ಷರು :– ಆಯಿತು, ಅದರ ಬಗ್ಗೆ ಅವರು ಹೇಳಿದ್ದಾರೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :– **ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.**

ಅಧ್ಯಕ್ಷರು :– ಮಾನ್ಯ ಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ಗೌಡರೆ, ನೀವು 15 ನಿಮಿಷದಲ್ಲಿ ಮುಗಿಸಬೇಕು.

5) ಘನತೆವೆತ್ತ ರಾಷ್ಟ್ರಪತಿಯವರು ದಿ : 20.11.05 ರಂದು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರುಗಳನ್ನು ಉದ್ದೇಶಿಸಿ ಮಾಡಿದ ಭಾಷಣದ ಮೇಲೆ ಮುಂದುವರೆದ ಚರ್ಚೆ ಹಾಗೂ ಸರ್ಕಾರದ ಪ್ರತಿಕ್ರಿಯೆ.

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) :– ಮಾನ್ಯ ಅಧ್ಯಕ್ಷರೆ, ಕರ್ನಾಟಕದ 50 ವರ್ಷಗಳ ಸಂದರ್ಭದಲ್ಲಿ ನಮ್ಮ ರಾಷ್ಟ್ರದ ಘನತೆವೆತ್ತ ರಾಷ್ಟ್ರಪತಿಗಳಾದಂಥ ಡಾ॥ ಎಪಿಜೆ ಅಬ್ದುಲ್ ಕಲಾಂರವರು ಮಾಡಿದ ಭಾಷಣದ ಬಗ್ಗೆ ಒಬ್ಬೊಬ್ಬರದ್ದು ಒಂದೊಂದು ಚಿಂತನೆ ಇರುತ್ತದೆ. ನಿನ್ನೆ ಮಾತನಾಡಿದಂಥ ಶ್ರೀ ಮಾಧುಸ್ವಾಮಿಯವರ ಕೆಲವು ಜಿಜ್ಞಾಸೆಗಳು, ಮಾನ್ಯ ವಾಟಾಳ್ ನಾಗರಾಜ್‌ರವರು ಕರ್ನಾಟಕ ಎಂದು ಹೇಳಿದರೆ, ಕೇವಲ ಕನ್ನಡದಲ್ಲೇ ಎಲ್ಲವನ್ನೂ ನಡೆಸಬೇಕೆನ್ನುವಂಥದ್ದು, ಕನ್ನಡಕ್ಕೋಸ್ಕರ ದುಡಿದಂಥವರು, ಇಂಥವರೆಲ್ಲಾ ಇದ್ದರು ಎಂದು ಹೇಳುವಂಥ ಅವರಿಬ್ಬರ ಮಾತುಗಳನ್ನು ನಾನು ಆಲಿಸಿದ್ದೇನೆ. ಯಾವುದೇ ಭಾಷೆ ಅಥವಾ ಯಾವುದೇ ರಾಜ್ಯ ಅಥವಾ ಯಾವುದೇ ದೇಶ ಪ್ರಗತಿಯಾಗಬೇಕಾದರೆ ಅದರ ಅಭಿವೃದ್ಧಿ ಬಹಳ ಮುಖ್ಯ ನನಗೊಂದು ಜ್ಞಾಪಕ ಬರುತ್ತದೆ. ಆಂಧ್ರದಲ್ಲಿ, ಮಾನ್ಯ ಎನ್‌ಟಿರಾಮರಾವ್‌ರವರು ಮುಖ್ಯ

ಮಂತ್ರಿಗಳಾಗಿದ್ದಾಗ ಅವರೊಂದು ಮಾತು ಹೇಳುತ್ತಾರೆ, ದೇಶಮಂಟಿ ಮಂಟಿಕಾದೆ ದೇಶಮಂಟಿ ಮನುಷ್ಯಲೋಯಿ' ಎಂದು, ಅಂದರೆ, ದೇಶ ಎಂದರೆ ಕೇವಲ ಮಣ್ಣೇ ಅಲ್ಲ, ದೇಶ ಎಂದರೆ ಜನಗಳ ಅಭಿವೃದ್ಧಿ, ಹೀಗೆ ದೇಶದ ಅಭಿವೃದ್ಧಿಗೆ ಆದ್ಯತೆಗಳನ್ನು ಕೊಡುವಂಥ ಕೆಲಸಗಳನ್ನು ಏನು 50 ವರ್ಷಗಳಲ್ಲಿ ನಾವು ಮಾಡಿದ್ದೇವೆ ? ಸ್ವಾತಂತ್ರ್ಯ ಬಂದ 60ನೇ ವರ್ಷಕ್ಕೆ ನಾವು ಕಾಲಿಡುತ್ತಾ ಇದ್ದೇವೆ. ಆದರೆ, ನಾವು ಸುವರ್ಣ ಕರ್ನಾಟಕ ಎಂದು 50 ವರ್ಷಗಳಲ್ಲಿ ಕರ್ನಾಟಕ ರಾಜ್ಯದ, ಕನ್ನಡದ ಒಂದು ರಾಜ್ಯದ ಏಳಿಗೆಗಾಗಿ ನಾವು ಇವತ್ತು ಏನು ನಮ್ಮ ಈ ಅಧಿಕಾರವನ್ನು ನಡೆಸಿದ್ದೇವೆ, ನಮ್ಮ ಈ ಆಡಳಿತದಲ್ಲಿ 50 ವರ್ಷಗಳಲ್ಲಿ ನಾವೇನೇನು ಮಾಡಿದ್ದೇವೆ ಅನ್ನುವಂಥದ್ದನ್ನೂ ಕೂಡ ನಾವು ನಮ್ಮ ಚಿಂತನೆಗಳಲ್ಲಿ ಪರಿಶೀಲಿಸಬೇಕಾಗುತ್ತದೆ. ಇವತ್ತು 50 ವರ್ಷಗಳಲ್ಲಿ ಕೇವಲ ಕನ್ನಡ–ಭಾಷೆ ಮಾತನಾಡಿಕೊಂಡೇ ಇದ್ದರೆ, ಆಗದು. ರಾಜ್ಯದ ಅಭಿವೃದ್ಧಿ ಕೂಡ ಬಹಳ ಪ್ರಮುಖವಾದಂಥ ವಿಷಯ. ಈ ಅಭಿವೃದ್ಧಿಗಾಗಿ ಹಿಂದೆ ಶ್ರಮಿಸಿದಂಥ ಅನೇಕ ಹಿರಿಯರ, ಒಂದು ಸಹಕಾರ, ಅವರ ಚಿಂತನೆಗಳು, ಇದರಲ್ಲಿ ಪಾಲ್ಗೊಂಡಿದ್ದರೂ ಕೂಡ ಇವತ್ತು ಈ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯ 50 ವರ್ಷಗಳಲ್ಲಿ ಎಲ್ಲಿ ಎಡವಿದೆ ಅಥವಾ ಎಷ್ಟು ಅಭಿವೃದ್ಧಿಯಾಗಿದೆ ಎಂಬುದನ್ನು ನಾವು ಈ ದಿನ ಅಳತೆಗೋಲಿನಲ್ಲಿಟ್ಟುಕೊಂಡು ಯೋಚನೆ ಮಾಡಬೇಕಾಗಿದೆ. ಡಾ। ಅಬ್ದುಲ್ ಕಲಾಂರವರ ಈ 11 ಸೂತ್ರಗಳ ಮೂಲಕ 50 ವರ್ಷಗಳಾದರೂ ಕೂಡ ನೀವು ಮಾಡಿಲ್ಲವೆನ್ನುವಂಥ ಒಂದು ಪಕ್ಷಿನೋಟ ನಮ್ಮಗಳ ಮೇಲೆ ಇವತ್ತು ಇದು ಜವಾಬ್ದಾರಿಯುತವಾಗಿದೆ ಎಂದು ನಾನಂತೂ ಚಿಂತನೆ ಮಾಡುತ್ತೇನೆ ಇವತ್ತು 50 ವರ್ಷಗಳಾದ ಮೇಲೂ ಕೂಡ ಈ ರಾಜ್ಯದಲ್ಲಿ ಇಂಥಿಂಥ 11 ಸೂತ್ರಗಳನ್ನೇನು ಅವರು ಕೊಟ್ಟಿದ್ದಾರೆ. ಈ ಸೂತ್ರಗಳನ್ನು ನೀವು ಮಾಡಿಲ್ಲ ಎಂದು ನೇರವಾಗಿ ಹೇಳದೆ, ಅದನ್ನು ಪರೋಕ್ಷವಾಗಿ ಇಂಥಿಂಥದ್ದು ಮಾಡಬೇಕು ಎನ್ನುವಂಥದ್ದರ ನಮಗೆ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಸಭೆಯಲ್ಲಿ ಬಂದು ಘನತೆವೆತ್ತ ಅವರು ಒಬ್ಬ ಮಹಾನ್ ವಿಜ್ಞಾನಿ. ಅವರ ವಿಷಯದಲ್ಲಿ ಯಾರೂ ಏನೂ ಹೆಚ್ಚಿಗೆ ಹೇಳಬೇಕಾಗಿಲ್ಲ. ಆದರೂ ಕೂಡ ನಮ್ಮ ಜವಾಬ್ದಾರಿಗಳನ್ನು ಬೆನ್ನುತಟ್ಟಿ ಎಚ್ಚರಿಕೆ ನೀಡಿದ್ದಾರೆನ್ನುವಂಥದ್ದನ್ನು ನಾವು ಮರೆಯಬಾರದು. 50 ವರ್ಷಗಳಲ್ಲಿ ಇವತ್ತು ಮೊದಲನೆಯದಾಗಿ ಜವಳಿ ಎಂದು ಹೇಳುತ್ತಾರೆ. ಇವತ್ತು ಕಾಟನ್ ಬೆಳೆಯುವಂಥ ಜನ ನಾವಿಂದು ನೆನಪಿಸಿಕೊಳ್ಳಬೇಕು. ಕಾಟನ್‌ನಲ್ಲಿ ಒಳ್ಳೊಳ್ಳೆ ಲಾಂಗ್ ಸ್ಟೇಪಲ್ ಬೆಳದಂಥ ಹತ್ತಿ ವರಲಕ್ಷ್ಮಿ ಇರಬಹುದು, ಡಿಸಿಹೆಚ್–32 ಇರಬಹುದು, ಶಾರ್ಟ್ ಸ್ಟೇಪಲ್‌ನಲ್ಲಿ ಜಯದೇವ್ ಇರಬಹುದು, ಇಂಥ ಅನೇಕ ಕಾಟನ್‌ಗಳನ್ನು ತಂದಂಥ ಒಬ್ಬ ವಿಜ್ಞಾನಿ ಖಾತರಕಿಯವರನ್ನು ಈ ರಾಜ್ಯದಲ್ಲಿ ಇಂಥ ಒಬ್ಬ ವಿಜ್ಞಾನಿಯನ್ನು ನಾವು ಮರೆಯಲಿಕ್ಕಾಗುವುದಿಲ್ಲ. ಅಂತಹ ಲಾಂಗ್ ಸ್ಟೇಪಲ್ 90 ಕೌಂಟ್ ಬರುವಂಥದ್ದು, 95 ಕೌಂಟ್ ಬರುವಂಥದ್ದು, ಏನು ಇದೆ ಅದನ್ನು ಬಿಟ್ಟುಹೋದ ಖಾತರಕಿಯವರನ್ನು ನಾವು ನೆನೆಯಬೇಕಾಗುತ್ತದೆ ಆದರೆ ಆ ಬೆಳೆಗಳನ್ನು ಬೆಳೆದಂಥ ರೈತರು ಏನಾಗುತ್ತಿದ್ದಾರೆ ? ನಾವಂತೂ ಕಾಟನ್ ಬೆಳೆದವರಲ್ಲ, ನಾನು ರೇಷ್ಮೆ ಬೆಳೆಯುವಂಥ ಜಿಲ್ಲೆಯಿಂದ ಬಂದವನು, ನಾನು ಆ ವಿಚಾರಕ್ಕೆ ಬಂದಾಗ ಅದನ್ನು ಹೇಳುತ್ತೇನೆ ಕಾಟನ್ ಬೆಳೆದಂಥ ರೈತರು ಎಪಿಎಂಸಿ ಮಾರ್ಕೆಟ್‌ಗೆ ಹೋದರೆ ಅವನು ತನ್ನ ಮಾಲನ್ನು ಅಲ್ಲಿ ಹಾಕಿ ಬಂದಸ ಮೇಲೆ ಆರು ತಿಂಗಳಾದರೂ ಕೂಡ ಅವನಿಗೆ ಹಣ ಸಂದಾಯವಾಗುವುದಿಲ್ಲ. ಯಾವ ರೈತ ರಾತ್ರಿ ಹಗಲು ದುಡಿದು ತಾನು ಬಟ್ಟೆ ಕೂಡ ಸರಿಯಾಗಿ ಹಾಕಿಕೊಳ್ಳದೆ ದುಡಿದಂಥ

ರೈತನಿಗೆ ಆ ಹತ್ತಿಯನ್ನು ಮಾರ್ಕೆಟ್‌ಗೆ ಹಾಕುವುದು, ಅಥವಾ ದಲ್ಲಾಳಿಗಳಿಗೆ ಹಾಕುವುದು, ಈ ದಲ್ಲಾಳಿಗಳಿಗೆ ಕೊಟ್ಟ ಮೇಲೆ ಅವರು ಆರು ತಿಂಗಳಾದ ಮೇಲೆ ಅವನಿಗೆ ಹಣ ಬಟವಾಡೆಯಾಗುತ್ತದೆ ಇದರ ಮೇಲೆ ನಾವು ಏನು ಕ್ರಮ ಜರುಗಿಸಿದ್ದೇವೆ ? 50 ವರ್ಷಗಳಲ್ಲಿ ಈ ಸುವರ್ಣ ಕರ್ನಾಟಕದ ಸಂಭ್ರಮದ ಸಂದರ್ಭದಲ್ಲೂ ಕೂಡ ಈ ದಂಧೆ ಮುಂದುವರಿಯುತ್ತಿದೆ, ಧಾರವಾಡ ಇರಬಹುದು, ಗದಗ್ – ಹಾವೇರಿ – ಬಿಜಾಪುರ – ರಾಯಚೂರು – ಈ ಎಲ್ಲಾ ಜಿಲ್ಲೆಗಳಲ್ಲೂ ಕೂಡ ನಾವು ಅನೇಕ ಚುನಾಯಿತ ಪ್ರತಿನಿಧಿಗಳು ಇದ್ದರೂ ಕೂಡ ಇದರ ಮೇಲೆ ಏನು ಬೆಳಕು ಚೆಲ್ಲಿದೆ ಎನ್ನತಕ್ಕಂಥದ್ದನ್ನು ನಾವು ಚಿಂತನೆ ಮಾಡಬೇಕಾಗಿದೆ. ಇತ್ತೀಚಿಗೆ ಬಯೋ ಟೆಕ್ನೋಲಜಿ ಕಾಟನ್ ಕೂಡ ಇವತ್ತು ಬರುತ್ತಿದೆ, ಧಾರವಾಡ ಯೂನಿವರ್ಸಿಟಿಯಲ್ಲಿರುವ ಖಾನ್ ಎನ್ನುವವರು ಇದನ್ನು ಮಾಡುತ್ತಿದ್ದಾರೆ. ನಿಜವಾಗಲೂ ಕೂಡ ನಾವು ಅವರನ್ನು ಪ್ರಶಂಸೆ ಮಾಡಬೇಕಾಗಿದೆ. ಇನ್ನು ಕೇವಲ ಆರು ತಿಂಗಳಲ್ಲಿ ಒಂದು ವರ್ಷದಲ್ಲಿ ಇದು ಬರಬಹುದು, ನಮ್ಮ ವ್ಯವಸಾಯ ಇಲಾಖೆಯ ಸಚಿವರು ಅಲ್ಲಿಗೆ ಹೋಗಿ ನೋಡಬೇಕು. ಆತ ಒಬ್ಬ ವಿಜ್ಞಾನಿ ಎಷ್ಟು ಚೆನ್ನಾಗಿ ಎಂದರೆ ರೋಗ ಬಾರದ ಹಾಗೆ ಇರುವಂಥ ಕಾಟನ್ ಬಿತ್ತನೆ ಬೀಜವನ್ನು ಯೂನಿವರ್ಸಿಟಿಯವರು ಕೊಡುವಂಥ ಪರಿಸ್ಥಿತಿಗೆ ನಾವು ತಲುಪಿದ್ದೇವೆ, ಅದರಲ್ಲೂ ಧಾರವಾಡ ಯೂನಿವರ್ಸಿಟಿ ಬಹಳ ಒಳ್ಳೆಯ ಕೆಲಸ ಮಾಡುತ್ತಿದೆಯೆಂದು ನಾನು ಹೇಳುತ್ತಾ ಮೊದಲನೆಯದಾಗಿ ಈ ಕಾಟನ್ ಬೆಳೆಯುವಂಥ ರೈತರಿಗೆ ಅವರು ತೆಗೆದುಕೊಂಡು ಹೋದ ಮೂರು ದಿವಸಗಳಲ್ಲಿ ಹಣ ಕೊಡತಕ್ಕಂಥ ಕೆಲಸ ಆಗಬೇಕೆಂದು ಮೊದಲನೆಯದಾಗಿ ಹೇಳುತ್ತೇನೆ. ಎರಡನೆಯದಾಗಿ, ರೇಷ್ಮೆ, ನಮ್ಮ ಜಿಲ್ಲೆ ಮೂರು ಅಂಶಗಳಿಗೆ ಬಹಳ ಫೇಮಸ್ಸು. ಮಿಲ್ಕ್, ಸಿಲ್ಕ್, ಮತ್ತು ಗೋಲ್ಡ್, ಗೋಲ್ಡ್ ಮುಚ್ಚೇ ಹೋಯಿತು, ಇನ್ನು ಇರುವುದು ನಮಗೆ ಎರಡೇ.

ಶ್ರೀ ಎನ್. ರಾಜೇಂದ್ರನ್ : ನಾಯಕರುಗಳೆಲ್ಲಾ ಸೇರಿ ಅದನ್ನು ಮುಚ್ಚಿಬಿಟ್ಟರು, ಅದನ್ನು ಮುಚ್ಚಿ ಈಗ ಅದರ ಬಗ್ಗೆ ಮಾತನಾಡುತ್ತಾರೆ.

ಶ್ರೀ ಕೆ. ಶ್ರೀನಿವಾಸಗೌಡ :– ಇರಲಿ. ನಮ್ಮದು ಬಂಗಾರ ಮುಚ್ಚಿಹೋಯಿತು, ಈಗ ಏನು ಇದ್ದರೂ ಬಂಗಾರ ತೆಗೆಯಲಿಕ್ಕೆ 10 ಸಾವಿರ ಅಡಿ ಕೆಳಗೆ ಏನು ಹೋಗಿದ್ದೆವು ಅಲ್ಲಿ ಏನಾದರೂ ಎಕ್ಸ್‌ಪೆರಿಮೆಂಟ್ ಮಾಡಲಿಕ್ಕೆ ಅಲ್ಲೊಂದು ಲ್ಯಾಬೋರೇಟರಿ ಮಾಡುವಂಥ ಅವಕಾಶಗಳು ಇವೆ, ಆದರೆ ಅಲ್ಲಿ ನೀರು ಸೇರಿಕೊಂಡಿದೆ. ಅಲ್ಲಿಗೆ ಬರುತ್ತೇನೆ. ರೇಷ್ಮೆ ಬಗ್ಗೆ ಹೇಳುವುದಾದರೆ, ಸ್ವಾತಂತ್ರ್ಯ ಬಂದು ನಾವು ಇವತ್ತು 60 ವರ್ಷಗಳಿಗೆ ಕಾಲಿಡುತ್ತಿದ್ದೇವೆ, ನಾನು ಅನೇಕ ದೇಶಗಳನ್ನು ನೋಡಿದ್ದೇನೆ, ಅದು ಇಸ್ರೇಲ್ ಇರಬಹುದು, ಜಪಾನ್ ಇರಬಹುದು, ಚೈನಾ ಇರಬಹುದು, ವ್ಯವಸಾಯಕ್ಕೆ ಒತ್ತು ಕೊಡುವಂಥ ದೇಶಗಳಲ್ಲಿ ನಾನು ಸುಮಾರು ನೂರಕ್ಕೆ ಎಂಭತ್ತೈದು ಭಾಗದಷ್ಟು ಈ ಪ್ರಪಂಚದಲ್ಲಿ ನೋಡಿದ್ದೇನೆ. ಚೈನಾ ದೇಶಕ್ಕೆ ಹೋದಾಗ ನಾನೊಬ್ಬ ರೈತನ ಮನೆಗೆ ಹೋದೆ. ರೈತನಿಗೆ ನಮ್ಮ ಭಾಷೆ ಬರುತ್ತಿರಲಿಲ್ಲ. ನನ್ನ ಜೊತೆಯಲ್ಲಿ ಒಬ್ಬ ಟ್ರಾನ್ಸ್‌ಲೇಟರ್ ಬಂದು ನಮ್ಮಿಬ್ಬರ ಸಂಭಾಷಣೆಯನ್ನು ಕೇಳಿ ಹೇಳುತ್ತಿದ್ದ. ರೇಷ್ಮೆಯ ಒಂದು ಗೂಡಿಗೆ ಎಷ್ಟು ದಾರ ಬರುತ್ತದೆಂದು ನಾನು ಅವರನ್ನು ಕೇಳಿದೆ. ಅದಕ್ಕವರು 1800 ಮೀಟರ್ ಬರುತ್ತದೆಂದು ಹೇಳಿದ. ನಮ್ಮ ರಾಜ್ಯದಲ್ಲಿ ನಾನು ಅದೇ ಜಿಲ್ಲೆಯಿಂದ ಬಂದವನು ನನಗೆ ಗೊತ್ತಿದ್ದುದು 800 ಮೀಟರ್ ಬರುತ್ತದೆ ಎಂದು 1800 ಮೀಟರ್

ಬೆಳೆಯುವಂಥ ಆ ಬಿತ್ತನೆಯನ್ನು ಇವತ್ತಿಗೂ ನಾವು ಕಂಡುಹಿಡಿದಿಲ್ಲ. ಅನೇಕ ಸಾರಿ ವಿಜ್ಞಾನಿಗಳು, ಸಂಶೋಧಕರು, ಇದರ ಮೇಲೆ ಬೆಳಕು ಚೆಲ್ಲುವಂಥ ಕೆಲಸ ಮಾಡಿಲ್ಲ. ಜವಳಿ ಇಷ್ಟೆಲ್ಲಾ ಬೆಳೆದು ಬರಬೇಕಾದರೆ, ಕಾಟನ್‌ನಲ್ಲಿ ಸ್ಪಿನ್ನಿಂಗ್ ಮಿಲ್‌ಗಳು ಇವೆಲ್ಲಾ ಇವತ್ತು ಉಳಿಯಬೇಕಾಗಿತ್ತು. ಇವುಗಳು ನಶಿಸಿ ಹೋಗಬೇಕಾದರೆ ಇವೆಲ್ಲಾ ಕಾರಣಗಳು. ಇವತ್ತು ನಮ್ಮಲ್ಲಿ ರೇಷ್ಮೆ ಏನು ಬೆಳೆಯುತ್ತಿದ್ದೇವೆ, ಆ ರೇಷ್ಮೆಗೆ ಇತ್ತೀಚಿಗೆ ಬೆಲೆ ಚೆನ್ನಾಗಿದೆ, ನಾನೇನೂ ಅದರ ಬಗ್ಗೆ ಹೇಳುತ್ತಿಲ್ಲ. ಇವತ್ತಿಗೂ ಕೂಡ ಒಂದು ಗೂಡಿಗೆ 1800 ಮೀಟರ್ ಬರುವಂಥ ಬಿತ್ತನೆ ಬೀಜವನ್ನು ಕೊಡುವಂಥ ಶಕ್ತಿ ನಮ್ಮ ರಾಜ್ಯದಲ್ಲಿ 60 ವರ್ಷವಾದರೂ ಬಂದಿಲ್ಲ. 50 ವರ್ಷ ಈ ಸುವರ್ಣ ಕರ್ನಾಟಕದಲ್ಲಿ ನಾವೇನು ಕನ್ನಡವನ್ನೇ ಮಾತನಾಡಿಕೊಂಡು ನಮ್ಮ ಭಾಷೆ ಪ್ರಜ್ವಲಿಸುವಂತೆ ಮಾಡಿದರೂ ಕೂಡ ರೈತನಿಗೆ ಸಿಕ್ಕುವುದು ಏನೂ ಇಲ್ಲ. ರೈತನಿಗೆ ಒಂದು ಗೂಡಿಗೆ 1800 ಮೀಟರ್ ದಾರ ಬರುವಂಥ ಬಿತ್ತನೆ ಬೀಜವನ್ನು ಕೊಡುವಂಥ ಶಕ್ತಿ ಇವತ್ತಿಗೂ ಕೂಡ, ಈ ರಾಜ್ಯದಲ್ಲಿ ಸಂಶೋಧಕರುಗಳು ಇರಬಹುದು, ಅಥವಾ ಅಗ್ರಿಕಲ್ಚರ್ ಯೂನಿವರ್ಸಿಟಿಗಳಿರಬಹುದು, ಇವತ್ತಿಗೂ ಕೂಡ ಇದರ ಮೇಲೆ ಬೆಳಕು ಚೆಲ್ಲುವಂಥ ಕೆಲಸ ಆಗಿಲ್ಲ. ಇದನ್ನು ನಾವು ಯೋಚಿಸಬೇಕಾಗಿದೆ. ಇವತ್ತು ಅನೇಕ ಸಹಕಾರಿ ಸ್ಪಿನ್ನಿಂಗ್ ಮಿಲ್‌ಗಳು ಮುಚ್ಚಿವೆ. ನನಗೆ ತಿಳಿದ ಮಟ್ಟಿಗೆ, ಗದಗ್ ಬಿಟ್ಟರೆ ಇನ್ನೆಲ್ಲಿಯೂ ಕೂಡ ನಮ್ಮ ರಾಜ್ಯದಲ್ಲಿ ಸ್ಪಿನ್ನಿಂಗ್ ಮಿಲ್ಸ್ ನಡೆಯುತ್ತಿಲ್ಲ ಇವತ್ತು ಈಚಲಕರಂಜಿಯಲ್ಲಿ ಅಂದರೆ ನಮ್ಮ ಬಾರ್ಡರ್‌ನಲ್ಲಿರುವ ಮಹಾರಾಷ್ಟ್ರದಲ್ಲಿ ಅನೇಕ ಈ ಸ್ಪಿನ್ನಿಂಗ್ ಮಿಲ್‌ಗಳು ಬಹಳ ಚೆನ್ನಾಗಿ ನಡೆಯುತ್ತಿವೆ ಅದಕ್ಕೆ ಸದೃಢವಾದ ರಾಜಕೀಯ ಇಚ್ಛಾಶಕ್ತಿಯಿರುವುದರಿಂದ ಅಲ್ಲಿ ಮಹಾರಾಷ್ಟ್ರದಲ್ಲಿ ಸ್ಪಿನ್ನಿಂಗ್ ಮಿಲ್‌ಗಳು ನಡೆಯುತ್ತಿವೆ, ಆದರೆ ನಮ್ಮಲ್ಲಿ ಹಾಳಾಗಿವೆ ಎನ್ನುವಂಥದ್ದನ್ನು ಕೂಡ ಹೇಳಬೇಕಾಗಿದೆ. ಜವಳಿಗೆ ಅದರಲ್ಲೂ ಬಹಳ ಬಡವರು, ಬಟ್ಟೆ ನೇಯುವವರು, ಇಂಥ ಜನ ಇನ್‌ವಾಲ್ವ್‌ವಾಗುವುದು ಸಾಮಾನ್ಯ, ಇವತ್ತು ರೇಷ್ಮೆಯನ್ನು ಬೆಳೆಯುವಂಥವರ ಬಗ್ಗೆ ಹೇಳುವುದಾದರೆ, ರೇಷ್ಮೆ ಗೂಡನ್ನು ರೈತರು ಬೆಳೆಯುತ್ತಾರೆ, ಆದರೆ ಅವರಿಗೆ ಆ ರೇಷ್ಮೆಯನ್ನು ತೆಗೆದುಕೊಳ್ಳುವಂಥ ವ್ಯಾಪಾರಸ್ಥರು ರೀಲರ್ಸ್ ಇವತ್ತು ಸರಿಯಾಗಿಲ್ಲ. ಕೋಲಾರದಲ್ಲಿ ಅನೇಕ ರೀಲರ್ಸ್ ಇವತ್ತು ವ್ಯಾಪಾರ ಮಳಿಗೆಗಳನ್ನು ಮುಚ್ಚಿದ್ದಾರೆ. ಇವತ್ತು ನಾವು ಒಳ್ಳೆಯದನ್ನು ನೆನಸಿಕೊಳ್ಳಬೇಕು. ಮಾನ್ಯ ಜಾಲಪ್ಪನವರು ರಾಷ್ಟ್ರದಲ್ಲಿ ಜವಳಿ ಮಂತ್ರಿಗಳಾಗಿದ್ದಾಗ ಅವರು ಒಳ್ಳೆಯ ಕಾರ್ಯಕ್ರಮವನ್ನು ತಂದರು. ಮಾನ್ಯ ಈಶ್ವರಪ್ಪನವರು ಅಧ್ಯಕ್ಷರಾಗಿದ್ದರು. ನಮ್ಮ ರೇಷ್ಮೆಗೆ ಒಂದು ಟೆಕ್ನಾಲಜಿಯನ್ನು ಕೊಟ್ಟು ಅದಕ್ಕೆ ಕೇವಲ ಒಂದು ಲಕ್ಷ ರೂಪಾಯಿಗಳ ಬಂಡವಾಳ ಹಾಕಿದರೆ ಸುಮಾರು ಎಂಟು ಲಕ್ಷ ರೂಪಾಯಿಗಳವರೆಗೆ ಲೋನ್ ಅನ್ನು ಕೊಡುವಂಥ ಪದ್ಧತಿಗಳನ್ನು ತಂದರು. ಆದರೆ ಈಗ ಅದನ್ನು ಮತ್ತೆ ಹಿಂದಕ್ಕೆ ತೆಗೆದುಕೊಂಡು ಅದಕ್ಕೆ 50 ಪರ್ಸೆಂಟ್ ಕೊಡಬೇಕು ಎನ್ನುವಂಥದ್ದನ್ನು ತರುತ್ತಿದ್ದಾರೆ, ಇದರ ಕಡೆಗೆ ಸರ್ಕಾರ ಗಮನ ಕೊಡಬೇಕೆಂದು ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ.

ಅಧ್ಯಕ್ಷರು :– ಶ್ರೀನಿವಾಸಗೌಡರವರೇ, ಈಗ ಮಾನ್ಯ ರಾಷ್ಟ್ರಪತಿಗಳು ಏನು ಹೇಳಿದ್ದಾರೆಂದರೆ, ಪಂಜಾಬಿನಲ್ಲಿ 900 ಕೆ.ಜಿ. ಹತ್ತಿ ಬೆಳೆಯುತ್ತಾರೆ. ಇಲ್ಲಿ ಆ್ಯವರೇಜ್ 400, 450 ಕೆ.ಜಿ. ಎನ್ನುವುದರ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದಾರೆ. ನೀವು ಕೃಷಿ ಸಚಿವರಾಗಿದ್ದವರು. ಅದರ ಬಗ್ಗೆ ಸ್ವಲ್ಪ ಬೆಳಕು ಚೆಲ್ಲಿ.

ಶ್ರೀ ಕೆ. ಶ್ರೀನಿವಾಸಗೌಡ :– ಅದರ ಬಗ್ಗೆ ಮಾನ್ಯ ರಾಷ್ಟ್ರಪತಿಯವರಿಗೆ ಮಾಹಿತಿ ಕೊಟ್ಟವನೂ ಕೂಡ ನಾನೇ. ಏಕೆಂದರೆ, ನನ್ನನ್ನು ಮಾನ್ಯ ಮುಖ್ಯಮಂತ್ರಿಗಳು ಅವರ ಡ್ಯೂಟಿಗೆ ಮಂತ್ರಿಯಾಗಿ ಹಾಕಿದ್ದರು. ಅವರು ನನ್ನನ್ನೇ ಕೇಳಿದರು. ನಿಮ್ಮಲ್ಲಿ ಆ್ಯವರೇಜ್ ಎಷ್ಟು ಯೀಲ್ಡ್ ಬರುತ್ತದೆ ಎಂದು ನಾನು 3 ರಿಂದ 4 ಕ್ವಿಂಟಾಲ್ ರೈನ್‌ಬೆಡ್‌ನಲ್ಲಿ ಬರುತ್ತದೆ, ಬೇರೆ ಕಡೆ 12 ಕ್ವಿಂಟಾಲ್ ಬರುತ್ತದೆ, ನೀರಾವರಿಯಲ್ಲಿ 24–25 ಕ್ವಿಂಟಾಲ್ ಬರುತ್ತದೆಂದು ಹೇಳಿದೆ. ಪಂಜಾಬಿನಲ್ಲಿ ನೀರಾವರಿ ಬಹಳ ಸದೃಢವಾಗಿದೆ. ಮಳೆ ಸರಿಯಾದಂಥ ಸಮಯಕ್ಕೆ ಬರುತ್ತದೆ. ಆದರೆ ನಮ್ಮಲ್ಲಿ ಆ ಪರಿಸ್ಥಿತಿ ಇಲ್ಲ. ನಮ್ಮಲ್ಲಿ ನೀರಾವರಿಯಿಂದ ಬೆಳೆಯುವಂಥದ್ದಕ್ಕೆ ಹೋದ ವರ್ಷ ಮತ್ತು ಅದರ ಹೋದ ವರ್ಷ ಬಿಟ್ಟರೆ ನಾಲ್ಕು ವರ್ಷಗಳ ಕಾಲ ಪಟ್ಟಂಥ ಈ ರೈತನ ಪಾಡು ಅಷ್ಟು ಇಷ್ಟು ಅಲ್ಲ. ಹೀಗಾಗಿ ಯೀಲ್ಡ್‌ಗಳು ನಮ್ಮಲ್ಲಿ ಏರುಪೇರಾಗಳಾಗುತ್ತಿವೆ. ಅದರಲ್ಲಿ ಸ್ವಲ್ಪ ಕೆಲವರಿಗೆ ಈ ಬಿತ್ತನೆ ಬೀಜದ ಕಂಪನಿಗಳಿಂದ ಕೂಡ ಕೆಲವು ಜಾಗದಲ್ಲಿ ಮೋಸ ಆಗಿದೆ. ಅದರ ಮೇಲೆ ನಾನೇ ಕೃಷಿಮಂತ್ರಿಯಾಗಿದ್ದಾಗ ಬೆಳಕು ಚೆಲ್ಲಿ ಅವರ ಮೇಲೆ ಕಠಿಣವಾದ ಕ್ರಮಗಳನ್ನು ಕೂಡ ಜರುಗಿಸಿದ್ದೆ. ಕೆಲವು ಜಾಗಗಳಲ್ಲಿ ಅವರಿಗೆ ಹಣವನ್ನು ಕೊಡಿಸುವ ಕೆಲಸವನ್ನು ಮಾಡಿಸಿದ್ದೆ. ಸುಮಾರು ಎರಡು ಕೋಟಿ ಎಂಭತ್ತು ಲಕ್ಷ ರೂಪಾಯಿಗಳನ್ನು ಹಾವೇರಿ ಜಿಲ್ಲೆಯಲ್ಲಿ ಕೊಡಿಸಿದ್ದೆ. ನಮ್ಮ ಮಾನ್ಯ ಶಾಸಕರುಗಳೂ ಕೂಡ ಅದಕ್ಕೆ ನನ್ನ ಜೊತೆಯಲ್ಲಿ ಬಂದು ಬೆಳಕನ್ನು ಚೆಲ್ಲಿದ್ದರಿಂದ ಮೊಟ್ಟಮೊದಲನೇ ಸಾರಿ ಇಡೀ ದೇಶದಲ್ಲಿ ಏನಾದರೂ ಬಿತ್ತನೆ ಬೀಜದಿಂದ ಏನು ಬೆಳೆ ನಾಶವಾಗಿದೆ ಅವರಿಗೆ ಹಣ ಕೊಡಿಸಿರುವಂಥ ಉದಾಹರಣೆ ಇದ್ದರೆ ಅದು ಕರ್ನಾಟಕ, ಅದು ಧರ್ಮಸಿಂಗ್‌ರವರ ನೇತೃತ್ವದ ಸರ್ಕಾರದಲ್ಲಿ. ಅವತ್ತು ಎರಡು ಕೋಟಿ ಎಂಭತ್ತು ಲಕ್ಷ ರೂಪಾಯಿಗಳನ್ನು ಕೊಡಿಸಿದ್ದೇನೆ. ಇದು ಡಾ॥ ಅಬ್ದುಲ್ ಕಲಾಂರವರು ಹೇಳಿದ್ದಕ್ಕೆ ಆ ಉತ್ತರವನ್ನೂ ಕೂಡ ಈ ಸಮಯದಲ್ಲಿ ಹೇಳುತ್ತಾ ಈ ರೇಷ್ಮೆಗೆ . .

ಶ್ರೀ ಡಿ.ಆರ್. ಪಾಟೀಲ್ : ಈ ಕಾಟನ್ ಪ್ರೊಡಕ್ಟಿವಿಟಿ ಪ್ರಶ್ನೆ ಏನು ಬರುತ್ತದೆ ಆ ಅವರೇಜ್ ಪ್ರೊಡಕ್ಟಿವಿಟಿ ಮಾಡುವಾಗ ರೈನ್‌ಬೆಡ್ ತೆಗೆದುಕೊಳ್ಳುತ್ತಾರೆ, ಇರಿಗೇಷನ್ ತೆಗೆದುಕೊಳ್ಳುತ್ತಾರೆ. ಹೀಗಾಗಿ ಕರ್ನಾಟಕದ ಪ್ರೊಡಕ್ಟಿವಿಟಿ ಕಡಿಮೆ ಎಂದು ಲೆಕ್ಕದಲ್ಲಿ ಬರುತ್ತದೆ, ಇಲ್ಲದಿದ್ದರೆ, ನಮ್ಮ ಫಾರ್ಮರ್ಸ್ ಏನು ಪಂಜಾಬ್ ಫಾರ್ಮರ್ಸ್‌ಗಿಂತ ಎಡವಿಲ್ಲ. ಅಲ್ಲಿ ನೀರಾವರಿ ಸೌಲಭ್ಯ ಬಹಳ ಇದೆ, ನಮ್ಮಲ್ಲಿ ನೀರಾವರಿ ಸೌಲಭ್ಯ ಕಡಿಮೆ ಇದೆ. ಮತ್ತೆ ಹೆಚ್ಚು ನೀರಾವರಿ ಸೌಲಭ್ಯ ಇದ್ದಲ್ಲಿ ಕಾಟನ್ ಬೆಳೆಯುತ್ತಾರೆ. ಹೀಗಾಗಿ ಅವರ ಪ್ರೊಡಕ್ಟಿವಿಟಿ ಹೆಚ್ಚಿದೆ. ನಮ್ಮ ರೈತರು ಎಡ ಇದ್ದಾರೆ ಎನ್ನುವ ಭಾವನೆ ಬರಬಾರದು.

ಶ್ರೀ ಕೆ. ಶ್ರೀನಿವಾಸಗೌಡ :– ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ಪಂಜಾಬ್ ರಾಜ್ಯದಲ್ಲಿ ಬೆಳೆಯತಕ್ಕಂಥ ಹತ್ತಿಗೆ ವಿದೇಶಗಳಲ್ಲಿ ಬಹಳ ಬೇಡಿಕೆ ಇದೆ. ನಮ್ಮಲ್ಲಿರುವ ಜೈದರ್ ತಳಿ ಬಿಟ್ಟರೆ ಬೇರೆ ಲಾಂಗ್ ಸ್ಟೇಪಲ್ ತಳಿಗೆ ಬೇರೆ ದೇಶಗಳಲ್ಲಿ ಅಷ್ಟೊಂದು ಬೆಲೆ ಇಲ್ಲ. ಆದ್ದರಿಂದ, ಇವತ್ತಿನದಿವಸ ಪಂಜಾಬ್ ಕಾಟನ್ ಬೇರೆ ದೇಶಗಳಿಗೆ ಎಕ್ಸ್‌ಪೋರ್ಟ್ ಆಗುತ್ತಿದೆ. ಮತ್ತೆ ಈ ಒಂದು ಕಾರಣದಿಂದ ಪಂಜಾಬ್ ಕಾಟನ್‌ಗೂ ನಮ್ಮ ಕಾಟನ್‌ಗೂ ವ್ಯತ್ಯಾಸ ಇದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಇಂಧನದ ಬಗ್ಗೆ ಹೇಳುವುದಾದರೆ, ಈ ವರ್ಷದಲ್ಲಿ ಅಥವಾ ಇವರ ಟರ್ಮ್‌ನಲ್ಲಿ

೩ ಸಾವಿರ ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡುತ್ತೇವೆಂದು ಹೇಳಿದ್ದಾರೆ. ಇದು ನಿಜವಾಗಿಯೂ ಕೂಡ ಬಹಳ ಸಂತೋಷದ ವಿಷಯ. ಮಾನ್ಯ ಜೆ.ಹೆಚ್.ಪಟೇಲ್‌ರವರು ಇದ್ದಂಥ ಸಂದರ್ಭದಲ್ಲಿ ೮೦೦ ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡಲಾಗಿತ್ತು. ಮತ್ತೆ ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿಯೂ ಕೂಡ ವಿದ್ಯುತ್ ಉತ್ಪಾದನೆ ಹೆಚ್ಚು ಮಾಡುವಂಥ ಎಲ್ಲಾ ಕೆಲಸಗಳನ್ನು ನಾವು ಮಾಡಿದ್ದೇವೆ. ಆದರೆ, ಇವತ್ತಿಗೂ ಕೂಡ ಸರಿಯಾಗಿ ಕರೆಂಟ್ ಕೊಡುವುದಕ್ಕೆ ಆಗಿಲ್ಲ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ವರ್ಷ ಕುಡಿಯುವ ನೀರಿಗೋಸ್ಕರ ಕೋಲಾರ ಜಿಲ್ಲೆಗೆ ೩೨ ಕೋಟಿ ರೂಪಾಯಿ ಖರ್ಚಾಯಿತು. ಆದರೆ, ಈ ಸಾರಿ ಅಲ್ಲಿರತಕ್ಕಂಥ ಕೆರೆಗಳೆಲ್ಲವೂ ತುಂಬಿವೆ. ನಾನು ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ಒಂದು ಆದೇಶ ಕೊಟ್ಟೆ ಅದೇನೆಂದರೆ ಮುಳುಬಾಗಿಲು ಬಿಟ್ಟು ಇಲ್ಲಿರತಕ್ಕಂಥ ಎಲ್ಲಾ ಕೆರೆಗಳಲ್ಲಿ ನೀರು ನಿಲ್ಲಿಸಬೇಕೆಂದು ಹೇಳಿದ್ದೆ. ಮುಳುಬಾಗಿಲು ತಾಲ್ಲೂಕಿನಲ್ಲಿರುವ ಕೆರೆಗಳಲ್ಲಿ ನೀರು ನಿಲ್ಲಿಸಲು ಅಲ್ಲಿನ ಮಂತ್ರಿಗಳು ಒಪ್ಪಲಿಲ್ಲ. ಇನ್ನು ೮–೧೦ ದಿನಗಳಲ್ಲಿ ಮುಳುಬಾಗಿಲು ತಾಲ್ಲೂಕಿನಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಶುರುವಾಗುತ್ತದೆ. ಇಡೀ ಜಿಲ್ಲೆಯಲ್ಲಿ ಸುಮಾರು ಸಾವಿರ ಅಡಿ ಕೆಳಕ್ಕೆ ಹೋಗಿದ್ದ ಅಂತರ್ಜಲ ಇವತ್ತಿನದಿವಸ ೧೫೦ ರಿಂದ ೨೦೦ ಅಡಿಗೆ ಬಂದಿದೆ. ಇದಕ್ಕೆ ಪೊಲಿಟಿಕಲ್ ವಿಲ್ ಪವರ್ ಕೂಡ ಬೇಕಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಸುಮಾರು ೧೦೭೦ ವರ್ಷಗಳ ಹಿಂದೆಯೇ ನೀರನ್ನು ಶೇಖರಣೆ ಮಾಡುವುದಕ್ಕೋಸ್ಕರ ಕೆರೆಗಳನ್ನು ನಿರ್ಮಾಣ ಮಾಡಿದ್ದಾರೆ. ಇವತ್ತಿನದಿವಸ ನಾವು ಇಸ್ರೇಲ್ ದೇಶಕ್ಕೆ ಹೋಗಿ ಕಲಿಯಬೇಕಾದದು ಏನೂ ಇಲ್ಲ. ನಮ್ಮ ಪೂರ್ವಿಕರು ನಮಗಿಂತ ಬುದ್ಧಿವಂತರು. 1070 ವರ್ಷಗಳ ಹಿಂದೆಯೇ ಕೋಲಾರ ಜಿಲ್ಲೆಯಲ್ಲಿ ಕೆರೆಗಳನ್ನು ಕಟ್ಟಿದ್ದಾರೆ. 1070 ವರ್ಷಗಳ ಹಿಂದೆಯೇ ನಮ್ಮ ಪೂರ್ವಿಕರು ಮಳೆಯ ನೀರಿನ ಕೊಯ್ಲು ಪದ್ಧತಿಯನ್ನು ಜಾರಿಗೆ ತಂದಿರತಕ್ಕಂಥ ವಿಷಯ ಅಲ್ಲಿರತಕ್ಕಂಥ ಶಿಲೆಗಳ ಮೇಲೆ ಬರೆದಿರತಕ್ಕಂಥದ್ದರಿಂದ ತಿಳಿದು ಬರುತ್ತದೆ. ಮತ್ತೆ ಇಂಥ ವರ್ಷಗಳಲ್ಲಿ ಈ ಕೆರೆಗಳನ್ನು ಕಟ್ಟಲಾಗಿದೆ ಎಂದೂ ಸಹ ಅದರ ಮೇಲೆ ಕೆತ್ತಿದ್ದಾರೆ. ಆದ್ದರಿಂದ, 1070 ವರ್ಷಗಳ ಹಿಂದೆಯೇ ಮಳೆಯ ನೀರಿನ ಕೊಯ್ಲು ಪದ್ಧತಿಗಳನ್ನು ಅಳವಡಿಸಬೇಕಾದರೆ ಆಗಿನ ರೈತರು, ಪೂರ್ವಿಕರನ್ನು ನಾವು ಸ್ಮರಿಸಿಕೊಳ್ಳಲೇಬೇಕಾಗುತ್ತದೆ. ಮಳೆ ನೀರಿನ ಕೊಯ್ಲಿಗೆ ಡಾ॥ ಅಬ್ದುಲ್ ಕಲಾಂರವರು ತಮ್ಮ ಭಾಷಣದಲ್ಲಿ ಹೆಚ್ಚಿನ ಒತ್ತನ್ನು ಕೊಟ್ಟಿದ್ದಾರೆ. ಹಾಗೆಯೇ ಮಳೆಯ ನೀರಿನ ಕೊಯ್ಲಿಗೆ ಮತ್ತು ಜಲಸಂರಕ್ಷಣೆ ಹಾಗೂ ವಾಟರ್ ಮ್ಯಾನೇಜ್‌ಮೆಂಟ್ ಬಗ್ಗೆ ಸಹ ಹೇಳಿದ್ದಾರೆ. ನಾವು ಮಾನ್ಯ ಎಸ್.ಎಂ. ಕೃಷ್ಣರವರನ್ನು ನೆನಪಿಸಿಕೊಳ್ಳಲೇಬೇಕಾಗುತ್ತದೆ. ಏಕೆಂದರೆ, ಕೋಲಾರ ಜಿಲ್ಲೆಯೊಂದರಲ್ಲಿಯೇ ಸುಮಾರು 1024 ಕೆರೆಗಳ ಅಭಿವೃದ್ಧಿ ಮಾಡುವುದಕ್ಕೆ ಮತ್ತು ರಾಜ್ಯದಲ್ಲಿರುವ ಇತರೆ ಕೆರೆಗಳನ್ನು ಅಭಿವೃದ್ಧಿ ಮಾಡುವುದಕ್ಕೆ ವಿಶ್ವಬ್ಯಾಂಕ್‌ನಿಂದ ೬೭೩ ಕೋಟಿ ರೂಪಾಯಿಗಳನ್ನು ತಂದು ಕೊಟ್ಟಿದ್ದಾರೆ. ಇದರಿಂದ ಈ ಒಂದು ಕೆರೆಗಳಿಗೆ ಆದ್ಯತೆ ಕೊಟ್ಟು ಅದರಲ್ಲಿರತಕ್ಕಂಥ ಹೂಳು ತೆಗೆಯುವುದಕ್ಕೆ ಮತ್ತು ಕಟ್ಟೆಯನ್ನು ಕಟ್ಟುವುದಕ್ಕೆ ಆದ್ಯತೆ ಕೊಟ್ಟಿರತಕ್ಕಂಥ ಆ ಒಂದು ಒಳ್ಳೆಯ ಕೆಲಸಗಳ ಬಗ್ಗೆ ನಿನ್ನೆ ದಿವಸ ನಮ್ಮ ನಾಯಕರಾಗಿರತಕ್ಕಂಥ ಮಾನ್ಯ ಧರ್ಮಸಿಂಗ್‌ರವರು ಹೇಳಿದರು. ಮತ್ತೆ ಈ ಒಂದು ಕೆಲಸ ಆಗುವಂಥದ್ದು ಇವತ್ತಿನದಿವಸ ಮತ್ತೆ ಆಗಬೇಕು. ಮಳೆ ನೀರು ಕೊಯ್ಲು ಪದ್ಧತಿ ಕೃಷಿ ಇಲಾಖೆಯ ಮೂಲಕ ಅನೇಕ ಕಡೆ ಚೆಕ್ ಡ್ಯಾಮ್‌ಗಳನ್ನು ನಿರ್ಮಾಣ ಮಾಡಿ ನೀರನ್ನು ಇಂಗಿಸುವಂಥ ಪದ್ಧತಿಗಳನ್ನು ಇವತ್ತಿನದಿವಸ ನಮ್ಮವರೇ ಬಹಳಷ್ಟು ಮಾಡುವುದಕ್ಕೆ ಪ್ರಾರಂಭ

ಮಾಡಿದ್ದಾರೆ. ಇದನ್ನು ನಾವು ಇಸ್ರೇಲ್ ದೇಶಕ್ಕೆ ಹೋಗಿ ನೋಡಿಕೊಂಡು ಬರಬೇಕಾಗಿಲ್ಲ. ಕೋಲಾರ ಜಿಲ್ಲೆಯ ಕೆರೆಯಲ್ಲಿ ನೀರನ್ನು ನಿಲ್ಲಿಸಿದ್ದರಿಂದ ನಮ್ಮ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ತೊಂದರೆ ಆಗಿಲ್ಲ. ನಾನು ಈಗಾಗಲೇ ಹೇಳಿದ ಹಾಗೆ ಮುಳುಬಾಗಿಲು ಒಂದು ತಾಲ್ಲೂಕು ಬಿಟ್ಟರೆ ನಮ್ಮ ಜಿಲ್ಲೆಯ ಬೇರೆ ಕಡೆ ಕುಡಿಯುವ ನೀರಿಗೆ ತೊಂದರೆ ಇಲ್ಲ. ಆದ್ದರಿಂದ, ಇದನ್ನು ನಮ್ಮ ಪೊಲಿಟಿಕಲ್ ವಿಲ್ ಪವರ್ ಆಗಿ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತಿನದಿವಸ ರೈತರಿಂದಲೇ ಸ್ಲೂಯಿಸ್‌ಗೆ ಕಾಂಕ್ರೀಟ್ ಹಾಕಿಸಿ ನೀರನ್ನು ನಿಲ್ಲಿಸುವಂಥ ಪದ್ಧತಿಯನ್ನು ನಾವು ಮಾಡಿದ್ದೇವೆ. ಆದ್ದರಿಂದ, ಇವತ್ತಿನದಿವಸ ಕೋಲಾರ ಜಿಲ್ಲೆಯ ಎಲ್ಲಾ ಕೆರೆಗಳಲ್ಲಿ ನೀರು ತುಂಬಿದೆ. ಇದನ್ನು ನೋಡಿ ನಮಗೆ ಸಂತೋಷವಾಗುತ್ತದೆ. ಆದರೆ, ಇವತ್ತಿನದಿವಸ ನಮಗೆ ಕರೆಂಟ್‌ಗೆ ಬರ ಬಂದಿದೆ. ೬ ಗಂಟೆಯವರೆಗೆ ಕರೆಂಟ್ ಕೊಡುತ್ತೇವೆಂದು ಹೇಳುತ್ತಾರೆ, ಆದರೆ ಕೊಡುವ ನಾಲ್ಕು ಗಂಟೆಯಲ್ಲಿ ೪೦ ಸಾರಿ ಕರೆಂಟ್ ಹೋಗುತ್ತದೆ. ಇದು ಹೇಗೆ ಆಗಿದೆ ಎಂದರೆ ಕಣ್ಣು ಮುಚ್ಚಿ ಕಣ್ಣು ತೆರೆಯುವುದರೊಳಗೆ ಮತ್ತೆ ಕರೆಂಟ್ ಹೋಗುತ್ತಿದೆ. ಇವತ್ತಿನದಿವಸ ನಮ್ಮ ಜಿಲ್ಲೆಯಲ್ಲಿ ರೈತರು ಬೇಕಾದಷ್ಟು ಟೊಮ್ಯಾಟೊ ಬೆಳೆದು ಬೀದಿಗಳಿಗೆ ಸುರಿಯುತ್ತಿದ್ದಾರೆ. ಇವತ್ತಿನದಿವಸ ಅನೇಕ ತೋಟಗಾರಿಕೆ ಬೆಳೆಗಳಿಗೂ ಕೂಡ ಇದೇ ಪರಿಸ್ಥಿತಿ ಬಂದಿದೆ. ಇವತ್ತಿನದಿವಸ ನಾವು ಒಂದು ಕಡೆ ನೀರನ್ನು ನಿಲ್ಲಿಸಿ ವಾಟರ್ ಟೇಬಲ್‌ನ್ನು ಮೇಲಕ್ಕೆ ತಂದಿದ್ದೇವೆ. ಆದರೆ ಕರೆಂಟ್‌ನ್ನು ಸರಿಯಾಗಿ ಕೊಡುತ್ತಿಲ್ಲ. ಆದ್ದರಿಂದ, ಇದಕ್ಕೆ ಸರ್ಕಾರ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗುತ್ತದೆಂದು ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬಯಲುಸೀಮೆಯವರು ಕುಡಿಯುವ ನೀರಿಗೆ ನಾಲ್ಕು ವರ್ಷಗಳಿಂದ ಬಹಳಷ್ಟು ತೊಂದರೆಗಳನ್ನು ಅನುಭವಿಸಿದ್ದೇವೆ. ಗುಜರಾತ್ ರಾಜ್ಯದಲ್ಲಿರುವ ನರ್ಮದಾ ನದಿಯಿಂದ ಸುಮಾರು ೭೮೦ ಕಿ.ಮೀ ದೂರದಲ್ಲಿರುವ ಗಾಂಧಿಧಾಮ್‌ಗೆ ಕುಡಿಯುವ ನೀರನ್ನು ತೆಗೆದುಕೊಂಡು ಹೋಗಿದ್ದಾರೆ. ಸರ್ಕಾರ ಇದರ ಬಗ್ಗೆ ಗಮನ ಹರಿಸಬೇಕು. ಇದನ್ನು ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ನರ್ಮದಾ ನದಿಯಿಂದ ಸುಮಾರು ೭೮೦ ಕಿ.ಮೀ ದೂರದವರೆಗೆ ಸರ್ಫೇಸ್ ವಾಟರ್‌ನ್ನು ಕುಡಿಯುವ ನೀರಿನ ಉದ್ದೇಶಕ್ಕೋಸ್ಕರ ಪಟ್ಟಣಗಳಿಗೆ ಮತ್ತು ಹಳ್ಳಿಗಳಿಗೆ ತೆಗೆದುಕೊಂಡು ಹೋಗುತ್ತಿದ್ದಾರೆ. ಆದರೆ, ಇವತ್ತಿನದಿವಸ ನಮ್ಮಲ್ಲಿ ಅನೇಕ ಡ್ಯಾಮ್‌ಗಳಿವೆ. ಅಂದರೆ, ನಮ್ಮಲ್ಲಿರುವ ಕೆಆರ್‌ಎಸ್ ಅಥವಾ ಕೃಷ್ಣಾ ನದಿಯ ಅನೇಕ ಡ್ಯಾಮ್‌ಗಳು ಇದ್ದರೂ ಕೂಡ ಬಯಲು ಸೀಮೆಯ ಸುಮಾರು 70 ತಾಲ್ಲೂಕುಗಳಲ್ಲಿ ಬರ ಬಂದರೆ ಕುಡಿಯುವ ನೀರಿನ ತೊಂದರೆ ಬಹಳಷ್ಟು ಆಗುತ್ತದೆ. ಆದ್ದರಿಂದ, ಇದಕ್ಕೆ ಹೆಚ್ಚಿನ ಆದ್ಯತೆ ಕೊಡತಕ್ಕಂಥ ಕೆಲಸ ಆಗಬೇಕು. ಬಾಗೇಪಲ್ಲಿ ತಾಲ್ಲೂಕಿನಲ್ಲಿ ಫ್ಲೋರೈಡ್ ಅಂಶ ನೀರಿನಲ್ಲಿರುವುದರಿಂದ ಕುಡಿಯುವ ನೀರಿಗೆ ಬಹಳಷ್ಟು ಕಷ್ಟವಾಗಿದೆ. ಆದ್ದರಿಂದ, ಇವುಗಳ ಬಗ್ಗೆ ಯೋಚನೆ ಮಾಡತಕ್ಕಂಥದ್ದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕಾಗುತ್ತದೆ. ಇದರ ಬಗ್ಗೆ ಬೆಳಕು ಚೆಲ್ಲುವಂಥ ಒಳ್ಳೆಯ ಕೆಲಸವನ್ನು ಡಾ॥ ಅಬ್ದುಲ್ ಕಲಾಂರವರು ಮಾಡಿದ್ದಾರೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನದಿವಸ ಕೋಲಾರ ಜಿಲ್ಲೆ ಬಿಟ್ಟರೆ ಬೆಳಗಾಂ ಜಿಲ್ಲೆಯಲ್ಲಿ ಬೋರ್‌ವೆಲ್‌ಗಳ ಸಂಖ್ಯೆ ಜಾಸ್ತಿ ಇದೆ. ರೈನ್ ವಾಟರ್ ಹಾರ್ವೆಸ್ಟ್ ಬಗ್ಗೆ ಹೇಳುವುದಾದರೆ, ಸುಮಾರು ನಾಲ್ಕು ವರ್ಷಗಳ ಹಿಂದೆ ನಾನು ಇಫ್ಕೋಗೆ ಛೇರ್ಮನ್ ಆಗಿದ್ದೆ. ಆ ಸಂದರ್ಭದಲ್ಲಿ ಒಂದು ಸಾವಿರ ಬೋರ್‌ವೆಲ್‌ಗಳನ್ನು ಟ್ರಯಲ್ ಆಗಿ ತೆಗೆದುಕೊಂಡು ಒಂದು ಕಾಂಪ್ಯಾಕ್ಟ್ ಆಗಿ ರೈತರುಗಳನ್ನು

ಇದರಲ್ಲಿ ಇನ್ಸ್ಟಾಲ್–ಮಾಡಿಕೊಂಡು ನೇರವಾಗಿ ಬೋರ್‌ವೆಲ್‌ಗೆ ಚಾರ್ಜ್ ಮಾಡತಕ್ಕಂಥ ಪದ್ಧತಿಗಳನ್ನು ಮಾಡಿಸಿದೆ. ಕಳೆದ ವರ್ಷ ಮಳೆ ಚೆನ್ನಾಗಿ ಬಿದ್ದಿದ್ದರಿಂದ ಆ ಬೋರ್‌ವೆಲ್‌ಗಳೆಲ್ಲಾ ಬಹಳ ಚೆನ್ನಾಗಿ ಚಾರ್ಜ್ ಆಗಿವೆ ಮತ್ತೆ ಫ್ಲೋರೈಡ್ ಅಂಶ ಹೊಂದಿರತಕ್ಕಂಥ ನೀರೂ ಕೂಡ ಇವತ್ತು ಒಳ್ಳೆಯ ಸಾಫ್ಟ್ ವಾಟರ್ ಆಗಿ ಕನ್ವರ್ಟ್ ಆಗಿದೆ. ಆದ್ದರಿಂದ, ಇಂಥದಕ್ಕೂ ಕೂಡ ನಾವು ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗುತ್ತದೆ. ಇವತ್ತಿನದಿವಸ ಬೋರ್‌ವೆಲ್‌ಗಳನ್ನು ಚಾರ್ಜ್ ಮಾಡತಕ್ಕಂಥದ್ದು ಸಹ ಬಹಳ ಮುಖ್ಯವೆಂದು ಈ ಸಂದರ್ಭದಲ್ಲಿ ಹೇಳುತ್ತಾ, ನಮ್ಮಲ್ಲಿರತಕ್ಕಂಥ ಅನೇಕ ಕೆರೆಗಳನ್ನು ಮೊದಲಿನವರು ಕಟ್ಟಿರತಕ್ಕಂಥ ಸಂದರ್ಭದಲ್ಲಿ ಅದರ ಹಿಂದೆ ಸುಮಾರು ೧೦ ರಿಂದ ೨೦ ಎಕರೆ ಜಮೀನು ಗೋಮಾಳ ಇರುತ್ತಿತ್ತು. ಕೆರೆಯ ಪಕ್ಕದಲ್ಲಿ ಯಾರೂ ಉಳುಮೆ ಮಾಡುತ್ತಿರಲಿಲ್ಲ. ಆದರೆ, ಇವತ್ತಿನದಿವಸ ಎಲ್ಲ ಕೆರೆಗಳ ಒತ್ತುವರಿಯಾಗಿದೆ. ಆದ್ದರಿಂದ ಇದನ್ನು ತಡೆಯುವುದಕ್ಕೋಸ್ಕರ ಒಂದು ಕಾನೂನು ಮಾಡಬೇಕೆಂದು ನಾನು ಮಾನ್ಯ ಖರ್ಗೆಯವರಿಗೆ ಹೇಳಿದ್ದೆ. ಇದಕ್ಕೆ ಸಂಬಂಧಪಟ್ಟಂತೆ ಅವರು ಕಾನೂನು ಇಲಾಖೆಯವರಿಗೂ ಕಳುಹಿಸಿಕೊಟ್ಟಿದ್ದರು. ಇವತ್ತಿನದಿವಸ ಎಲ್ಲೆಲ್ಲಿ ಕೆರೆಗಳನ್ನು ಒತ್ತುವರಿ ಮಾಡಲಾಗಿದೆಯೋ ಅಂಥ ಕಡೆ ನಿರ್ದಾಕ್ಷಿಣ್ಯವಾಗಿ ತೆಗೆಸುವಂಥ ಕೆಲಸ ಆಗಬೇಕು. ಇವತ್ತಿನದಿವಸ ಇಲ್ಲಿ ಬಡವರು ಬಗ್ಗರು ಕೆರೆಗಳನ್ನು ಒತ್ತುವರಿ ಮಾಡಿಕೊಂಡಿಲ್ಲ. ಆ ಊರಿನಲ್ಲಿ ಯಾರು ಹೆಚ್ಚು ಬಲಾಢ್ಯರು ಇರುತ್ತಾರೆಯೋ ಅವರೇ ಅಲ್ಲಿನ ಕೆರೆಗಳನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ಇದನ್ನು ನಾವು ನಿಲ್ಲಿಸದೆ ಹೋದರೆ ತೊಂದರೆಯಾಗುತ್ತದೆ. ಸಾವಿರಾರು ವರ್ಷಗಳಿಂದ ಹಿಂದೆ ಕಟ್ಟಿದ್ದಂಥ ಕೆರೆಗಳು ನಮಗೆ ಸ್ವಾತಂತ್ರ್ಯ ಬಂದ ಮೇಲೆಯೇ ಸಿಲ್ಟ್ ಆಗಿವೆ. ಇದಕ್ಕಿಂಥ ಮೊದಲು ಆಗಿರಲಿಲ್ಲ. ಏಕೆಂದರೆ, ಪೂರ್ವಿಕರು ಏನೊಂದು ಚಿಂತನೆ ಮಾಡಿ ಕೆರೆಯ ಸುತ್ತಮುತ್ತಲೂ ಜಮೀನುಗಳನ್ನು ಗೋಮಾಳವಾಗಿ ಇಟ್ಟಿದ್ದರೋ ಅವುಗಳನ್ನು ನಾವು ಗ್ರಾಂಟ್ ಮಾಡಿ ಕೊಟ್ಟಿದ್ದರಿಂದ ಆ ಜಮೀನುಗಳನ್ನು ಉತ್ತಿದ್ದರಿಂಧ ಮಳೆ ಬಂದಾಗ ಈ ಮಣ್ಣು ಕೆರೆಗೆ ಹೋಗಿ ಸಿಲ್ಟ್ ಆಗುವುದಕ್ಕೆ ಸಾಧ್ಯವಾಯಿತು. ಇವೆಲ್ಲವೂ ಕೂಡ ಬಹಳ ಮುಖ್ಯವಾದ ಕಾರಣಗಳಾಗಿವೆ. ಆದ್ದರಿಂದ, ಕೆರೆಗಳಿಗೆ ಸಂಬಂಧಪಟ್ಟಂತೆ ಒಂದು ಕಾನೂನು ತರಬೇಕೆಂದು ಈ ಸಮಯದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೆ ಕಟ್ಟಡದ ಮೇಲೆ ಬೀಳತಕ್ಕಂಥ ಮಳೆಯ ನೀರನ್ನು ಸಹ ಶೇಖರಣೆ ಮಾಡಬೇಕೆಂದು ಡಾ। ಅಬ್ದುಲ್ ಕಲಾಂರವರು ಹೇಳಿದ್ದಾರೆ. ಎಲ್ಲಾ ವಿಧದಲ್ಲಿಯೂ ಕೂಡ ನೀರನ್ನು ಶೇಖರಣೆ ಮಾಡತಕ್ಕಂಥದರ ಬಗ್ಗೆ ಡಾ। ಅಬ್ದುಲ್ ಕಲಾಂರವರು ಏನೊಂದು ಚಿಂತನೆ ಮಾಡಿದ್ದಾರೆ, ಇದರಲ್ಲೆಲ್ಲಾ ನಮ್ಮ ರಾಜ್ಯ ಮುಂದೆ ಇತ್ತು. ಆದರೆ, ನಮ್ಮ ರಾಜ್ಯ ಮಳೆ ನೀರು ಸಂಗ್ರಹಣೆಯಲ್ಲಿ ಮತ್ತು ವಾಟರ್ ಮ್ಯಾನೇಜ್‌ಮೆಂಟ್‌ನಲ್ಲಿ ಸ್ವಲ್ಪ ವೀಕ್ ಇದೆ. ಆದ್ದರಿಂದ ವಾಟರ್ ಮ್ಯಾನೇಜ್‌ಮೆಂಟ್‌ಗೆ ಹೆಚ್ಚಿನ ಆದ್ಯತೆ ಕೊಡತಕ್ಕಂಥ ದಿನಗಳು ಇವತ್ತಿನದಿವಸ ಆಗಿದೆ. ನಮ್ಮ ಲೆಜಿಸ್ಲೇಚರ್ ಕಮಿಟಿ ವತಿಯಿಂದ ನಾನು ಭೂತಾನ್ ದೇಶಕ್ಕೆ ಹೋಗಿದ್ದೆ. ಈಗ ಅಲ್ಲಿರತಕ್ಕಂಥ ದೊರೆ ಅಧಿಕಾರ ತೆಗೆದುಕೊಂಡಾಗ ೬೦ ಪರ್ಸೆಂಟ್‌ನಷ್ಟು ಕಾಡು ಇತ್ತೆಂದು ನಮ್ಮ ಜೊತೆ ಇದ್ದಂಥ ಅಲ್ಲಿನ ಅಧಿಕಾರಿಗಳು ನಮಗೆ ಹೇಳಿದರು. ಮತ್ತೆ ಅವರು ಅಧಿಕಾರ ತೆಗೆದುಕೊಂಡ ಮೂರು ಅಥವಾ ನಾಲ್ಕು ವರ್ಷಗಳ ಅವಧಿಯಲ್ಲಿ ೭೨ ಪರ್ಸೆಂಟ್‌ನಷ್ಟು ಕಾಡು ಆಯಿತ್ತೆಂದು ಹೇಳಿದರು. ಈ ಅಧಿಕಾರಿಗಳು ದೊರೆಯ ಹತ್ತಿರ ಹೋಗಿ ಈಗ ೭೨ ಪರ್ಸೆಂಟ್‌ನಷ್ಟು ಕಾಡು ಆಗಿದೆ ಎಂದು ಹೇಳಿದಾಗ, ನಮ್ಮ ತಂದೆಯ ಕಾಲದಲ್ಲಿ ೧೦೦

ಪರ್ಸೆಂಟ್‌ನಷ್ಟು ಇದ್ದಂಥದ್ದು ಈಗ ಏಕೆ ಇನ್ನು ೨೮ ಪರ್ಸೆಂಟ್‌ನಷ್ಟು ಕಡಿಮೆ ಇದೆಯೆಂದು ಭೂತಾನ್ ದೇಶದ ದೊರೆ ಅಧಿಕಾರಿಗಳಿಗೆ ಕೇಳಿದರಂತೆ. ಆದ್ದರಿಂದ, ಈ ರೀತಿಯಾದ ಒಂದು ಚಿಂತನೆಗಳನ್ನು ನಾವು ರೈತರಲ್ಲಿ ಅಳವಡಿಸಬೇಕು. ಅದನ್ನು ನಾಟಿ ಮಾಡಬೇಕು. ಮತ್ತು ಅವರ ಮನಸ್ಸುಗಳ ಮೇಲೆ ಈ ರೀತಿಯಾದ ಪ್ರಭಾವಗಳನ್ನು ಬೀರುವಂತೆ ಮಾಡಬೇಕು. ಪ್ರಕೃತಿಯನ್ನು ಯಾವ ರೀತಿಯಾಗಿ ಒಂದು ಸಮತೋಲನದಲ್ಲಿ ಬೆಳೆಸಿಕೊಂಡು ಹೋಗಬೇಕೆಂಬುದರ ಬಗ್ಗೆ ಒಂದು ಚಿಂತನೆಯನ್ನು ರೈತರಿಗೆ ಮತ್ತು ಹಳ್ಳಿಗಾಡಿನ ಜನಗಳಿಗೆ ಕೊಡಬೇಕು ಎನ್ನತಕ್ಕಂಥದ್ದು ಇವತ್ತು ಬಹಳ ಮುಖ್ಯವಾದದು. ಮತ್ತೆ ನಾವು ಇವತ್ತಿನದಿವಸ ವಾಟರ್ ಮ್ಯಾನೇಜ್‌ಮೆಂಟ್‌ನಲ್ಲಿ ನಾವು ಬಹಳ ಪೂರ್ ಇದ್ದೇವೆ. ಇದರ ಬಗ್ಗೆ ನಾನು ಬಹಳ ಸಾರಿ ಮಾತನಾಡಿದ್ದೇನೆ. ಇಸ್ರೇಲ್ ದೇಶದಲ್ಲಿರುವ ಒಂದೇ ಒಂದು ಜೋರ್ಡಾನ್ ರಿವರ್‌ನಿಂದ ಇಡೀ ದೇಶಕ್ಕೆ ಕುಡಿಯುವುದಕ್ಕೆ ಮತ್ತು ವ್ಯವಸಾಯಕ್ಕೆ ನೀರನ್ನು ಕೊಟ್ಟಿದ್ದಾರೆ. ಇವತ್ತಿನದಿವಸ ನಮ್ಮ ರಾಜ್ಯದಲ್ಲಿ ಅನೇಕ ನದಿಗಳಿವೆ. ಮತ್ತೆ ಅನೇಕ ಡ್ಯಾಂಗಳೂ ಸಹ ಇವೆ. ಇವತ್ತಿನದಿವಸ ವಾಟರ್ ಮ್ಯಾನೇಜ್‌ಮೆಂಟ್ ಮಾಡಿದರೆ ಹಳೆಯ ಮೈಸೂರಿಗೆ ಕೆ.ಆರ್.ಎಸ್. ಒಂದು ಸಾಕು. ಮತ್ತೆ ಹೊಸ ಕರ್ನಾಟಕಕ್ಕೆ ಕೃಷ್ಣಾ ಒಂದೇ ಸಾಕು. ಈ ಎರಡು ಡ್ಯಾಂಗಳಿಂದ ಇಡೀ ರಾಜ್ಯದ ಭೂಮಿಯ ಪ್ರತಿಯೊಂದು ಇಂಚನ್ನೂ ಸಹ ನಾವು ನೀರಾವರಿಯಾಗಿ ಮಾಡಬಹುದು. ಆದ್ದರಿಂದ ಇದಕ್ಕೆ ಪೊಲಿಟಿಕಲ್ ವಿಲ್ ಬೇಕಾಗುತ್ತದೆ. ಇದಕ್ಕೆ ಹೆಚ್ಚು ಹಣ ಖರ್ಚಾಗುತ್ತದೆ. ಆದ್ದರಿಂದ ಇದಕ್ಕೆ ನಬಾರ್ಡ್‌ನಿಂದ ಅಥವಾ ವಿಶ್ವಬ್ಯಾಂಕ್‌ನಿಂದ ಸಾಲ ತಂದು ಮಾಡಬೇಕಾಗುತ್ತದೆ. ಈ ಚಿಂತನೆ ಆಗುವವರೆಗೂ ಕೂಡ ವಾಟರ್ ಮ್ಯಾನೇಜ್‌ಮೆಂಟ್‌ಗೆ ಕಷ್ಟವಾಗುತ್ತದೆ. ಡ್ರಿಪ್ ಇರಿಗೇಶನ್‌ಗೆ ಕೋಲಾರ ಮತ್ತು ಬಿಜಾಪುರಕ್ಕೆ ೧೦೦ ಪರ್ಸೆಂಟ್ ಸಬ್ಸಿಡಿ ಕೊಟ್ಟರು. ಕೋಲಾರ ಮತ್ತು ಬಿಜಾಪುರಕ್ಕೆ ನೂರು ಪರ್ಸೆಂಟ್ ಕೊಟ್ಟರು, 6–7 ವರ್ಷಗಳಿಂದ ಕೊಡುತ್ತಿದ್ದಾರೆ. ಅದು ಅಷ್ಟು ಹೆಚ್ಚಿಗೆ ಹಣವಾಗಿ ಪರಿವರ್ತನೆಯಾಗಲಿಲ್ಲ. ಇಡೀ ರಾಜ್ಯದಲ್ಲಿ ಎಲ್ಲಿ ನೀರಾವರಿ ಇಲ್ಲವೋ ಈ ಭಾಗದಿಂದ ನೀರು ತೆಗೆಯುವಂತಹದ್ದು ಆಗಬೇಕು. ಇದರ ಜೊತೆಗೆ ನಾವು ಈ ಭತ್ತ ಮತ್ತು ಕಬ್ಬು ಬೆಳೆಯುವಂತಹ ಜಾಗಗಳಿಗೆ ಅನೇಕ ಮೆಥೆಡ್‌ಗಳನ್ನು ನಮ್ಮ ಸಂಶೋಧನೆಗಳಿಂದ ತಂದಿದ್ದಾರೆ, ಅದು ಮಡಗಾಸ್ಕರ್ ಪದ್ಧತಿ ಇರಬಹುದು, ಏರೋಬಿಕ್ ಪದ್ಧತಿ ಇರಬಹುದು, ಶ್ರೀ ಮೆಥೆಡ್ ಇರಬಹುದು, ಈ ಭತ್ತವನ್ನು ನಿಮ್ಮ ಜಿಲ್ಲೆಯಾದ ಮಂಡ್ಯ ಜಿಲ್ಲೆಯ ಮಂಡ್ಯ ತಾಲ್ಲೂಕಿನಲ್ಲಿ ಹೋದ ವರ್ಷ 260 ಎಕರೆ ಪ್ರದೇಶದಲ್ಲಿ ಈ ಮಡಗಾಸ್ಕರ್ ಪದ್ಧತಿಯಲ್ಲಿ ಮಾಡಿಸಿದ್ದೆ. ಅಲ್ಲಿ 60 ಪರ್ಸೆಂಟ್ ನೀರನ್ನು ಕಡಿಮೆ ಉಪಯೋಗಿಸುತ್ತೇವೆ. ಇದಕ್ಕಾಗಿ ನಾವು ಒತ್ತು ಕೊಡುವುದು, ಇದರ ಮೇಲೆ ಪ್ರಭಾವ ಬೀರುವಂತಹ ಕೆಲಸವನ್ನು ಸರ್ಕಾರ ಮಾಡಬೇಕೆಂದು ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಚ್ಚೆಪಡುತ್ತೇನೆ. ನಾವು ವಾಟರ್ ಮ್ಯಾನೇಜ್‌ಮೆಂಟ್‌ನಲ್ಲಿ ಬಹಳ ಪೂರ್ ಇದ್ದೇವೆ, ಇದಕ್ಕಾಗಿ ಸರ್ಕಾರ ಡ್ರಿಪ್ ಇರಿಗೇಷನ್‌ನ್ನು ಸ್ಟಾರ್ಟ್ ಮಾಡಿದ್ದೇವೆ, ಪ್ರತಿ ಇಂಚಿಗೂ ಕೂಡ ನಾವು ನೀರು ಕೊಡುವಂತಹ ಕೆಲಸ ಆಗುತ್ತದೆ. ಇದಕ್ಕಾಗಿ ಸ್ವಲ್ಪ ಹಣ ಖರ್ಚಾಗುತ್ತದೆ. ಇದುರ ಬಗ್ಗೆ ನಾವು ಚಿಂತನೆಗಳನ್ನು ನಡೆಸಬೇಕೆಂಬುದು ಬಹಳ ಮುಖ್ಯವೆಂದು ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಚ್ಚೆ ಪಡುತ್ತೇನೆ. ನಾನು ಕುಡಿಯುವ ನೀರಿನ ಬಗ್ಗೆ ಹೇಳಿದ್ದೇನೆ, 4 ವರ್ಷಗಳ ಕಾಲ ಏನಾಯಿತು, ಏನೂ ಇಲ್ಲ ನಾವು ಹಳ್ಳಿಗಳಿಗೆ ಟ್ಯಾಂಕರ್‌ಗಳಲ್ಲಿ ನೀರನ್ನು ತೆಗೆದುಕೊಂಡು ಹೋಗಿದ್ದೇವೆ

ಟ್ಯಾಂಕರ್‌ಗಳಲ್ಲಿ ಹೋದ ವರ್ಷ 32 ಕೋಟಿ ರೂಪಾಯಿಗಳು ಖರ್ಚಾಯಿತು. ಆಗ ಸ್ವಲ್ಪ ಬೇಗನೆ ಮಳೆ ಬಂತು. ಅದಕ್ಕೆ ಮುಂದಿನ ಸಾರಿ 52 ಕೋಟಿ ರೂಪಾಯಿಗಳು ಇದಕ್ಕಾಗಿ ಖರ್ಚಾಯಿತು. ನಾನು ಕೋಲಾರ ಜಿಲ್ಲೆ ಒಂದನ್ನು ಉದಾಹರಣೆಗೆ ತೆಗೆದುಕೊಂಡು ಮಾತನಾಡುತ್ತಿದ್ದೇನೆ. ಈ ಹಣವನ್ನು ನಾವು ಕುಡಿಯುವ ನೀರಿಗಾಗಿ ಖರ್ಚು ಮಾಡಿ ಹಳ್ಳಿಗಳಿಗೆ ಟ್ಯಾಂಕರ್‌ಗಳಲ್ಲಿ ನೀರನ್ನು ಒದಗಿಸಿದ್ದೇವೆ, ಕುರಿ ಮತ್ತು ದನಗಳು ನೀರನ್ನು ಕುಡಿಯಬೇಕು, ಹಸು ನೀರು ಕುಡಿಯಬೇಕು, ನೀವು ಟ್ಯಾಂಕರ್‌ಗಳಲ್ಲಿ ಎಷ್ಟು ದಿನ ನೀರನ್ನು ತೆಗೆದುಕೊಂಡು ಹೋಗಬಹುದು, ಇದು ಪಟ್ಟಣಗಳಲ್ಲಿ ಈ ಕೆಲಸಗಳು ಆಗಬಹುದು, ಪಟ್ಟಣಗಳಲ್ಲಿ ಅವರು ನೀರನ್ನು ಶೇಖರಣೆ ಮಾಡಿಕೊಂಡು ಅದನ್ನು ಮನೆಗೆ ಉಪಯೋಗಿಸಿಕೊಳ್ಳಬಹುದು. ಆದರೆ ರೈತರು ಕುರಿ, ಮೇಕೆ, ಕೋಳಿ ಪ್ರತಿಯೊಂದಕ್ಕೆ ಕೂಡ ಆದ್ಯತೆಯನ್ನು ಕೊಡಬೇಕೆಂದು ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು : ಮಾನ್ಯ ಶ್ರೀನಿವಾಸಗೌಡರೆ, ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಸುಮಾರು 25 ನಿಮಿಷಗಳಾಯಿತು. ಇನ್ನು 5–10 ನಿಮಿಷಗಳಲ್ಲಿ ತಾವು ಮುಗಿಸಿ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಇನ್ನು ಕೃಷಿ ಹಾಗೂ ತೋಟಗಾರಿಕೆ ಬಗ್ಗೆ ಮಾತನಾಡಲಿಲ್ಲ.

ಅಧ್ಯಕ್ಷರು : ಬಹಳ ಜನ ಸದಸ್ಯರು ಮಾತನಾಡಬೇಕಾಗಿದೆಯಲ್ಲಾ . ಏನು ಮಾಡಬೇಕು ಎಂಬುದನ್ನು ತಾವು ಹೇಳಿ. ಈಗಾಗಲೇ ತಾವು 25 ನಿಮಿಷಗಳ ಕಾಲ ಮಾತನಾಡಿದ್ದೀರಿ. ಇನ್ನು 5 ನಿಮಿಷಗಳಲ್ಲಿ ಮುಗಿಸಿ.

ಶ್ರೀ ಕೆ ಶ್ರೀನಿವಾಸಗೌಡ : ತಾವು ಬೇಡವೆಂದರೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ನಾನು ಸ್ವಲ್ಪ ಬೆಳಕು ಚೆಲ್ಲಬೇಕೆಂಬ ಆಸೆ ಇದೆ. ಕೃಷಿ ಮತ್ತು ತೋಟಗಾರಿಕೆ ವಲಯದಲ್ಲಿ ಸರ್ಕಾರ ಕಳೆದ 10 ವರ್ಷಗಳಿಂದ ಶೇಕಡ 2 ರಿಂದ 10 ರವರೆಗೆ ತನ್ನ ಗುರಿಯನ್ನು ಹೊಂದಿದೆ. ದೇಶದ ಒಟ್ಟು ಉತ್ಪಾದನೆ ಕೃಷಿ ಮತ್ತು ತೋಟಗಾರಿಕೆಯಲ್ಲಿ ಶೇಕಡ 20.3 ಮಾತ್ರ ಇದ್ದರೂ ಕೂಡ ಶೇಕಡ 66.6 ಜನರಿಗೆ ಉದ್ಯೋಗವನ್ನು ನೀಡುತ್ತಿದೆ. ಕೇವಲ 20.3 ರಷ್ಟು ಮಾತ್ರ ಉತ್ಪಾದನೆಯ ಶೇಕಡವಾರು ಇದ್ದರೂ ಕೂಡ ಇಷ್ಟೊಂದು ಜನರಿಗೆ ಅಂದರೆ 66.6 ಪರ್ಸೆಂಟ್ ಜನರಿಗೆ ಉದ್ಯೋಗವನ್ನು ಕೊಡುವಂತಹದ್ದು ಇವತ್ತು ನಮ್ಮ ದೇಶದಲ್ಲಿ ಕೃಷಿ ಮತ್ತು ತೋಟಗಾರಿಕೆ ಕೊಡುತ್ತಿದೆ. ಇದರ ಬಗ್ಗೆ ನಾವು ಚಿಂತನೆಯನ್ನು ಮಾಡಬೇಕಾಗಿದೆ. ರಾಜ್ಯವು ನೈಸರ್ಗಿಕ ಮತ್ತು ಕೃಷಿ ಹವಾಮಾನ ಪ್ರದೇಶಗಳಲ್ಲಿ ಸುಮಾರು 118.28 ಲಕ್ಷ ಹೆಕ್ಟೇರಷ್ಟು ಕೃಷಿ ಮತ್ತು ತೋಟಗಾರಿಕೆಗೆ ಯೋಗ್ಯವಾದ ಜಮೀನು ನಮ್ಮಲ್ಲಿ ಇದೆ. ಇವತ್ತು ರಾಜ್ಯದಲ್ಲಿ ಹೋದ ಸಾರಿ ಒಳ್ಳೆಯ ಮಳೆ ಆಗಿದ್ದರಿಂದ ಸುಮಾರು 103 ಲಕ್ಷ ಟನ್ ಕೃಷಿ ಬೆಳೆಯನ್ನು ಬೆಳೆದಿದ್ದೇವೆ. ನಾವು 115 ಮೆಟ್ರಿಕ್ ಟನ್‌ನಷ್ಟು ತೋಟಗಾರಿಕೆ ಬೆಳೆಗಳನ್ನು ಬೆಳೆದಿದ್ದೇವೆ. ಮಾನ್ಯ ಅಧ್ಯಕ್ಷರೆ, ಈ ತೋಟಗಾರಿಕೆ ಬೆಳೆಗಳಲ್ಲಿ ಬಹಳಷ್ಟು ಅಂದರೆ ಈ ಜನಸಂಖ್ಯೆಗಿಂತ ಉತ್ಪಾದನೆಯು ಜಾಸ್ತಿಯಾಗುತ್ತಿದೆ. ಆದರೆ ಅವನ್ನು ನಾವು ಯಾವು ಕಾರಣಗಳಿಂದ ಯಾವಾ ವೇಸ್ಟ್ ಆಗುತ್ತಿದೆ, ಅದು ಕೊಳೆತು ಹೋಗುವುದು, ನುಸಿ ಹೋಗುವುದು, ಭತ್ತಕ್ಕೆ ಹುಳ ಬೀಳುವುದು, ಜೋಳಕ್ಕೆ ಹುಳ ಬೀಳುವುದು ಇವನ್ನು ಕಂಟ್ರೋಲ್ ಮಾಡುವ ಪದ್ಧತಿಗಳನ್ನು ಜಾರಿಗೆ ತರುವಂತಹದ್ದನ್ನು ನಾವು ಇನ್ನೂ ಮಾಡಲಿಲ್ಲ. ಇದಕ್ಕಾಗಿ ಉಗ್ರಾಣ, ಸಾಗಾಣಿಕೆ, ನಿರ್ವಹಣೆ

ಸಂಸ್ಕರಣೆಯ ಕೊರತೆಗಳಿಂದ ನಷ್ಟವಾಗುತ್ತಿದೆ. ಮಾನ್ಯ ಮೆಕಂಜಿಯವರು 1997ರಲ್ಲಿ ಒಂದು ರಿಪೋರ್ಟ್ ಮಾಡಿದ್ದಾರೆ. ಅವರು ಕೊಟ್ಟಿರುವಂತಹ ರಿಪೋರ್ಟ್ ಪ್ರಕಾರ ನಮ್ಮ ದೇಶದಲ್ಲಿ 50 ಸಾವಿರ ಕೋಟಿ ರೂ.ಗಳಷ್ಟು ನಷ್ಟವಾಗುತ್ತಿದೆ. ಇದನ್ನು ಕರ್ನಾಟಕಕ್ಕೆ ತೆಗೆದುಕೊಂಡರೆ 8 ಪರ್ಸೆಂಟ್‌ನಷ್ಟು ಬರುತ್ತದೆ. ಈ ಉಗ್ರಾಣ ಸರಿ ಇಲ್ಲದೆ ಇರುವುದಕ್ಕೆ, ಸಾಗಾಣಿಕೆ ಮತ್ತು ನಿರ್ವಹಣೆ ಸಂಸ್ಕರಣೆ ಈ ಕೊರತೆಗಳು ಇರುವುದರಿಂದ ಇವತ್ತು ನಮ್ಮ ರಾಜ್ಯದಿಂದ ವ್ಯವಸಾಯ ಮತ್ತು ತೋಟಗಾರಿಕೆಗಳಿಂದ 400 ಕೋಟಿ ರೂಪಾಯಿಗಳ ನಷ್ಟವನ್ನು ನಾವು ಅನುಭವಿಸುತ್ತಿದ್ದೇವೆ. ಇದರ ಕಡೆ ಗಮನ ಕೊಡುವಂತಹ ಕೆಲಸ ಬಹಳ ಮುಖ್ಯವಾಗಿದೆ. ಇವತ್ತು ನಮ್ಮ ಆವರೇಜ್ ಯೀಲ್ಡ್, ಉದಾಹರಣೆಗಾಗಿ ಟೋಮೋಟೋವನ್ನು ತೆಗೆದುಕೊಳ್ಳೋಣ. ಟೊಮೋಟೊ ಒಂದು ಎಕರೆಗೆ ಸುಮಾರು 40 ಟನ್‌ಗಳಷ್ಟು ಬರಬಹುದು, ಅಮೇರಿಕಾ ದೇಶದಲ್ಲಿ ಸುಮಾರು 70 ರಿಂದ 80 ಟನ್‌ಗಳಷ್ಟು ಬರಬಹುದು, ನಾವೇನಾದರೂ ಅಮೇರಿಕಾ ದೇಶದ ಬೆಳೆಯುವಂತಹ ತೋಟಗಾರಿಕಾ ಬೆಳೆಗಳನ್ನು ಬೆಳೆದರೆ ನಮ್ಮ ಮಾರ್ಕೆಟ್ ಗತಿ ಏನು ? ಮಾರ್ಕೆಟ್ ಅಂದಾಕ್ಷಣ ನನಗೆ ಎಪಿಎಂಸಿ ಆಕ್ಟ್ ಜ್ಞಾಪಕಕ್ಕೆ ಬರುತ್ತದೆ. ಎಪಿಎಂಸಿ ಆ್ಯಕ್ಟ್‌ನ್ನು ದೇಶದ ಅನೇಕ ರಾಜ್ಯಗಳಲ್ಲಿ ಜಾರಿ ಮಾಡಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಏಕೋ ಹಿಂದು ಮುಂದು ಆಗುತ್ತಿದೆ. ನಾನು ಇದನ್ನು ಮಾಡಬೇಕೆಂದು ಬಹಳಷ್ಟು ಸಾರಿ ಹಿಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಧರ್ಮಸಿಂಗ್‌ರವರ ಹತ್ತಿರ ಮಾತನಾಡಿದ್ದೆ. ಅವರೂ ಕೂಡ ಇದಕ್ಕಾಗಿ ಹೆಚ್ಚಿಗೆ ಆದ್ಯತೆಯನ್ನು ಕೊಟ್ಟಿದ್ದರು. ಆದರೂ ಕೂಡ ಅದು ಆಗಲಿಲ್ಲ. ಎಪಿಎಂಸಿ ಆ್ಯಕ್ಟ್ ಈಗಲಾದರೂ ಕೂಡ ಅಮೆಂಡ್‌ಮೆಂಟ್ ಮಾಡಬೇಕು. ನಾನು ಬೆಳೆಯುವಂತಹ ಜೋಳ ಇರಬಹುದು, ರಾಗಿ ಇರಬಹುದು, ನಾನು ಮೇಯಿಸುವಂತಹ ಕುರಿಗಳು ಇರಬಹುದು, ನನಗಿಷ್ಟ ಬಂದಂತಹ ಜಾಗದಲ್ಲಿ ಇದನ್ನು ಏಕೆ ಮಾಡಬಾರದು ? ಇಲ್ಲಿ ಮಾರ್ಕೆಟ್ ಇದೆ, ಇಲ್ಲಿ ಮೆಟ್ರೋ ಮಾರ್ಕೆಟ್ ಇದೆ, ನಮ್ಮ ಜಿಲ್ಲೆಯಿಂದ ಕುರಿ ಕೆಂಪಣ್ಣ ಎಂಬುವವನು ಕುರಿಯನ್ನು ಕಳುಹಿಸುತ್ತಾನೆ, ಆತನಿಗೆ ಮಾರ್ಕೆಟ್‌ನಲ್ಲಿ 120 ಮತ್ತು 130 ರೂಪಾಯಿಗಳು ಇದ್ದರೆ : ಅವರಿಗೆ ಒಂದು ಕೆ.ಜಿ. ಮಾಂಸಕ್ಕೆ 200 ರೂಪಾಯಿಗಳನ್ನು ಕೊಡುತ್ತಾರೆ. ಅವನಿಗೇತಕ್ಕೆ ರಿಸ್ಟ್ರಿಕ್ಷನ್ ? ಯಶವಂತಪುರದಲ್ಲಿ ಹೋದರೆ ನಮಗೆ ಸಿಗುವುದು 100 ರೂಪಾಯಿಗಳು, ಅಲ್ಲಿಗೆ ಹೋದರೆ ಸುಮಾರು 180 ರಿಂದ 200 ರೂಪಾಯಿಗಳು ಸಿಗುತ್ತದೆ. ಈ ಪದ್ಧತಿಗಳಿಂದ ನಮ್ಮ ರೈತನು ಬೆಳೆದಂತಹ ಬೆಳೆಗಳನ್ನು ನಿಯಂತ್ರಣ ಮಾಡುವಂತಹ ಎಪಿಎಂಸಿ ಆ್ಯಕ್ಟ್‌ನ್ನೂ ಕೂಡ ತಾವು ಅಮೆಂಡ್ ಮಾಡಬೇಕಾಗುತ್ತದೆ. ಗುಂಡುಸೂಜಿಯನ್ನು ಮಾಡಿದಂತಹ ಒಬ್ಬ ಇಂಡಸ್ಟ್ರಿಯಲಿಸ್ಟ್, ಪ್ರಪಂಚದಲ್ಲಿ ಎಲ್ಲಿ ಬೇಕಾದರೂ ಅದನ್ನು ಮಾರುತ್ತಾನೆ. ಆದರೆ ರೈತನು ಬೆಳೆದಂತಹ ಬೆಳೆ ಅದು ರಾಗಿ, ಭತ್ತ ಮತ್ತು ಜೋಳ, ಅಕ್ಕಿ ಇರಬಹುದು, ನೀವು ಏತಕ್ಕಾಗಿ ಎಪಿಎಂಸಿಯಲ್ಲಿ ಮಾರಬೇಕೆಂದು ಹೇಳುತ್ತೀರಿ ? ನಾವೆಲ್ಲರೂ ದಲ್ಲಾಳಿಗಳ ಹಿತಚಿಂತಕರಾಗಿಬಿಟ್ಟಿದ್ದೇವೋ ಏನೋ ಎಂಬ ಯೋಚನೆ ಒಂದೊಂದು ಸಾರಿ ಬರುತ್ತದೆ. ಇದರ ಬಗ್ಗೆ ನಾವು ಎಲ್ಲಿಯಾದರೂ ಒಂದು ಕಡೆ ಕಡಿವಾಣ ಹಾಕದೇ ಇದ್ದರೆ ದಲ್ಲಾಳಿಗಳ ಕೈಯಲ್ಲಿ ನಾವು ನಶಿಸಿಹೋಗುತ್ತೇವೆ. ದಲ್ಲಾಳಿಗಳು ಇವತ್ತಿಗೂ ಕೂಡ ಇದ್ದಾರೆ. ಮಾನ್ಯ ನೆಹರುರವರು ಇದರ ಬಗ್ಗೆ ಚಿಂತನೆಯನ್ನು ಮಾಡಿದ್ದರು. ಈ ದೇಶಕ್ಕೆ ಕೋ–ಆಪರೇಟಿವ್ ಆ್ಯಕ್ಟ್ ಜಾರಿಯಾದರೆ, ಕೋ–ಆಪರೇಷನ್ ಬೆಳೆಯುತ್ತದೆ. ಆದರೆ ನಾವು ಅಂದುಕೊಂಡಷ್ಟು ಬೆಳೆಯದಿದ್ದರೂ ಕೂಡ ಸ್ವಲ್ಪ

ಮಟ್ಟಿಗಾದರೂ ಬೆಳೆಯಬಹುದು, ಯಾವುದಾದರೂ ಒಂದನ್ನು ಇದರ ಬಗ್ಗೆ ಪ್ಯಾರಲಲ್ ಆಗಿ ಬೆಳೆಸದೆ ಇದ್ದರೆ . . . . .

ಶ್ರೀ ಕೆ.ಆರ್. ರಮೇಶ್‌ಕುಮಾರ್(ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀನಿವಾಸಗೌಡರು ಇದರ ಬಗ್ಗೆ ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಇಂಡಸ್ಟ್ರಿಗಳಲ್ಲಿ ಕೆಲಸ ಮಾಡಬೇಕಾದರೆ ಅವರು ಎಷ್ಟು ಮ್ಯಾನ್ ಪವರ್ಸ್ ಅಲ್ಲಿ ಸ್ಪೆಂಡ್ ಮಾಡುತ್ತಾರೆ, ಮ್ಯಾನ್ ಪವರ್ ಎಷ್ಟು ಯುಟಿಲೈಜ್ ಆಗಿದೆ ಎಂದು ಹೇಳಿ ಅವರಿಗೆ ಸ್ಯಾಲರಿಯನ್ನು ಫಿಕ್ಸ್ ಮಾಡುತ್ತಾರೆ. ಅವರಿಗೆ ಕಾಂಪನ್‌ಸೇಷನ್ ಬೇರೆ ಇದೆ, ಒಂದು ಬೆರಳು ಹೋದರೆ ಏನು ಕೊಡಬೇಕು, ಕಾಲು ಹೋದರೆ ಏನು ಕೊಡಬೇಕು, ಕಣ್ಣು ಹೋದರೆ ಏನು ಕೊಡಬೇಕು, ಅವರು ಹೆಚ್ಚಿಗೆ ಉತ್ಪಾದನೆಯನ್ನು ಮಾಡಿದರೆ ಅವರಿಗೆ ಇನ್‌ಸೆಂಟೀವ್ಸ್‌ನ್ನೂ ಸಹ ಕೊಡುತ್ತಾರೆ. ಇಲ್ಲಿ ರೈತನು ತನ್ನ ಜಮೀನಿನಲ್ಲಿ ಅವನು ಮತ್ತು ಆತನ ಕುಟುಂಬ ಎಷ್ಟು ಮಾನವ ಗಂಟೆಗಳನ್ನು ಕಳೆಯುತ್ತಾನೆ, ಎಷ್ಟು ಮಾನವಶಕ್ತಿಗಳು ಬಳಕೆಯಾಗಿದೆ ಎಂಬುದನ್ನು ನೋಡಬೇಕು. ಅವನು ಮತ್ತು ಅವನ ಕುಟುಂಬ ಗೌರವಯುತವಾಗಿ ಜೀವನ ಮಾಡುವುದಕ್ಕೆ ಹೆಚ್ಚಿಗೆ ಏನೂ ಕೇಳುವುದಿಲ್ಲ. ಅವನು ಎಲ್ಲಾ ಶಕ್ತಿಗಳನ್ನು ಬಳಕೆ ಮಾಡಿ ಉತ್ಪಾದನೆಯನ್ನು ಮಾಡಿದರೂ ಕೂಡ ಅವನು ಉತ್ಪಾದನೆಯನ್ನು ಮಾರಾಟ ಮಾಡಿದಾಗ ಅವನಿಗೆ ಮಾರ್ಕೆಟ್‌ನಿಂದ ಬರತಕ್ಕಂತಹ ಹಣ ಏನಿದೆ, ಅದು ಸಾಕಾಗುತ್ತಿದೆಯೇ ಅಥವಾ ಇಲ್ಲವೇ ಎಂಬುದನ್ನು ನೋಡಬೇಕು. ಎಷ್ಟು ತಾರತಮ್ಯ ಇದೆ ನೋಡಿ, ಒಂದು ಸ್ಮಾಲ್ ಸೆಕ್ಷನ್‌ಗೆ ಎಲ್ಲಾ ರೀತಿಯ ಪ್ರೊಟೆಕ್ಷನ್‌ಗಳು ಇರಬೇಕು. ಇಡೀ ದೇಶದ ಹೊಣೆಯನ್ನು ಹೊತ್ತವನಿಗೆ ತನ್ನ ಉತ್ಪಾದನೆಯಲ್ಲಿ ಎಲ್ಲರ ಹೊಟ್ಟೆ ತುಂಬತಕ್ಕವನಿಗೆ ಈ ರೀತಿಯ ಅನ್ಯಾಯವಾಗಿದೆ. ವೈಜ್ಞಾನಿಕವಾಗಿ ಇವತ್ತಿಗೂ ಕೂಡ ಅದರ ಬಗ್ಗೆ ಯೋಚನೆ ಮಾಡುವವರು ಇಲ್ಲ. ಅವನಿಗೆ ಯಾವ ವಿಧವಾದ ಸೇಫ್ಟಿ ಕೂಡ ಇಲ್ಲ. ಇತ್ತೀಚೆಗೆ ಅವನು ಫೀಲ್ಡ್‌ನಲ್ಲಿ ಇದ್ದಾಗ ಹಾವು ಕಚ್ಚಿದರೆ ಅದರ ಬಗ್ಗೆ ಏನೋ ಮಾಡಿದ್ದಾರೆ. ಅದೂ ಕೂಡ, it is all nominal. - - ನಾವು ಎಲ್ಲೋ ಒಂದು ಕಡೆ ಇದ್ದೇವೆ, we have taken up a very good subject. - - -

ಇಲ್ಲಿ ಸನ್ಮಾನ್ಯ ರಾಷ್ಟ್ರಪತಿಯವರು ಬಂದಿದ್ದಾರೆ, ಮಾತನಾಡಿದ್ದಾರೆ, ಟೋಟಲ್ ಮ್ಯಾನ್ ಹವರ್ಸ್ ಎಷ್ಟು ? ಒಂದು ಫ್ಯಾಮಿಲಿ ಎಷ್ಟು ಸ್ಪೆಂಡ್ ಮಾಡುತ್ತಾರೆ, ಮ್ಯಾನ್‌ಹವರ್ಸ್‌ಗೆ ಇಷ್ಟು ಎಂದು ಪ್ರಪೋಷನೇಟ್ ಫಿಕ್ಸ್ ಮಾಡುತ್ತಾರೆ. ಅವನು ಏನೂ ಉತ್ಪಾದನೆಯನ್ನು ಮಾಡುವುದಿಲ್ಲ. ಅವನು ಕೊಳ್ಳತಕ್ಕಂತಹ ಪದಾರ್ಥಗಳು, ಏನಿವೆ ಅದಕ್ಕೆ ಅವನಿಗೆ ಪರ್ಚೇಸಿಂಗ್ ಪವರ್ಸ್ ಬೇಡವೇ ? ಅವನು ಟವಲ್‌ನ್ನು ಕೊಂಡುಕೊಳ್ಳಬೇಕಾಗಿದ್ದರೆ, it is beyond his limit. ಒಂದು ಕೂಂಬನ್ನು ತೆಗೆದುಕೊಳ್ಳಬೇಕಾಗಿದ್ದಾರೆ ಅದಕ್ಕೆ ಟ್ಯಾಕ್ಸ್‌ನ್ನು ಹಾಕಿಬಿಟ್ಟಿದ್ದಾರೆ. ಅದಕ್ಕೆ ಫಿಕ್ಸ್‌ಡ್ ಪ್ರೈಸ್ ಹಾಕಿಬಿಟ್ಟಿದ್ದಾರೆ. ಇಲ್ಲಿ ಎಲ್ಲವೂ ಫಿಕ್ಸ್‌ಡ್ ? ಆದರೆ ಇವನ ಉತ್ಪನ್ನಕ್ಕೆ ಮಾತ್ರ ಫಿಕ್ಸೆಡ್ ಇಲ್ಲ. ಯಾವುದಕ್ಕೆ ಫಿಕ್ಸೆಡ್ ಇಲ್ಲ ಹೇಳಿ. ಇಂಡಸ್ಟ್ರಿಯಲ್ ಪ್ರಾಡಕ್ಟ್ಸ್ ಫಿಕ್ಸ್‌ಡ್ ಪ್ರೈಸ್ ಆಗಿ ಇಲ್ಲದೇ ಇರುವಂತಹ ಯಾವ ಪದಾರ್ಥ ಮಾರುಕಟ್ಟೆಗೆ ಬರುತ್ತದೆ ? ಇಂಡಸ್ಟ್ರಿಯಲ್ ಲೇಬರ್‌ಗೆ, ಅಗ್ರಿಕಲ್ಚರಲ್ ಲೇಬರ್‌ಗೆ ಇಷ್ಟು ದೊಡ್ಡ ತಾರತಮ್ಯ ಇದೆ. ಎಲ್ಲೋ ಒಂದು ಕಡೆ we should not think on party lines, ಈಶ್ವರಪ್ಪನವರೇ, ನಾವೆಲ್ಲಾ ಗ್ರಾಮೀಣ ಪ್ರದೇಶಗಳಿಂದ ಬಂದಿರತಕ್ಕಂಥವರಾಗಿದ್ದೇವೆ. ರೈತ, ರೈತಕಾರ್ಮಿಕರು

ಗೌರವಯುತವಾಗಿ ಜೀವನ ಮಾಡಬೇಕಾದರೆ ಅವನಿಗೆ ಮಿನಿಮಮ್ ಎಷ್ಟು ವೇಜಸ್ ಸಿಗಬೇಕು? ಇವತ್ತು ಅವನಿಗೆ ನಾವು ಮಿನಿಮಮ್ ವೇಜಸ್ ಫಿಕ್ಸ್ ಮಾಡುತ್ತೇವೆ. ಹಾಗೆ ಮಿನಿಮಮ್ ವೇಜಸ್ ಫಿಕ್ಸ್ ಮಾಡಬೇಕಾದರೆ ನಾವಿಷ್ಟೇ ಯೋಚನೆಯನ್ನು ಮಾಡಬೇಕು. ಅವನಿಗೆ ದಿನನಿತ್ಯದ ಜೀವನ ನಡೆಸಲಿಕ್ಕೆ ಅವನ ಶರೀರದಲ್ಲಿರತಕ್ಕಂಥ ಶಕ್ತಿಯನ್ನು ಬಳಕೆ ಮಾಡಿ ಅವನು ಕೂಲಿಗೆ ಹೋಗಿ ಅದರಿಂದ ಬರತಕ್ಕಂತಹ ಹಣದಲ್ಲಿ ಮಾರುಕಟ್ಟೆಗೆ ಹೋಗಿ ಅವನಿಗೆ ದಿನನಿತ್ಯ ಬೇಕಾಗಿರತಕ್ಕಂಥ ಎಲ್ಲಾ ಸಾಮಗ್ರಿಗಳನ್ನು ಕೊಳ್ಳಲಿಕ್ಕೆ ಸಾಕಾಗುತ್ತದೆಯೇ ? ಸಾಕಾಗುವುದಿಲ್ಲವೇ ? ಅವನಿಗೆ ಆ ಪರ್ಚೇಸಿಂಗ್ ಪವರ್ ಇಲ್ಲದೇಹೋದರೆ ನಾವು ಅದನ್ನು ಸಬ್ಸಿಡೈಸ್ ಮಾಡಬೇಕು. ಇವರೇನೋ ಮೊನ್ನೆ ಬಂದು ವಿಧಾನಸೌಧದ ಎದುರಿಗೆ ಧರಣಿ ಮಾಡಿ ಎಲ್ಲವನ್ನೂ ಹೇಳಿದ ಮೇಲೆ ತಕ್ಷಣ ಬೇಡಿಕೆಯನ್ನು ಕೊಟ್ಟಿರಿ, ಅವರೂ ನಮ್ಮ ಅಣ್ಣ ತಮ್ಮಂದಿರೇ, ಅವರಿಗೆ ಕೊಡುವುದು ಬೇಡವೆಂದು ಹೇಳಲಿಲ್ಲ. ಸಂಘಟಿತರಾಗಿರತಕ್ಕಂಥವರ ಒತ್ತಡಕ್ಕೆ ಮಣಿಯತಕ್ಕಂಥ ವ್ಯವಸ್ಥೆ, ಅಸಂಘಟಿತ ವರ್ಗಗಳ ನೋವನ್ನು ಅರ್ಥ ಮಾಡಿಕೊಳ್ಳದಿರುವವರ ಈ ವ್ಯವಸ್ಥೆ ನಿರಂತರವಾಗಿ ಮುಂದುವರಿಯಬಾರದು. ಈ ಅಸಂಘಟಿತ ವಲಯದಲ್ಲಿರತಕ್ಕಂಥ, ನಿಜವಾಗಲೂ ಕೂಡ ತುಳಿತಕ್ಕೆ ಶೋಷಣೆಗೆ ಒಳಗಾದ ಜನ ಯಾರಿದ್ದಾರೆ, ಅವರ ಕಡೆಗೆ ಗಮನಹರಿಸುವಂತಹ ಕೆಲಸ ಈ ಸದನದಲ್ಲಿ ಆಗಬೇಕು. ಅದು ನಿಮ್ಮ ಮುಖಾಂತರ ಆಗಲಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ :– ಮಾನ್ಯ ಅಧ್ಯಕ್ಷರೇ, ಕೃಷಿ ಸಂಸ್ಕರಣೆ; ನಮ್ಮ ದೇಶದಲ್ಲಿ ಮೌಲ್ಯವರ್ಧಿತ ಬೆಳೆಗಳನ್ನು ಕೃಷಿ ಬೆಳೆಗಳಿಗೆ ಕಟ್ಟುವಂತಹ ಪದ್ಧತಿಗಳು ಇವತ್ತು ನಮ್ಮಲಿಲ್ಲ, ಅದರಲ್ಲೂ ಪ್ರೋಸೆಸಿಂಗ್ ಯೂನಿಟ್ಸ್, ಅಗ್ರೋಬೇಸ್ಡ್ ನಮ್ಮಲ್ಲಿ ಬಹಳಷ್ಟು ಕಡಿಮೆಯಿದೆ. ಅಗ್ರೋ ಬೇಸ್ಡ್ ಬಂದಂಥ ಸಂದರ್ಭದಲ್ಲಿ ಸರ್ಕಾರಿ ಅಥವಾ ಸಹಕಾರಿಯವೂ ಕೂಡ ಬಹಳಷ್ಟು ನಷ್ಟವನ್ನು ಅನುಭವಿಸಿ ಮುಚ್ಚಿವೆ. ಮಾನ್ಯ ಅಧ್ಯಕ್ಷರೇ, ನಿನ್ನೆ ನೀವು ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರಿಗೆ ರಾಷ್ಟ್ರಪತಿಯವರ ಭಾಷಣದ ಮೇಲಿನ ಚರ್ಚೆ ಮಾಡುವ ಸಂದರ್ಭದಲ್ಲಿ ಅವರ ಸಲಹೆ ಸೂಚಿಸಲಿಕ್ಕೆ ಹೇಳಿದಾಗ ನನ್ನ ತಲೆಗೆ ಇದು ಹೊಳೆಯಿತು, ನಿಮ್ಮ ಸಜೆಷನ್ ಏನು ಎಂಬ ಬಹಳ ಒಳ್ಳೆಯ ಪ್ರಶ್ನೆಯನ್ನು ತಾವು ಸದನದಲ್ಲಿ ಕೇಳಿದಿರಿ. ಆಹಾರ ಸಂಸ್ಕರಣೆಯಲ್ಲಿ ತೀವ್ರಗತಿಯಲ್ಲಿ ಅಭಿವೃದ್ಧಿಯಾಗುವುದು ಬಹಳ ಅವಶ್ಯಕತೆ ಇದೆ. ಇವತ್ತು ಜನಸಂಖ್ಯೆ ೧೦೫–೧೦೬ ಕೋಟಿಯಷ್ಟು ಹೆಚ್ಚಿನ ಮಟ್ಟಕ್ಕೆ ತಲುಪುತ್ತಿದೆ. ಅದಕ್ಕೆ ತಕ್ಕಂತೆ ಆಹಾರಬೆಳೆಗಳನ್ನು ಬೆಳೆದರೂ ಕೂಡ ನಾವು ಸರಿಯಾದ ಪದ್ಧತಿಗಳನ್ನು ಉಪಯೋಗಿಸದೆ ಅವನ್ನು ಹಾಳು ಮಾಡುವಂತಹದ್ದು ಆಗಿದೆ. ನಾನು ಆಗಲೇ ಹೇಳಿದೆ, ಒಂದು ವರದಿಯನ್ವಯ ಐವತ್ತು ಸಾವಿರ ಕೋಟಿ ರೂಪಾಯಿಯಷ್ಟು ಈ ದೇಶದಲ್ಲಿ ನಷ್ಟವಾಗುತ್ತಿದೆ. ಕೃಷಿ ಸಂಸ್ಕರಣೆ, ಶುದ್ಧೀಕರಣೆ, ವಿಂಗಡಣೆ ಮತ್ತು ಪ್ಯಾಕಿಂಗ್‌ಗಳಿಂದ ಬಾಳಿಕೆಗಳ ಮೌಲ್ಯವರ್ಧನೆಗಳನ್ನು ನಾವು ಹೆಚ್ಚಿಗೆ ಮಾಡಬಹುದು, ಉತ್ಪನ್ನಗಳನ್ನು ಪರಿವರ್ತನೆ ಮಾಡುವುದರಿಂದ ಅಂದರೆ ಇವತ್ತು ರಾಗಿಯಿಂದ ರಾಗಿ ಮಾಲ್ಟ್, ರಾಗಿ ಸ್ವೀಟ್, ರಾಗಿ ಚಕ್ಕುಲಿಯನ್ನು ಮಾಡಬಹುದು, ಈ ರೀತಿ ಮಾಡುವುದರಿಂದ ೨೦೦೦–೦೦ ರೂಪಾಯಿಗಳು ರೈತನಿಗೆ ಸಿಗುತ್ತದೆ. ಇದಕ್ಕೆ ನಾನು ಕೃಷಿ ಮಂತ್ರಿಯಾಗಿದ್ದಾಗ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದೆನು. ಇದರಿಂದ ರೈತನು ಬೆಳೆದಂತಹ ಬೆಳೆಗಳಿಗೆ ಒಳ್ಳೆಯ ಬೆಲೆ ಸಿಗುತ್ತದೆ, ಇವತ್ತು ರೈತ ತನ್ನ ಹೂಡಿಕೆಯಿಂದ ಒಂದು ಲಕ್ಷ ರೂಪಾಯಿಗಳ

ಮೊತ್ತವನ್ನು ಇನ್ವೆಸ್ಟ್ ಮಾಡಿದರೆ ೧.೨೭% ಪ್ರತ್ಯಕ್ಷವಾಗಿ ೩.೬೪% ಪರೋಕ್ಷವಾಗಿ ಉದ್ಯೋಗ ನಿರ್ಮಾಣವಾಗುತ್ತದೆ. ರೈತನು ಬರೀ ಒಂದು ಲಕ್ಷರೂಪಾಯಿ ಇನ್ವೆಸ್ಟ್ ಮಾಡಿದರೆ ಅವನ ಉತ್ಪತ್ತಿಗೆ ೧.೨೭% ಪ್ರತ್ಯಕ್ಷವಾಗಿ ಲೇಬರ್ ಸಿಗುತ್ತದೆ, ೩.೬೪% ರಷ್ಟು ಪರೋಕ್ಷವಾಗಿ ಅವನಿಗೆ ಉದ್ಯೋಗಗಳ ನಿರ್ಮಾಣವಾಗುತ್ತದೆ. ಯಾವುದೇ ಇಂಡಸ್ಟ್ರಿಯಲ್ ಪಾಲಿಸಿಯಲ್ಲಿ ಈ ಒಂದು ಪದ್ಧತಿ ಇಲ್ಲ. ಕೃಷಿ ಅವಲಂಬಿತವಾಗಿರುವ ನಮ್ಮ ಈ ದೇಶದಲ್ಲಿ, ಹಾಗೂ ರಾಜ್ಯದಲ್ಲಿ ನಾವು ಇದಕ್ಕೆ ಆದ್ಯತೆಯನ್ನು ಕೊಡುವಂತಹ ಕೆಲಸ ಹಂತ ಹಂತವಾಗಿ ಮಾಡುವುದನ್ನು ಬಿಟ್ಟು ಇವತ್ತು ಏಕ್‌ದಂ ನಾವು ಮಾಡದಿದ್ದರೆ ಮುಂದಿನ ದಿನಗಳಲ್ಲಿ ಕಷ್ಟವಾಗುತ್ತದೆ. ಇವತ್ತು ಬೆಳೆಗಳ ರಫ್ತಿನ ಬಗ್ಗೆ ಹೇಳುವುದಾದರೆ ನಾಚಿಕೆ ಬೀಳಬೇಕು. ನಮ್ಮ ದೇಶದಿಂದ, ನಮ್ಮಲ್ಲಿ ಬೆಂಗಳೂರು ಸುತ್ತಮುತ್ತ ಫ್ಲೋರಿಕಲ್ಚರ್ ಬಹಳ ಇದೆ, ಮಾನ್ಯ ಕೃಷಿಮಂತ್ರಿಗಳು ಇದನ್ನು ಸ್ವಲ್ಪ ಕೇಳಬೇಕು. ಫ್ಲೋರಿಕಲ್ಚರ್ ನಮ್ಮ ದೇಶದಿಂದ ೧ ಕಿ.ಲೋ.ಗೆ ೪೦೦ ಚಿಲ್ಲರೆ ರೂಪಾಯಿಗೆ ಹೋಗುತ್ತದೆ. ಪಾಕಿಸ್ತಾನದಲ್ಲಿ ಕೇವಲ ಆರು ರೂಪಾಯಿ ವೆಚ್ಚವಾಗುತ್ತಿದೆ. ಇದನ್ನು ಯಾರಿಗೆ ಹೇಳೋಣ ? ಪಾಕಿಸ್ತಾನದಲ್ಲಿ ಕೇವಲ ಆರು ರೂಪಾಯಿಗೆ ಒಂದು ಕೆ.ಜಿ. ಹೂವು ಲಂಡನ್‌ಗೆ ಹೋಗಿ ಬೀಳುತ್ತದೆ. ನಮ್ಮದು ಬೇರೆ ದೇಶಗಳಿಗೆ, ಲಂಡನ್‌ಗೆ, ನೆದರ್‌ಲ್ಯಾಂಡ್ಸ್‌ಗೆ ಹೋಗಬೇಕಾದರೆ ಅಥವಾ ಯಾವುದೇ ಯೂರೋಪ್ ದೇಶಗಳಿಗೆ ಹೋಗಬೇಕಾದರೆ ೪೦೦ ರೂಪಾಯಿಯಷ್ಟು ಖರ್ಚು ಮಾಡಬೇಕಾಗುತ್ತದೆ. ಅಲ್ಲಿ ಆ ಸಬ್ಸಿಡಿಯನ್ನು ಕೊಟ್ಟು ಆ ಫ್ಲೋರಿಕಲ್ಚರ್ ಅನ್ನು ಬೆಳೆಸುತ್ತಾರೆ. ಮಾನ್ಯ ಬೈರೆಗೌಡರು ಇದ್ದಾರೆ, ನಾನು ಮಂತ್ರಿಯಾದ ಮೇಲೆ ಫೆಬ್ರವರಿ ೨೮ ಫ್ಲೋರಿಕಲ್ಚರ್ ಬಗ್ಗೆ ಒಂದು ಆಕ್ಷನ್ ಮಾಡುವ ಬಗ್ಗೆ ಓಪನ್ ಮಾಡಿಸಬೇಕೆಂದು ಹೇಳಿದೆ. ಅಲ್ಲಿಯ ಕಂಟ್ರಾಕ್ಟರುಗಳ, ಮತ್ತು ಇಂಜಿನಿಯರುಗಳ ವ್ಯವಹಾರಗಳಲ್ಲಿ ಅಲ್ಲಿ ಸ್ವಲ್ಪ ಡಿಲೇ ಆಯಿತು. ಆದರೆ ಅಷ್ಟರೊಳಗಾಗಿ ಇದಾದ ಮೇಲೆ ಎರಡು ತಿಂಗಳಿಂದ ಬಂದಿಲ್ಲ. ಆದಷ್ಟು ಬೇಗನೆ ಅದನ್ನು ಮಾಡಬೇಕು, ಅದಕ್ಕೆ ಅಪೆಡಾದವರು ಹಣವನ್ನು ಕೊಟ್ಟಿದ್ದಾರೆ, ಈಗ ನೀವು ಅದನ್ನು ಮಾಡದೇ ಇದ್ದರೆ ದುಡ್ಡು ಕೊಡುವುದಿಲ್ಲವೆಂದು ಹೇಳುತ್ತಿದ್ದಾರೆ. ಅಗ್ರೋ ಇಂಡಸ್ಟ್ರೀಸ್‌ಗೆ ಒಬ್ಬ ಅಧಿಕಾರಿಯನ್ನು ಹಾಕಿದ್ದೀರಿ, ಅವರು ಪೇಪರ್ ನೋಟ್ ಬಿಟ್ಟು ಬೇರೆ ಏನೂ ನೋಡುವುದಿಲ್ಲವೆಂದು ಹೇಳುತ್ತಿದ್ದಾರೆ. ನಾನು ಬಹಳ ಸಲ ಆ ಅಧಿಕಾರಿಯನ್ನು ಬದಲಾವಣೆ ಮಾಡಿ ಎಂದು ಹೇಳಿದೆ. ಅದೇಕೋ ಆಗ ಅದು ಬಹಳ ಹಿಂದು ಮುಂದು ಆಗಿ ಹೋಯಿತು. ಈಗಲಾದರೂ ಆ ಅಧಿಕಾರಿಯನ್ನು ಬದಲಾಯಿಸಿ ಅಲ್ಲಿಗೆ ಬೇರೊಬ್ಬ ಅಧಿಕಾರಿಯನ್ನು ನೇಮಿಸಿ ಅದನ್ನು ಬೇಗನೆ ಕನಿಷ್ಟ ಇಂಥದೊಂದು ದಿನಾಂಕಕ್ಕೆ ಎಂದು ಅದನ್ನು ಓಪನ್ ಮಾಡಿದರೆ ಅಲ್ಲಿ ಯಾರು ಫ್ಲೋರಿಕಲ್ಚರ್ ಬೆಳೆಯುತ್ತಾರೆ, ಅವರಿಗೆ ಅನುಕೂಲವಾಗುತ್ತದೆಂದು ನಾನು ಈ ಸಮಯದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ರಫ್ತಿಗೆ ಜಾಗತಿಕ ಮಾರುಕಟ್ಟೆಯಲ್ಲಿ ೨೦ ವರ್ಷಗಳಲ್ಲಿ ಸಂಸ್ಕರಿಸಿದ ಆಹಾರ ಕೇವಲ ಅರ್ಧ ಇದ್ದದ್ದು ಇವತ್ತು ಕೇವಲ ಎರಡನೇ ಮೂರು ಭಾಗಕ್ಕೆ ವೃದ್ಧಿಯಾಗುತ್ತದೆ ಅಷ್ಟೆ. ೨೦ರಿಂದ ೫೪ ವರ್ಷ ವಯೋಮಿತಿಯ ಜನಸಂಖ್ಯೆ ಇರುವಂತಹದ್ದು ಆಗಿದ್ದು ಇವತ್ತು ಆಹಾರದ ಅನುಕೂಲತೆ ಶೇಕಡ ೧೩ ರಷ್ಟು ವೃದ್ಧಿಯಾಗಿದೆ. ೧೯೯೧ ರಲ್ಲಿ ೩೭೦ ಮಿಲಿಯನ್ ಟನ್‌ಗಳಷ್ಟು ಉತ್ಪತ್ತಿಯಾಗಿದೆ, ೨೦೦೧ ರಲ್ಲಿ ೪೫೦ ಟನ್ ಮಿಲಿಯನ್ ಟನ್ಸ್ ಉತ್ಪನ್ನವಾಗಿದೆ. ೨೦೧೦ಕ್ಕೆ ೫೭೭ ಮಿಲಿಯನ್ ಟನ್‌ಗಳಷ್ಟು ಆಗುವಂತಹ ಅಂದಾಜು ಇದೆ, ಇವತ್ತು ಈ ರೀತಿಯ ಮುಖ್ಯಾಂಶಗಳನ್ನು ನೋಡಬೇಕಾಗುತ್ತದೆ.

ಇವತ್ತು ಆಹಾರ ಸಂಸ್ಕರಣೆ ತುಂಬಾ ಕಡಿಮೆಯಾಗಿದೆ. ನಮ್ಮ ದೇಶದಲ್ಲಿ ಶೇಕಡ ಎರಡರಷ್ಟಿದೆ. ಮಲೇಶಿಯಾದಲ್ಲಿ ೮೦%, ಥೈಲಾಂಡ್ ನಲ್ಲಿ ೩೦%, ಥೈಲಾಂಡ್ ನಮ್ಮ ದೇಶಕ್ಕಿಂತಲೂ ಬಡದೇಶ, ಕಡಿಮೆ ಎಕಾನಮಿ ಇರುವಂತಹ ದೇಶ. ಚೈನಾದಲ್ಲಿ ೨೩%, ಫಿಲಿಫೈನ್ಸ್‌ನಲ್ಲಿ ೪೩%, ಯುನೈಟೆಡ್ ಕಿಂಗ್‌ಡಮ್‌ನಲ್ಲಿ ೧೮೮% ಅಷ್ಟು ಇದೆ. ನಮ್ಮ ದೇಶದಲ್ಲಿ ಕೇವಲ ೨% ಇದೆ. ಇವತ್ತು ಈ ಆಹಾರ ಸಂಸ್ಕರಣೆಯ ಅಭಿವೃದ್ಧಿಯಲ್ಲಿ ಏನೇನು ಅನುಕೂಲತೆಗಳಿವೆ ಎಂಬುದನ್ನೂ ಸಹ ನಾವು ಚಿಂತನೆ ಮಾಡಬೇಕು. ಇವತ್ತು ಯೂನಿಟ್ ಬೆಲೆ ನಾವು ಕಡಿಮೆ ಮಾಡಬೇಕು. ಸಾಮರ್ಥ್ಯವನ್ನು ಕಡಿಮೆ ಮಾಡಿ ಕರೆಂಟ್‌ಗೆ ಸಬ್ಸಿಡಿ ಕೊಡಬೇಕಾಗುತ್ತದೆ. ಇವತ್ತು ನಮ್ಮ ವಾರ್ಷಿಕ ತಲಾ ಆದಾಯ ಎಷ್ಟಿದೆ ಎಂದರೆ ಡಾಲರ್‌ಗಳ ಲೆಕ್ಕದಲ್ಲಿ ೫೦೦ ಡಾಲರ್ ಇದೆ, ಅಮೆರಿಕದಲ್ಲಿ ಮುವತ್ತಮೂರು ಸಾವಿರ ಡಾಲರ್ ಇದ್ದೆ, ಚೈನಾದಲ್ಲಿ ೧೧೦೦ ಡಾಲರ್ ಇದೆ, ಇದನ್ನು ಏಕೆ ಹೇಳುತ್ತೇನೆಂದರೆ ನಮ್ಮಲ್ಲಿ ಈ ಆಹಾರ ಸಂಸ್ಕರಣೆ ವೃದ್ಧಿಯಲ್ಲಿ ಬಹಳಷ್ಟು ಅನಾನುಕೂಲಗಳೇ ಜಾಸ್ತಿಯಾಗಿರುವುದರಿಂದ ರೈತರು ವೃದ್ಧಿಯಾಗುತ್ತಿಲ್ಲ, ನೀವು ನಿನ್ನೆ ಅವರಿಗೆ ಹೇಳಿದಂತಹ ಸಲಹೆಗಳ ಬಗ್ಗೆ ನಾವು ಇವತ್ತು ಚಿಂತನೆಯನ್ನು ಮಾಡಬೇಕು. ಮೂಲಭೂತ ಸೌಕರ್ಯಗಳು ಬಹಳ ಮುಖ್ಯವಾಗಿದೆ. ಅದಕ್ಕೆ ವಿದ್ಯುಚ್ಛಕ್ತಿ ಸೌಕರ್ಯ ಇರಬೇಕು, ಶೀತಲ ಸರಪಳಿ, ನೀರು, ದಾಸ್ತಾನು, ಸಾಗಾಣಿಕೆ ನಿರ್ವಹಣೆ ಇವೆಲ್ಲಾ ಹೆಚ್ಚಿಗೆ ಇರಬೇಕು, ಇವತ್ತು ರೈತರಿಗೆ ಬಹಳ ಮುಖ್ಯವಾದದ್ದು ಮೂರು ಅಂದರೆ ಒಂದು ಚೀಪ್ ಕ್ರೆಡಿಟ್, ಎರಡನೆಯದು ನೀರು, ಮೂರನೆಯದು ಮಾರ್ಕೆಟ್. ಮಾನ್ಯ ಅಧ್ಯಕ್ಷರೆ, ಚೀಪ್ ಕ್ರೆಡಿಟ್ ಬಗ್ಗೆ ಹೇಳಬೇಕಾದರೆ, ಮಾನ್ಯ ಸಿದ್ಧರಾಮಯ್ಯನವರನ್ನು ಮತ್ತು ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಧರಂಸಿಂಗ್ ಅವರನ್ನು ಬಹಳ ಪ್ರಶಂಸೆ ಮಾಡುತ್ತೇನೆ. ಇವತ್ತು ೬% ಬಡ್ಡಿಗೆ ರೈತನಿಗೆ ಸಾಲ ಕೊಟ್ಟಿದ್ದರಿಂದ ಬಹಳ ಅನುಕೂಲವಾಗಿತ್ತು. ಇವತ್ತು ಕಾರಿಗಾದರೂ ೬ ರಿಂದ ೭ ಪರ್ಸೆಂಟ್ ಬಡ್ಡಿಗೆ ಸಾಲ ಸಿಗುತ್ತದೆ. ಮನೆ ಕಟ್ಟಲಿಕ್ಕೆ ೭%ಗೆ ಸಿಗುತ್ತದೆ, ಆದರೆ ರೈತ ವ್ಯವಸಾಯಕ್ಕೆ ಕೇಳಿದರೆ ೧೪% ಬಡ್ಡಿ ಕೊಡಬೇಕಾಗುತ್ತದೆ. ಅವನು ಸೀಡ್ಸ್ ತೆಗೆದುಕೊಂಡರೆ ೧೮% ಬಡ್ಡಿ ಕೊಡಬೇಕಾಗುತ್ತದೆ. ಇವತ್ತು ಈ ಪರಿಸ್ಥಿತಿಯಲ್ಲಿ ನಾವು ಏನು ಮಾಡಬೇಕೆಂಬುದನ್ನು ಚಿಂತನೆ ಮಾಡಬೇಕು. ನಮ್ಮ ಮೂಲ ಸೌಕರ್ಯಗಳಲ್ಲಿ ಇದು ಬಹಳ ಮುಖ್ಯವೆಂದು ನಾನು ಇವತ್ತು ಹೇಳಲಿಚ್ಛಿಸುತ್ತೇನೆ. ಭಾರತದಲ್ಲಿ ಸುಮಾರು ಶೇಕಡ 30 ರಷ್ಟು ರೈತರ ಹುಟ್ಟುವಳಿಗೆ ಟ್ಯಾಕ್ಸ್ ಹಾಕುವುದು ಏನಿತ್ತು ಅದು ಇವತ್ತು ಶೇಕಡ 40 ರಷ್ಟು ಹೆಚ್ಚಾಗಿದೆ, ಈಗ ಇದು ಐರ್‌ಲ್ಯಾಂಡ್, ಮಲೇಶಿಯಾದಲ್ಲಿ ಬರೇ ಸೊನ್ನೆ, ನಮ್ಮ ದೇಶದಲ್ಲಿ 30–40% ಟ್ಯಾಕ್ಸ್ ಹಾಕುತ್ತಾರೆ. . . . .

ಶ್ರೀ ಆರ್. ಶ್ರೀನಿವಾಸ್ :– ಒಂದು ನಿಮಿಷ ಈಲ್ಡ್ ಆಗಿ.

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ :– ನಾನು ಈಲ್ಡ್ ಆಗುವುದಿಲ್ಲ

ಶ್ರೀ ಹೆಚ್. ಎಸ್. ಮಹದೇವಪ್ರಸಾದ್ :– ಮಾನ್ಯ ಅಧ್ಯಕ್ಷರೇ ನೀವು ಅವರಿಗೆ 1 ಗಂಟೆ 10 ನಿಮಿಷಕ್ಕೆ ಮಾತನಾಡಲು ಅವಕಾಶ ಕೊಟ್ಟಿದ್ದಿರಿ. ಇನ್ನೂ ಎಷ್ಟು ಸಮಯ ಅವರು ಮಾತನಾಡುತ್ತಾರೆ? ನಮಗೆ ಒಂದು ಸಣ್ಣ ಕ್ಲಾರಿಫಿಕೇಶನ್ ಕೇಳಲೂ ಸಹ ಅವಕಾಶ ಕೊಡುವುದಿಲ್ಲ.

(ಗೊಂದಲ)

ಅಧ್ಯಕ್ಷರು :– 5 ನಿಮಿಷದಲ್ಲಿ ಮುಗಿಸಿ.

ಶ್ರೀ ಆರ್. ಶ್ರೀನಿವಾಸ್ :– ಮಾನ್ಯ ಅಧ್ಯಕ್ಷರೇ ಬಹುಶ ಃ ಎಲ್ಲರೂ ನಮ್ಮ ಊರಿನಲ್ಲಿ ಒಂದು ಗಾದೆ ಮಾತು ಹೇಳುತ್ತಾರೆ. ದಯವಿಟ್ಟು ಯಾರೂ ಜಾತಿ ಬಗ್ಗೆ ತಪ್ಪು ತಿಳಿದು ಕೊಳ್ಳಬಾರದು. ಊರೆಲ್ಲಾ ಜಂಗಮರಿದ್ದರಂತೆ ಕೋಳಿ ಪತ್ತೆ ಇರುವಂತಿಲ್ಲ. ಬಹುಶ ಃ ಇವೆಲ್ಲವನ್ನೂ ಕೂಡ ಎಲ್ಲರೂ. . . .

ಶ್ರೀ ಹೆಚ್. ಎಸ್. ಮಹದೇವಪ್ರಸಾದ್ :– ಮಾನ್ಯ ಶ್ರೀನಿವಾಸಗೌಡರು ಶ್ರೀನಿವಾಸ್‌ರವರ ಮನೆಗೆ ಹೋದಾಗಲೆಲ್ಲಾ ಕೋಳಿ ಊಟಕ್ಕೋಸ್ಕರ ಪಕ್ಕದ ಮನೆಗೆ ಕಳುಹಿಸುತ್ತಿದ್ದರಂತೆ.

ಶ್ರೀ ಆರ್. ಶ್ರೀನಿವಾಸ್ (ಮುಳಬಾಗಿಲು) :– ಮಾನ್ಯ ಅಧ್ಯಕ್ಷರೇ, ಈ ಕಡೆ ಆ ಕಡೆ ಚರ್ಚೆ ಮಾಡಿ ಸಲಹೆಗಳನ್ನು ಕೊಡುತ್ತಿದ್ದರು ಗೌರವಾನ್ವಿತ ಹಿರಿಯ ಸದಸ್ಯರಾದಂತಹ ಶ್ರೀ ರಮೇಶ್‌ಕುಮಾರ್‌ರವರೂ ಸಹ ಇದರ ಬಗ್ಗೆ ಚಿಂತನೆ ಮಾಡಿ ಸಲಹೆ ಕೊಟ್ಟರು, ಗೌರವಾನ್ವಿತ ಮಾಜಿ ಕೃಷಿ ಮಂತ್ರಿಗಳೂ ಸಹ ಹೆಚ್ಚಿನ ಸಲಹೆಗಳನ್ನು ಕೊಡುತ್ತಿದ್ದಾರೆ. ಈ ಕಡೆ ಇರುವವರೂ ಸಹ ಕೇಂದ್ರ ಸರ್ಕಾರದಲ್ಲಿ 5 ವರ್ಷಗಳ ಕಾಲ ಮತ್ತು ಅನೇಕ ರಾಜ್ಯಗಳಲ್ಲೂ ಕೂಡ ಆಡಳಿತವನ್ನು ನಡೆಸಿರತಕ್ಕಂಥವರು. ಇವರೆಲ್ಲರ ಚಿಂತನೆ ಏನಾಗುತ್ತಿದೆ ? ರೈತರ ಬಗ್ಗೆ ಗಂಟೆಗಟ್ಟಲೆ ಭಾಷಣ ಹೊಡೆಯುತ್ತಿರುವುದೇ ಆಗಿದೆ. ರೈತರಿಗೆ ಸರಿಯಾದ ದರ ನಿಗಧಿಪಡಿಸಿಲ್ಲ. ಏನಾದರೂ ಆಗಲಿ, ಯಾವ ರೀತಿಯಲ್ಲಿಯಾದರೂ ಸಹ ನಾವು ರೈತರಿಗೆ ಹೆಚ್ಚಿನ ರೀತಿಯಲ್ಲಿ ಸಬ್ಸಿಡಿ ಕೊಟ್ಟಿಲ್ಲ ಎಂದು. ಸನ್ಮಾನ್ಯ ಮಾಜಿ ಪ್ರಧಾನ ಮಂತ್ರಿಗಳು ಐಟಿ ಬಿಟಿ ಬಗ್ಗೆ ಸ್ವಲ್ಪ ವಿಷಯ ಪ್ರಸ್ತಾಪಿಸಿದ್ದಕ್ಕೆ ಎಲ್ಲರೂ ಕೂಡ ವಿರೋಧ ಮಾಡಿ ಬಿಟ್ಟರು. ಮಾನ್ಯ ದೇವೇಗೌಡರು ಐಸಿ ಬಿಟಿ ವಿರೋಧ ಎಂದು. ಅವರು ಹೇಳಿದ್ದು ಇಷ್ಟೇ. ಏನು ನಾವು ಐವಿ ಬಿಟಿ ಯವರಿಗೆ ಸರ್ಕಾರದಿಂದ ರಿಯಾಯಿತಿಯನ್ನು ಕೊಡುತ್ತಿದ್ದೇವೆ ಬಹುಶ ಇದರಿಂದ ರೈತನಿಗೆ ಅನ್ಯಾಯವಾಗುತ್ತಿದೆ. ಅದು ಹೆಚ್ಚಿನ ಲಾಭಗಳಿಸತಕ್ಕಂಥ ಒಂದು ಉದ್ದಿಮೆಯಾಗಿರುವುದರಿಂದ ರೈತರ ಜಮೀನನ್ನು ನಾವು ಏಕೆ ರಿಯಾಯಿತಿ ದರದಲ್ಲಿ ಕೊಡಬೇಕು? ಅವರು ಮಾರ್ಕೆಟ್ ಬೆಲೆ ಕೊಡಲಿ ಎನ್ನುವ ಒಂದು ಉದ್ದೇಶದಿಂದ ಘೋಷಣೆ ಮಾಡಿದ್ದಕ್ಕೆ ಎಲ್ಲರೂ ದೊಡ್ಡದಾಗಿ ಮಾಡಿಬಿಟ್ಟರು.

(ಗೊಂದಲ)

ಶ್ರೀ ಕೆ. ಆರ್. ರಮೇಶ್‌ಕುಮಾರ್ :– ಮಾನ್ಯ ಅಧ್ಯಕ್ಷರೇ ಕಬ್ಬು ಬೆಳೆಗಾರರಾದ ಶ್ರೀ ರಾಜೀವ್ ಚಂದ್ರಶೇಖರ್ ಅವರು ಅದಕ್ಕೇ ಇವತ್ತು ಇಲ್ಲಿಗೆ ಬಂದಿರುವುದು. ಅವರು ಐಟಿ ಬಿಟಿ ಬಿಟ್ಟುಬಿಟ್ಟು ಬಂದಿದ್ದಾರೆ.

ಶ್ರೀ ಆರ್. ಶ್ರೀನಿವಾಸ್ :– ಒಂದು ನಿಮಿಷ ಬಿಡಿ. ಮಾತನಾಡುತ್ತೇನೆ ನಿಮ್ಮ ವಿಷಯಕ್ಕೂ ಬರುತ್ತೇನೆ. ಇದನ್ನು ಮಾತನಾಡುವುದು ಬಹಳ ಸುಲಭ ನಾವೆಲ್ಲಾ ಈ ಬಗ್ಗೆ ಚಿಂತನೆ ಮಾಡಿದಾಗ ಸರ್ಕಾರದವರೂ ಕೂಡ ಇವತ್ತು ರೈತರ ಒಂದು ಪ್ರೋಸೆಸಿಂಗ್ ಯುನಿಟ್ಸ್ ಬಗ್ಗೆ ಹೇಳುತ್ತಿದ್ದಾರೆ ನಿಜ. ನಾನು ಮೊನ್ನೆ ತಾನೇ ತಮಿಳುನಾಡಿಗೆ ಹೋದಾಗ ಒಂದು ಪ್ರೋಸೆಸಿಂಗ್ ಯುನಿಟ್ ಪ್ರಾರಂಭ ಆಗಿದೆ. ಅದು ಯಾವುದು ಅಂದರೆ ಬಾಳೆಯದು, ಅದನ್ನು ಡ್ರೈ ಫ್ರೂಟ್ ಮಾಡತಕ್ಕಂಥಾದ್ದಕ್ಕೆ

ಕೇವಲ 50 ಸಾವಿರ ರೂಪಾಯಿ ಸಾಕು. 50 ಸಾವಿರ ರೂಪಾಯಿಯನ್ನು ಅವನು ಇನ್‌ವೆಸ್ಟ್ ಮಾಡಿದರೆ ಡ್ರೈ ಫ್ರೂಟ್ ಮಾಡತಕ್ಕಂಥ ಪ್ರೋಸೆಸಿಂಗ್ ಯುನಿಟ್ ಮಾಡಬಹುದು. ಅದನ್ನು ಸುಮಾರು 3 ರಿಂದ 4 ತಿಂಗಳು ಇಡಬಹುದು. ಇಂತಹ ಅನೇಕ ಯೋಜನೆಗಳು ಇದ್ದಾಗ್ಯೂ ಏಕೆ ರಿಯಾಯಿತಿ ದರದಲ್ಲಿ ನಮ್ಮಲ್ಲಿ ಪ್ರೋಸೆಸಿಂಗ್ ಯುನಿಟ್‌ಗಳಿಗೆ ಸರ್ಕಾರ ಗಮನ ಕೊಟ್ಟಿಲ್ಲ, ಇವರು ಬರೀ ಭಾಷಣ ಮಾಡುತ್ತಿದ್ದಾರೆ. ಮಾನ್ಯ ಮಾಜಿ ಕೃಷಿ ಮಂತ್ರಿಗಳೂ ಸಹ ಭಾಷಣ ಹೊಡೆದರು. ಅವರ ಅವಧಿಯಲ್ಲಿ ಇದನ್ನೆಲ್ಲಾ ಮಾಡಬಹುದಾಗಿತ್ತು. ಆಗ ನಾನೂ ಸಹ ಹಾರ್ಟಿಕಲ್ಚರ್ ಮಂತ್ರಿಯಾಗಿದ್ದೆ ನಾನು ಹಾರ್ಟಿಕಲ್ಚರ್ ಮಂತ್ರಿಯಾಗಿದ್ದಾಗಲೂ ಸಹ 2 ಕೋಟಿ 35 ಲಕ್ಷ ರೂಗಳನ್ನು ಕೊಟ್ಟಿರತಕ್ಕಂಥ ದಾಖಲೆ ಇದೆ. ಇಂತಹ ಸಂದರ್ಭದಲ್ಲಿ ಸಲಹೆ ಕೊಡುವುದಕ್ಕಿಂತ ಮುಂಚೆ ನಾವು ಆಡಳಿತದಲ್ಲಿದ್ದಾಗ, ಅಧಿಕಾರದಲ್ಲಿದ್ದಾಗ ರೈತನ ಬಗ್ಗೆ ಚಿಂತನೆ ಮಾಡಿ ಏನು ಅನುಷ್ಠಾನಕ್ಕೆ ತಂದಿದ್ದೇವೆ ಎನ್ನುವ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಈ ಕಡೆ ಆಗಬಹುದು ಅಥವಾ ಆ ಕಡೆ ಆಗಬಹುದು. ಮಾನ್ಯ ಅಧ್ಯಕ್ಷರೇ, ಅದಕ್ಕೆ ಒಟ್ಟಾರೆ ತಾವೆಲ್ಲಾ ಕೂಡ . . .

ಅಧ್ಯಕ್ಷರು :– ಶ್ರೀನಿವಾಸಗೌಡರೆ, ತಾವುಗಳು ಮಾವ–ಭಾವ, ಅವರು ಹೇಳುವುದು ಭೋದನೆ ಮಾಡಲಿಕ್ಕೆ ಹೊರತು ಆಚರಣೆಗೆ ಅಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಆರ್. ಶ್ರೀನಿವಾಸ್ :– ಈಗ ನಾನು ಒಟ್ಟಾರೆ ಹೇಳುವುದು ಇಷ್ಟೇ.

ಶ್ರೀ ಕೆ. ಶ್ರೀನಿವಾಸಗೌಡ :– ನಾನು ಧೈರ್ಯದಿಂದ ಹೇಳುತ್ತಿದ್ದೇನೆ. ನಾನು ಮಂತ್ರಿಯಾಗಿದ್ದಾಗ ನಾನು ಏನು ಮಾಡಿದ್ದೇನೆ ಎನ್ನುವುದು ಗೊತ್ತಿದೆ. ಪೊಲಿಟಿಕಲ್ ವಿಲ್ ಪವರ್ ಇದ್ದರೆ ಏನು ಬೇಕಾದರೂ ಮಾಡಬಹುದು ಎನ್ನುವುದಕ್ಕೆ ಕೆರೆಗಳಲ್ಲಿ ನೀರು ನಿಂತಿರುವುದೇ ಒಂದು ಸಾಕ್ಷಿ : ಅವರ ಊರಿನಲ್ಲಿ ಕೆರೆಯಲ್ಲಿ ನೀರು ನಿಂತಿರುವುದೇ ಅದಕ್ಕೆ ಸಾಕ್ಷಿ. ಅದನ್ನು ನಾನು ಮಾಡಿ ತೋರಿಸಿದ್ದೇನೆ

ಶ್ರೀ ಎಸ್. ಎಸ್. ಪಾಟೀಲ್ :– ಮಾನ್ಯ ಅಧ್ಯಕ್ಷರೇ, ಇವರು ಮಾಡಿ ತೋರಿಸಿದ್ದೇನೆಂದು ಹೇಳಿದಲ್ಲಾ

ಶ್ರೀ ಆರ್. ಶ್ರೀನಿವಾಸ್ :– ನಾನು ತಮ್ಮ ಮೂಲಕ ಈ ಸದನವನ್ನು ಕೇಳಿ ಕೊಳ್ಳುವುದು, ಭಾಷಣ ಮಾಡುವುದಕ್ಕಿಂತ ಹೆಚ್ಚಾಗಿ ಏನು ಸನ್ಮಾನ್ಯ ಗೌರವಾನ್ವಿತ ಡಾ॥ ಅಬ್ದುಲ್ ಕಲಾಂರವರು ಮಾಡಿರತಕ್ಕಂಥ ಭಾಷಣದಲ್ಲಿ ತೋಟಗಾರಿಕೆ ಇರಬಹುದು. ಕೃಷಿ ಇರಬಹುದು ಮತ್ತು ಪ್ರವಾಸೋದ್ಯಮ ಇರಬಹುದು, ಇದರ ಬಗ್ಗೆ ಚಿಂತನೆ ಮಾಡಿ ಹೆಚ್ಚಿನ ರೀತಿಯಲ್ಲಿ ರಿಯಾಯಿತಿ ದರದಲ್ಲಿ ಪ್ರೋಸೆಸಿಂಗ್ ಯುನಿಟ್ ಮಾಡಿಕೊಳ್ಳುವುದಕ್ಕೆ 50 ಪರ್ಸೆಂಟ್ ರಿಯಾಯಿತಿ ಕೊಡಲಿ ಸಂತೋಷ ಆ ಬಗ್ಗೆ ಬೇಕಾದರೆ ಚಿಂತನೆ ಮಾಡಲಿ. ಇವತ್ತು ಬೆಂಬಲ ಬೆಲೆ ಕೊಡುವುದಿಲ್ಲ ಸರ್ಕಾರ, ಆಗಾಗ 5 ಕೋಟಿ 10 ಕೋಟಿ ರೂ.ಗಳು ಬರುವುದಕ್ಕಿಂತ ಮುಂಚಿತವಾಗಿ ಅದು ಶಾಶ್ವತವಾದ ಪರಿಹಾರ ರೂಪದಲ್ಲಿ ಕೊಡಬೇಕಾಗುತ್ತದೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ

ಶ್ರೀ ಕೆ. ಶ್ರೀನಿವಾಸಗೌಡ :– ಮಾನ್ಯ ಅಧ್ಯಕ್ಷರೇ, ನಾನು ಒಂದೇ ಒಂದು ಉದಾಹರಣೆ ಕೊಡುತ್ತೇನೆ. ನಮ್ಮಲ್ಲಿ 55 ವರ್ಷಗಳಲ್ಲಿ 50ಕ್ಕೂ ಹೆಚ್ಚಿನ ಪೊಟ್ಯಾಟೋ ತಳಿಗಳನ್ನು ಸೆಂಟ್ರಲ್ ಪೊಟ್ಯಾಟೋ ರೀಸರ್ಚ್ ಇನ್‌ಸ್ಟಿಟ್ಯೂಟ್ ತಂದಿದೆ. ಆದರೆ ಇದು ದೇಶೀಯ ಮಾರುಕಟ್ಟೆಗೆ ಮಾತ್ರ

ಬಿಡುಗಡೆಯಾಗಿದೆ. ಆದರೆ ಇದನ್ನು ಬೇರೆ ದೇಶಗಳಿಗೆ ರಫ್ತು ಮಾಡುವಂತಹ ಪರಿಸ್ಥಿತಿಗೆ ನಾವು ಇನ್ನೂ ಹೋಗಿಲ್ಲ. ಏಕೆ ಇದನ್ನು ಹೇಳುತ್ತಿದ್ದೇನೆಂದರೆ, 55 ವರ್ಷಗಳಲ್ಲಿ 50ಕ್ಕೂ ಹೆಚ್ಚಿನ ತಳಿಗಳನ್ನು ಸಂಶೋಧನೆಗಳ ಮೂಲಕ ತಂದಿದ್ದರೂ ಕೂಡ ಇವತ್ತು ಸೆಂಟ್ರಲ್ ಪೊಟ್ಯಾಟೋ ರಿಸರ್ಚ್ ಇನ್‌ಸ್ಟಿಟ್ಯೂಟ್‌ನವರು ಬೇರೆ ಕಡೆ ಇದನ್ನು ಕಳುಹಿಸುವಂತಹ ಕೆಲಸವನ್ನು ಮಾಡುವುದಕ್ಕೆ ಹೋಗಿಲ್ಲ. ರಾಜ್ಯದಲ್ಲಿ ವಿಭಿನ್ನವಾಗಿ ಶೇಕಡ 8 ರಿಂದ 23ರಷ್ಟು ಇರುವ ಈ ಕೇಂದ್ರ ಮಾರಾಟ ಮತ್ತು ತೆರಿಗೆ ಶೇಕಡ 40 ರಷ್ಟು ಇದೆ. ರೈತರು ಬೆಳೆದಂತಹ ಬೆಳೆಗಳಿಗೆ ಅಂದರೆ ಇವತ್ತು ತಾಜಾ ಹಣ್ಣಿಗೆ ರೇಟು ಕಡಿಮೆಯಾಗುತ್ತದೆ ಪ್ರೋಸೆಸಿಂಗ್‌ಗೆ ಹೋಗಿ ಅದನ್ನು ನಾವು ಪ್ರೀ ಕೂಲಿಂಗ್ ಪೋಸ್ಟ್ ಹಾರ್ವೆಸ್ಟಿಂಗ್ ಇವೆಲ್ಲಾ ಮಾಡಿದಾಗ ಬೆಲೆಗಳು ಜಾಸ್ತಿಯಾಗುತ್ತವೆ. ಈಗ ತಾನೇ ಹೇಳಿದರು ಮಾಜಿ ಪ್ರಧಾನಿಗಳು ಐಟಿ ಬಿಟಿ ಬಗ್ಗೆ ಮಾತನಾಡಿದರು ಎಂದು. ಅವರು ಐಟಿ ಬಿಟಿ ಬಗ್ಗೆ ಕೂಡ ಮಾತನಾಡಿದರು. ಸ್ಲಮ್ ಬಗ್ಗೆಯೂ ಮಾತನಾಡಿದರು. ಅದು ಒಂದು ಎಲೆಕ್ಷನ್ ಆಗುತ್ತಿದ್ದಂತೆಯೇ ಆ ಸ್ಲಮ್ ಎಲ್ಲಿ ಹೋಗಿಬಿಟ್ಟಿತೋ ಗೊತ್ತಿಲ್ಲ ನೀತಿಗಳನ್ನು ಹೇಳುವುದಕ್ಕೆ ನನಗೂ ಬರುತ್ತದೆ. ಬಹಳಷ್ಟು ಎಲ್ಲಾ ಸ್ಲಮ್‌ಗಳಿಗೆ ಅವತ್ತೇ ಸೈಟ್‌ಗಳನ್ನು ಕೊಡುವಂತೆ ಇತ್ತು. ಎಲ್ಲಾ ಸ್ಲಮ್‌ಗಳಿಗೆ ಬೇಕಾದ ಮನೆಗಳನ್ನು ಕಟ್ಟುವಂತೆ ಕಾರ್ಯಕ್ರಮ ಇತ್ತು. ಮಾಜಿ ಪ್ರಧಾನಿಗಳು ಭಾಷಣ ಮಾಡಿದ್ದೇ ಮಾಡಿದ್ದು. ಎಲೆಕ್ಷನ್ ಮುಗಿದು ಹೋಯಿತು, ಆ ಸ್ಲಮ್ ಬಗ್ಗೆ ಪ್ರಸ್ತಾಪವೂ ಇಲ್ಲ, ಆ ಸ್ಲಮ್‌ಗಳಿಗೆ ಬೇಕಾದ ಮನೆಗಳನ್ನು ಕಟ್ಟುವವರೂ ಇಲ್ಲ. ಅವೆಲ್ಲಾ ಹೇಳುವುದಕ್ಕೆ ನಮಗೂ ಬರುತ್ತದೆ. ರಾಜಕಾರಣ ಈಗ ಬೇಡ. ರೈತರ ವಿಷಯ ಬಂದಾಗ ನಾವು ಎಲ್ಲಾ ರಾಜಕಾರಣಗಳನ್ನು ಮರೆತು, ರಾಜಕೀಯವನ್ನು ಮರೆತು ರೈತರ ವಿಷಯದಲ್ಲಿ ಮಾತನಾಡೋಣ. ಅದು ಬಿಟ್ಟು ನಮಗೆ ತೋಚುವಂತಾದ್ದು ಐಟಿಬಿಟಿ. ಐಟಿ ಬಿಟಿ ಬಂದಿರುವುದಕ್ಕೆ ಮಾನ್ಯ ಅಧ್ಯಕ್ಷರೇ, ಪ್ರತಿ ತಿಂಗಳು 7 ಸಾವಿರ ಕೋಟಿ ರೂಪಾಯಿ ಈ ಬೆಂಗಳೂರು ಒಂದರಲ್ಲೇ ಖರ್ಚಾಗುತ್ತಿದೆ. ಕಾರು ತೆಗೆದುಕೊಳ್ಳುವುದು. ಸೈಟ್ ತೆಗೆದುಕೊಳ್ಳುವುದು ಇರಬಹುದು, ಮೋಟಾರ್ ಸೈಕಲ್ ತೆಗೆದುಕೊಳ್ಳುವುದು ಇರಬಹುದು ಇದೇನು ಆದಾಯವಲ್ಲವೇ ಈ ರಾಜ್ಯಕ್ಕೆ? 7 ಸಾವಿರ ಕೋಟಿ, 32 ಸಾವಿರ ಕೋಟಿ ರೂಗಳಂತೆ ಹೊರ ದೇಶಗಳಿಗೆ ಹೋಗುತ್ತದೆ ಇದು ಈ ದೇಶದ ಅಭಿವೃದ್ಧಿಯಲ್ಲವೆ ? ಅಥವಾ ಈ ರಾಜ್ಯದ ಅಭಿವೃದ್ಧಿಯಲ್ಲವೆ ? ನಾವು ರೈತನಿಗೆ ಒಳ್ಳೆಯ ಮಾತುಗಳನ್ನು ಹೇಳಿಬಿಡುವುದು. ಅವರು ಐಟಿ ಬಿಟಿಯಲ್ಲಿ ಇದ್ದು ಹೋದರು ಅದಕ್ಕೆ ಈ ರೀತಿ ಆಯಿತು ಎಂದು. ನಮ್ಮ ಪಟ್ಟಣಗಳೂ ಕೂಡ ಅಭಿವೃದ್ಧಿಯಾಗಬೇಕು. ಬರೀ ಪಟ್ಟಣದ ಮಕ್ಕಳೇ ಅಲ್ಲ ಇಲ್ಲಿ ಸೇರುವುದು. ಹಳ್ಳಿಗಳಲ್ಲೂ ಕೂಡ ಇವತ್ತು ಮಕ್ಕಳು ವಿದ್ಯಾವಂತರಾಗಿದ್ದಾರೆ. ಇವತ್ತು ಶ್ರೀ ರಾಮಕೃಷ್ಣ ಹೆಗಡೆಯವರು ಇಂಜಿನಿಯರಿಂಗ್ ಕಾಲೇಜುಗಳನ್ನು ಕೊಡದೇ ಇದ್ದಿದ್ದರೆ ಇವತ್ತು ಐಟಿ ಇಲ್ಲಿ ಬೆಳೆಯುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಶ್ರೀ ರಾಮಕೃಷ್ಣ ಹೆಗಡೆಯವರು ಇವತ್ತು ನಮ್ಮ ಜೊತೆಯಲ್ಲಿ ಇಲ್ಲ. ಯಾರು ಇವತ್ತು ಇದನ್ನೆಲ್ಲಾ ಹೇಳುತ್ತಿದ್ದಾರೆ, ಅವರು ಐಟಿ ಬಿಟಿಗೆ ಇದನ್ನೆಲ್ಲಾ ವಿರೋಧ ಮಾಡಿದವರು. ಇದನ್ನು ಐಟಿ ಬಿಟಿ ಗೆ ಯಾರು ಇವತ್ತು ಬೇಡ ಎಂದು ಹೇಳುವವರು ಅವತ್ತು ಇಂಜಿನಿಯರಿಂಗ್ ಕಾಲೇಜುಗಳು ನಾಯಿ ಕೊಡೆಗಳಂತೆ ಬರುತ್ತವೆ ಎಂದು ಹೇಳಿದವರು ಇವತ್ತು ಐಟಿ ಬಿಟಿ ಬೆಳೆಯಬೇಕಾದರೆ ರಾಮಕೃಷ್ಣ ಹೆಗಡೆಯವರು ಯಥೇಚ್ಛವಾಗಿ ಈ ರಾಜ್ಯದಲ್ಲಿ ಇಂಜಿನಿಯರಿಂಗ್ ಕಾಲೇಜುಗಳನ್ನು ಕೊಟ್ಟಿದ್ದೇ ಕಾರಣ ಇವತ್ತು 7 ಸಾವಿರ ಕೋಟಿ

ರೂ.ಗಳು ಒಂದು ತಿಂಗಳಿಗೆ ಏನು ಟ್ಯಾಕ್ಸ್ ಬೆಂಗಳೂರಿಗೆ ಬರುತ್ತಿದೆ ಮತ್ತು 7 ಸಾವಿರ ಕೋಟಿ ರೂ.ಗಳ ಸಂಬಳ ಈ ಒಂದು ಐಟಿ ಯಿಂದ ಬಟವಾಡೆ ಆಗುತ್ತಿದೆ. ಇದೇನು ಕಡಿಮೆ ಹಣವೇ ? ಯಾವ ಇಂಡಸ್ಟ್ರೀಸ್‌ನಲ್ಲಿ ನೀವು ಈ ಉತ್ಪತ್ತಿಯನ್ನು ಮಾಡಲಿಕ್ಕೆ ಸಾಧ್ಯವಿದೆ ? ಇಷ್ಟು ಸಾವಿರ ಜನಕ್ಕೆ ಯಾವ ರೀತಿ ಎಂಪ್ಲಾಯ್‌ಮೆಂಟ್ ಕೊಡುತ್ತೀರಿ ? ಕೆಲವರು ಹೇಳುತ್ತಾರೆ. ಆ ರಾಜ್ಯದವರಿಗೆ ಸಿಕ್ಕಿತು ಎಂದು, ಅವರೇನು ಪಾಕಿಸ್ತಾನದಿಂದ ಬಂದಿದ್ದಾರೆಯೇ ಅಥವಾ ಚೈನಾದೇಶದಿಂದ ಬಂದಿದ್ದಾರೆಯೇ ? ಇದೇ ಭಾರತ ದೇಶದವರಿಗೆ ಕೊಟ್ಟಿರುವುದು. ಅದರಲ್ಲಿ ಒಂದು 5 ಪರ್ಸೆಂಟ್ 10 ಪರ್ಸೆಂಟ್ ಅವರಿಗೆ ಕೊಟ್ಟಿದ್ದರೆ ಕೊಟ್ಟಿರಬಹುದು. ಇದನ್ನು ಬ್ರಾಡ್ ಔಟ್‌ಲುಕ್‌ನಲ್ಲಿ ಮಾತನಾಡದೇ ರಾಜಕೀಯ ಅವರ ಸ್ವಲಾಭಗಳಿಗೆ ನಾವು ಚಿಂತನೆ ಮಾಡುವಂತಾದ್ದು ತಪ್ಪು. ಇದನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ರೈತರ ವಿಷಯ ಬಂದಾಗ ನಾವೆಲ್ಲರೂ ಎಲ್ಲವನ್ನೂ ಮರೆತು ನಾವು ರೈತರ ಹಿತಚಿಂತಕರಾಗಬೇಕು. ನಿಜ ಮಾನ್ಯ ಅಧ್ಯಕ್ಷರೇ, ನಾನು ಇಲ್ಲಿ ಇದ್ದೇನೆ ನನ್ನ ಹೆಂಡತಿ ತೋಟದಲ್ಲಿ ಇದ್ದಾಳೆ. ನಾನು ಇಲ್ಲಿ ಕುಳಿತು ಮಾತನಾಡುತ್ತಿದ್ದೇನೆ, ನನ್ನ ಹೆಂಡತಿ ತೋಟದಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಇದನ್ನು ನಾನು ಏಕೆ ಮಾತನಾಡುತ್ತೇನೆಂದರೆ ಆ ಹಿನ್ನೆಲೆಯಲ್ಲಿ ಬಂದವರಿಗೆ ಆ ಕಷ್ಟ-ಸುಖ ಗೊತ್ತಾಗುವುದು. ಯಾವ ಹಿನ್ನೆಲೆಯಿಂದ ಬರುತ್ತಾರೆ ಅವರಿಗೆ ಆ ಹಿನ್ನೆಲೆ ಗೊತ್ತಾಗುವುದು. ಆದ್ದರಿಂದ ಚುನಾವಣೆ ಪ್ರಸ್ತಾಪಗಳನ್ನು ತರುವುದಕ್ಕೆ ಚುನಾವಣೆ ಪ್ರಸ್ತಾಪಗಳು ಬರುವುದಕ್ಕೆ ಇದೇ ಕಾರಣ ಇವತ್ತು ನಾನು ಆಗಲೇ ಹೇಳಿದೆ ಸ್ಲಮ್ ನಾಡಿದ್ದೇ ಆಗುವಂತೆ ಇತ್ತು ಈ ಸ್ಲಮ್‌ಗಳಲ್ಲಿ ಇರುವವರಿಗೆಲ್ಲಾ ಸೈಟ್‌ಗಳು ಸಿಗುವಂತೆ ಇತ್ತು ಮನೆಗಳು ಸಿಗುವಂತೆ ಇತ್ತು, ಎಲೆಕ್ಷನ್ ಆಗುತ್ತದೆ, ಆಮೇಲೆ ಸ್ಲಮ್‌ಗಳವರಿಗೂ ಜಾಗ ಕೊಟ್ಟಿಲ್ಲ, ಸೈಟ್‌ಗಳನ್ನೂ ಕೊಟ್ಟಿಲ್ಲ, ಮನೆಗಳನ್ನೂ ಕಟ್ಟಲಿಲ್ಲ. 3 ತಿಂಗಳು ಮಾತ್ರ ಸ್ಲಮ್ ಪ್ರಪಂಚದಲ್ಲಿ ಎಲ್ಲಾ ಓಡಾಡಿಬಿಟ್ಟಿತು.

ಶ್ರೀ ಎಸ್. ಮುನಿಸ್ವಾಮಪ್ಪ :- ಮಾನ್ಯ ಅಧ್ಯಕ್ಷರೇ . . . .

ಶ್ರೀ ಕೆ. ಶ್ರೀನಿವಾಸಗೌಡ :- ನಾನು ಈಲ್ಡ್ ಆಗುವುದಿಲ್ಲ ಕುಳಿತುಕೊಳ್ಳಿ, ಇವತ್ತು ಮಾನ್ಯ ಅಧ್ಯಕ್ಷರೇ, ಸಂಸ್ಕರಣೆಗೆ ಅನೇಕ ವಿಷಯಗಳಲ್ಲಿ . . . . .

ಅಧ್ಯಕ್ಷರು : ಮಾನ್ಯ ಹಿರಿಯ ಸದಸ್ಯರು ಏನೋ ಒಂದು ಸಲಹೆ ಕೊಡುತಾರೆ ಕೇಳಿ.

ಶ್ರೀ ಎಸ್. ಮುನಿಸ್ವಾಮಪ್ಪ (ಶಿಡ್ಲಘಟ್ಟ) : ಸ್ವಾಮಿ, ಇವರ ಮನೆ ಹೆಣ್ಣುಮಗುವನ್ನು ಅಮೇರಿಕಾದಲ್ಲಿ ವಾಸಮಾಡುವವರಿಗೆ ಕೊಟ್ಟಿರುವುದು ಅವರ ಕರ್ಮವೋ ನಮ್ಮ ಕರ್ಮವೋ ಎಂದು ಹೇಳಿಬಿಟ್ಟರೆ ಸಾಕು. ಅವರು ಅಮೇರಿಕದಲ್ಲಿರುವುದು, ಅವರ ಹೆಂಗಸರು ತೋಟದಲ್ಲಿರುವುದು, ಆ ಹೆಂಗಸು ಇವರ ತಂಗಿ. ಯಾರ ಕರ್ಮ ಇದು ? ದಯವಿಟ್ಟು ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ

ಅಧ್ಯಕ್ಷರು : ಶ್ರೀನಿವಾಸಗೌಡರು ಅಮೇರಿಕಾದಲ್ಲಿದ್ದಾರಾ ?

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ, ಇವರಿಬ್ಬರೂ ಭಾಮೈದುರು ಸೇರಿ ಏನೋ ಮಾಡುತ್ತಿದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೇ, ಇವತ್ತು ಸಂಸ್ಕರಣೆ ಬಗ್ಗೆ ಅನೇಕ ಸಲಹೆಗಳನ್ನು ಕೊಡಬೇಕೆಂದು ನನಗೆ ಅನ್ನಿಸುತ್ತದೆ. ಕೃಷಿ ಉತ್ಪಾದನಾ ನಿತಿಯನ್ನೂ ಕೂಡ ನಾವು ಬದಲಾಯಿಸಬೇಕಾಗುತ್ತದೆ. ಅದರಲ್ಲೂ ಮುಖ್ಯವಾಗಿ ತೋಟಗಾರಿಕೆ ಪದಾರ್ಥಗಳಿಗೆ ಒಂದು

ನೀತಿಯನ್ನು ನಾವು ತರಬೇಕಾಗುತ್ತದೆ. ಇವತ್ತು ಏನಾದರೂ ನಾಲ್ಕು ಕಾಸು ನೋಡುವುದು, ಮೈಜಿ ಒಂದನ್ನು ಬಿಟ್ಟರೆ ಭತ್ತದಲ್ಲೂ ಏನೂ ಲಾಭ ಬರುವುದಿಲ್ಲ ರಾಗಿ ಜೋಳಗಳಲ್ಲಿ ಬರುವುದಿಲ್ಲ. ಅಷ್ಟೋ ಇಷ್ಟೋ ರೈತನಿಗೆ ಹಣ್ಣು ಬೆಳೆಯುವುದರಲ್ಲಿ ತರಕಾರಿ ಬೆಳೆಯುವುದರಲ್ಲಿ ಏನಾದರೂ ನಾಲ್ಕು ಕಾಸು ಸಿಗುವುದು. ಅಂಥವುಗಳನ್ನು ಬೇರೆ ದೇಶಗಳಿಗಾಗಿ ಕಳುಹಿಸಬೇಕಾಗುತ್ತದೆ. ಮೊನ್ನೆ ನಾನು ಕಾಲಾಲಂಪುರಕ್ಕೆ ಹೋಗಿದ್ದೆ. ಅಲ್ಲಿ ಒಂದು ಮಾವಿನಹಣ್ಣಿನ ಬೆಲೆ 15 ರೂ.ಗಳು ಮಾನ್ಯ ರಮೇಶ್‌ಕುಮಾರರ ತಾಲ್ಲೂಕಿನಲ್ಲಿ 15 ರೂಗಳನ್ನು ಕೊಟ್ಟರೆ ಒಂದು ಬುಟ್ಟಿಯನ್ನೇ ಕೊಟ್ಟು ಬಿಡುತ್ತಾರೆ, ನಾನೂ ಕೂಡ ಮಾವಿನಹಣ್ಣಿನ ತೋಟ ಇರುವವನೇ. ಅವರೂ ಕೂಡ ಮಾವಿನ ತೋಟ ಹೊಂದಿರುವವರೇ ಇದು ಪರಿಸ್ಥಿತಿ. ಅಲ್ಲಿ ಸಂಸ್ಕರಣೆ ಮಾಡಿ ಅದೇನೋ ಒಂದು ಸೆಟ್ ಹಾಕಿ ಇಟ್ಟಿರುತ್ತಾರೆ. ಅದನ್ನು ನೋಡಿದರೆ ಸಾಕು ಆ ಹಣ್ಣನ್ನು ತೆಗೆದುಕೊಳ್ಳಬೇಕೆಂಬ ಆಸೆಯಾಗುತ್ತದೆ. ಇವತ್ತು ಮಾರ್ಕೆಟಿಂಗ್‌ನಲ್ಲಿ ಪ್ಯಾಕಿಂಗೂ ಬಹಳ ಮುಖ್ಯ. ಪ್ಯಾಕಿಂಗ್ ಸರಿಯಾಗಿದ್ದರೆ ಅದನ್ನು ಎಲ್ಲಿಗೆ ಬೇಕಾದರೂ ತೆಗೆದುಕೊಂಡುಹೋಗಬಹುದು. ಅದು ನಮ್ಮ ಗಿರಾಕಿಗಳನ್ನು ಅಟ್ರಾಕ್ಟ್ ಮಾಡಲು ಮುಖ್ಯವಾದ ಒಂದು ವ್ಯವಸ್ಥೆ. ಈ ವ್ಯವಸ್ಥೆಗೆ ಆದ್ಯತೆಗಳನ್ನು ಕೊಡಬೇಕು. ಪ್ಯಾಕಿಂಗ್ ಇರಬಹುದು, ವಿದ್ಯುತ್ತು ಇರಬಹುದು, ಡೀಸೆಲ್ ಜನರೇಟರ್ ಆದರೆ ಸಬ್ಸಿಡಿ ಕೊಡುವುದಿರಬಹುದು, ಹೋದ ಬರಗಾಲದಲ್ಲಿ ನಾನು ಈ ಕಡೆ ಕುಳಿತಿದ್ದಾಗ ಮಾನ್ಯ ಭೈರೇಗೌಡರು ನಾನೂ ಕೋಲ್ಡ್ ಸ್ಟೋರೇಜ್ ಬಗ್ಗೆ ಹೇಳಿದ್ದೆವು. ನಾನು ರಾಜ್ಯ ಸಹಕಾರಿ ಮಾರಾಟ ಮಹಾಮಂಡಲದ ಅಧ್ಯಕ್ಷನಾಗಿದ್ದಾಗ ಇಡೀ ದಕ್ಷಿಣ ಭಾರತದಲ್ಲಿ ಎರಡೂವರೆ ಸಾವಿರ ಟನ್ನಿನ ಅತಿದೊಡ್ಡ ಕೋಲ್ಡ್ ಸ್ಟೋರೇಜನ್ನು ಕೋಲಾರದಲ್ಲಿ ಕಟ್ಟಿಸಿದೆ. ಹಾಸನದಲ್ಲಿ ಎರಡೂವರೆ ಸಾವಿರ ಟನ್ನಿನ ಸ್ಟೋರೇಜನ್ನು ಕಟ್ಟಿಸಿದೆ. ಆದರೆ ಇವತ್ತು ಅವು ನಡೆದಿರುವ ವ್ಯವಸ್ಥೆ ನೋಡಿದರೆ ಅಯ್ಯೋ ಯಾಕಪ್ಪ ಕಟ್ಟಿದ್ದೇವೆ ಎಂದು ಅನ್ನಿಸುತ್ತದೆ. ಆಲೂಗಡ್ಡೆ ಬಿಟ್ಟರೆ ಬೇರೆಯದನ್ನು ತರಲು ಯಾವ ರೈತನೂ ಮುಂದೆ ಬರುವುದಿಲ್ಲ. ಕಾರಣ ಇಷ್ಟೆ: ಆಲೂಗಡ್ಡೆಗೆ ಒಂದಲ್ಲ ಒಂದು ಸಲ ರೇಟ್ ಬರುತ್ತದೆ, ಆದರೆ ಟಮೋಟೋ 10 ಪೈಸೆ ಆದರೂ ಯಾರೂ ಬರುವುದಿಲ್ಲ. ಯಾಕೆಂದರೆ ಬಾಡಿಗೆ ಕರೆಂಟ್‌ಚಾರ್ಜ್ ಮೇಂಟೆನೆನ್ಸ್ ಜಾಸ್ತಿ ಆಗುತ್ತದೆ. ಇವೆಲ್ಲಾ ಕಾರಣಗಳಿಂದ ರೈತನ ತೋಟಗಾರಿಕೆ ಬೆಳೆಗಳಿಗೆ ಇವತ್ತು ನಷ್ಟವಾಗುತ್ತದೆ. ಇವತ್ತು ಅಡಿಕೆಗೇನೋ ನಾಲ್ಕು ಕಾಸು ಸಿಕ್ಕಿದೆ. ನಾನು ಮಂತ್ರಿಯಾಗಿದ್ದಾಗ ಎರಡು ಮೂರು ಸಾರಿ ಅದಕ್ಕೆ ಸಭೆ ಮಾಡಿದ್ದೆ. ಅದರಲ್ಲೂ ಕ್ಯಾಂಪ್ಕೊ, ಮಾನ್ಯ ವಾರಣಾಸಿ ಸುಬ್ಬರಾಯಭಟ್ಟರು ದೂರಾಲೋಚನೆ ಮಾಡಿ ಅವರು ಮಲ್ಟಿಸ್ಟೇಟ್ ಸಹಕಾರ ಕಾಯಿದೆಯಡಿ ಅದನ್ನು ತಂದು ಕ್ಯಾಂಪ್ಕೊ ಎಂದು ಮಾಡದೇ ಇದ್ದಿದ್ದರೆ ಅಲ್ಲಿ ಅಡಿಕೆ ಬೆಳೆಗಾರರ ಸ್ಥಿತಿ ನಮ್ಮ ಕೋಲಾರದವರ ಸ್ಥಿತಿಗಿಂತ ಅಧ್ವಾನ ಆಗಿರುತ್ತಿತ್ತು. ಇವೆಲ್ಲವನ್ನೂ ಚಿಂತನೆ ಮಾಡಬೇಕಾಗಿದೆ. ಇವತ್ತು ಸಹಕಾರಿ ವ್ಯವಸ್ಥೆಯಡಿ ಕ್ಯಾಂಪ್ಕೊ ಆಗಿದ್ದರಿಂದ ಆ ಭಾಗದ ಅಡಿಕೆ ಬೆಳೆಯುವವರು, ಬದುಕಿಕೊಂಡರು ಅವರು ಚಾಕ್ಲೇಟ್ ಮಾಡುತ್ತಾರೆ, ಮಾನ್ಯ ಅಧ್ಯಕ್ಷರೇ, ಮಾನ್ಯ ದೇವಿಲಾಲರು ಉಪಪ್ರಧಾನಿಗಳಾಗಿದ್ದರು. ನಾನು ಅವರಿಗೆ ಒಂದು ಪತ್ರ ಬರೆದೆ. ಕ್ಯಾಂಪ್ಕೋದಿಂದ ಚಾಕ್ಲೇಟ್ಸ್ ತಯಾರಾಗುತ್ತದೆ ಎಂದು. ಇಂಡಿಯನ್ ಏರ್‌ಲೈನ್ಸ್‌ಗೆ ಅದನ್ನು ನೀವು ತೆಗೆದುಕೊಳ್ಳಬೇಕು ಎಂದು ಹೇಳಿದೆ. ನಾನು ಹೇಳಿದ ಎಂಟು ದಿವಸಕ್ಕೇ ಮಾನ್ಯ ದೇವಿಲಾಲರು ಅದಕ್ಕೆ ಆಜ್ಞೆ ಮಾಡಿ ಕ್ಯಾಂಪ್ಕೋದಿಂದ ಚಾಕ್ಲೇಟ್ಸನ್ನು ಪರ್ಚೇಸ್ ಮಾಡಿದರು. ಇವತ್ತೇನಾಗಿದೆಯೋ

ನನಗೆ ಗೊತ್ತಿಲ್ಲ ನಾನು ಒಂದು ಪತ್ರ ಬರೆದಿದ್ದೆ ನಮ್ಮ ರಾಜ್ಯದಲ್ಲಿ ಈ ತರಹ ಚಾಕ್ಲೇಟ್ ಉತ್ಪಾದಿಸುವ ಒಂದು ಸಂಸ್ಥೆಯಿದೆ. ನಾನು ಅದರ ಸದಸ್ಯನೂ ಅಲ್ಲ, ಆದರೆ ಅಲ್ಲಿನ ಒಬ್ಬ ಅಧಿಕಾರಿ ಚಾಕ್ಲೇಟ್ಸ್ ತಂದು ನನಗೆ ತೋರಿಸಿದ್ದ. ಕೊಟ್ಟಿದ್ದ. ಅದನ್ನು ನೋಡಿ ನಾನು ಪತ್ರ ಬರೆದಾಗ ಒಂದು ವಾರದಲ್ಲೇ ಇಂಡಿಯನ್ ಏರ್‌ಲೈನ್ಸ್‌ಗಾಗಿ. (ಅವತ್ತು ಪ್ರೈವೇಟ್ ಏರ್‌ಲೈನ್ಸ್ ಇರಲಿಲ್ಲ), ಪರ್ಚೇಸ್ ಮಾಡಿ ಅಲ್ಲಿ ಕೊಡುವ ಕೆಲಸವನ್ನು ಮಾಡಿದ್ದರು. ಇದು ರಾಜಕೀಯ ಇಚ್ಛಾಶಕ್ತಿ ಇವತ್ತು ಮಾನ್ಯ ದೇವೀಲಾಲ್ ಅವರು ನಮ್ಮ ಜೊತೆಯಲ್ಲಿಲ್ಲ. ಅವರು ರೈತರಿಗೆ ಮಾಡಿದಂತಹ ಒಳ್ಳೆಯ ಕಾರ್ಯಗಳನ್ನು ಸ್ಮರಿಸಬೇಕು. ಬರೀ ರಾಜಕೀಯಕ್ಕೆ ಮಾತ್ರ ರೈತರ ಹೆಸರು ಹೇಳುವುದಲ್ಲ. ರೈತರಿಗೆ ನಾವು ಏನು ಮಾಡಿದ್ದೇವೆ ಅನ್ನುವುದು, ರೈತರ ಉದ್ಧಾರಕ್ಕೆ, ಅಭಿವೃದ್ಧಿಗೆ ಕಂಕಣ ಕಟ್ಟುವುದು ಯಾರೇ ಆಗಲಿ, ಮಾನ್ಯ ದೇವೀಲಾಲರು ನಮ್ಮ ಪಕ್ಷದವರೂ ಅಲ್ಲ. ದೇವಿಲಾಲರು ನೇರವಾಗಿ ಹೇಳುತ್ತಿದ್ದರು. ಅವರು ಒಂದು ಸಾರಿ ಬಿಂದಾಲ್‌ಗೆ ಬಂದಿದ್ದರು ಆಗ ಪತ್ರಕರ್ತರು ಕೇಳಿದರು. ಆಗ್ಗೆ ಚಾತಾಲರು ಮುಖ್ಯಮಂತ್ರಿಯಾಗಿರಲಿಲ್ಲ, ಇವರು ಉಪಪ್ರಧಾನಮಂತ್ರಿಯಾಗಿದ್ದರು, ಆ ಸಂದರ್ಭದಲ್ಲಿ ನೀವು ಯಾರನ್ನು ಮುಖ್ಯಮಂತ್ರಿ ಮಾಡುತ್ತೀರಿ ಅಂದಿದ್ದಕ್ಕೆ, ಏನು ನಾನು ಬನ್ಸಿಲಾಲರ ಮಗನನ್ನು ಮಾಡಬೇಕಾ? ಅಂದರು. ಆ ಧೈರ್ಯ ಆ ಕೆಚ್ಚು ನೇರನುಡಿ ಮಾನ್ಯ ದೇವೀಲಾಲರಿಗಿತ್ತು. ರಾಜಕಾರಣ ಮಾಡುವ ನಮ್ಮಗಳಲ್ಲಿ ಈಗೇನಿಲ್ಲ, ನನ್ನ ಮಗನನ್ನು ಮುಖ್ಯಮಂತ್ರಿ ಮಾಡಬೇಕು ಅಂದರೆ ನಾನೊಂದು ನಾಟಕ ಆಡುತ್ತೇನೆ. ಎಲ್ಲಾ ನಾಟಕಗಳನ್ನೂ ಪ್ರದರ್ಶಿಸುವ ಶಕ್ತಿ ಇವತ್ತು ನಮ್ಮಗಳಲ್ಲಿದೆ. ಶ್ರೀ ಜೆ. ಹೆಚ್ ಪಟೇಲರೂ ಅದೇ ತರಹ ಹೇಳಿದ್ದರು.

ಅಧ್ಯಕ್ಷರು : ಏನು ರಾಜಕೀಯಕ್ಕೆ ಬಂದುಬಿಟ್ಟಿರಲ್ಲಾ, ಏನೋ ಮಾಜಿ ಕೃಷಿ ಸಚಿವರು ಎಂದು ಕೊಟ್ಟರೆ ರಾಜಕೀಯಕ್ಕೆ ಬಂದುಬಿಟ್ಟಿರಲ್ಲಾ ಹೇಗೆ ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಶ್ರೀನಿವಾಸ್ ಅವರು ಕೂಡ ಅವಕಾಶ ಬಂದರೆ ನಾನೂ ಹಾಗೇ ಮಾಡುವುದು ಎಂದು ಹೇಳುತ್ತಾ ಇದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ : ಸಂಸ್ಕರಿಸಿದ ಕೃಷಿ ಉತ್ಪನ್ನಗಳ ಒಂದು ನೀತಿಯನ್ನು ಪ್ರಾರಂಭ ಮಾಡಬೇಕಾದ ಅವಶ್ಯಕತೆ ಇದೆ ಅದಕ್ಕೆ ಸಮೀಪದಲ್ಲಿ ಎಪಿಎಂಸಿ ಆಗಿರಬಹುದು ಯಾವುದೇ ಇರಬಹುದು ಅಲ್ಲಿ ಪ್ರೀಕೂಲಿಂಗ್. ಮಾನ್ಯ ಅಧ್ಯಕ್ಷರೇ ನಾನು ಇಸ್ರೇಲ್‌ನಲ್ಲಿ ನೋಡಿದೆ ಮಾನ್ಯ ಬೈರೇಗೌಡರು ಕೃಷಿ ಸಚಿವರಾಗಿದ್ದಾಗ ಮಾನ್ಯ ಜಯಕುಮಾರ್ ಅವರೂ ಬಂದಿದ್ದರು. ಟೆಲ್ ಅವೀವ್‌ನ ಏರ್‌ಪೋರ್ಟಿನಲ್ಲಿ ಮೂರು ಎಕರೆ ಜಾಗದಲ್ಲಿ ಶೈತ್ಯಾಗಾರ ಮಾಡಿದ್ದಾರೆ. ನಮ್ಮಲ್ಲಿ ಕೃಷಿಗೆ ಇಷ್ಟೊಂದು ಆದ್ಯತೆ ಕೊಟ್ಟರೂ ಯಾವುದೇ ಏರ್‌ಪೋರ್ಟ್ ಬಳಿ ಕೃಷಿಗಾಗಿ ಒಂದು ಶೈತ್ಯಾಗಾರ ಇದೆಯಾ ? ಲಾರಿ ನೇರವಾಗಿ ಒಳಕ್ಕೆ ಹೋಗಿ ಆಚೆಗೆ ಹೋಗಬಹುದು. ಆ ರೀತಿ ಶೈತ್ಯಾಗಾರ ಮಾಡಿದ್ದಾರೆ. ಅಲ್ಲಿ ಬೆಳೆದ ಎಲ್ಲಾ ಪದಾರ್ಥಗಳನ್ನೂ ಅವರಿಗೆ ಬೇಕಾದ 3 ಪರ್ಸೆಂಟ್ ಇಟ್ಟುಕೊಂಡು ಬೇರೆ ದೇಶಗಳಿಗೆ ರಫ್ತು ಮಾಡುತ್ತಾರೆ. ಅದಕ್ಕೆ ಮೊದಲು ಅಲ್ಲಿನ ಒಬ್ಬರ ಮನೆಗೆ ಆಗ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ದೇವೇಗೌಡರೂ ಹೋಗಿದ್ದರು. ಜೊತೆಯಲ್ಲಿ ನಾನೂ ಮಾನ್ಯ ಬೈರೇಗೌಡರು ಮತ್ತು ಶ್ರೀ ಡಿ. ಟಿ. ಜಯಕುಮಾರ್ ಇದ್ದೆವು. ಕೊಚ್ಚಿನ್‌ನಲ್ಲಿದ್ದ ಒಬ್ಬ ಯಹೂದಿ ಟೀಗೆಂದು ಕರೆದಿದ್ದರು. ಟೀ ಕುಡಿದಾದಮೇಲೆ ಅವರು ಹೇಳಿದರು. ನಾನು ಕೊಚ್ಚಿನ್‌ನಲ್ಲಿದ್ದವನು,

ನಮ್ಮ ದೇಶ ಇಸ್ರೇಲ್ ಎಂದು ಆದ ಮೇಲೆ ಹಡಗಿನಲ್ಲಿ ಅಡಗಿಕೊಂಡು ಇಲ್ಲಿಗೆ ಬಂದುಬಿಟ್ಟೆ ನಾನು ಒಂದು ಮಾತು ಕೇಳಿದೆ ನೀನು ಒಬ್ಬ ರೈತನಾಗಿ ಇಷ್ಟು ಚೆನ್ನಾಗಿದ್ದೀಯಲ್ಲಾ ಹೇಗೆ? ಎಂದು. ಆತ ಒಂದು ಮಾತು ಹೇಳಿದ ? ಒಂದಿಂಚು ಭೂಮಿ, ಒಂದು ತೊಟ್ಟು ನೀರಿದ್ದರೆ ಒಂದು ಡಾಲರ್ ಗಳಿಸುತ್ತೇನೆ ಎಂದು. ಈ ಮಾತನ್ನು ಇವತ್ತಿಗೂ ಬಹಳ ಸಲ, ಎಲ್ಲಿ ಬೇಕಾದರೂ ಹೇಳುತ್ತಿರುತ್ತೇನೆ ಆ ರೀತಿ ರೈತನಿಗೆ ಒಂದಿಂಚು ಭೂಮಿ ಒಂದು ತೊಟ್ಟು ನೀರಿನಿಂದ ಒಂದು ರೂ. ನಾವು ತೆಗೆದ ದಿವಸ ಇಲ್ಲಿನ ರೈತನೂ ಸುಖವಾಗಿ ಬದುಕುವ ಸಾಧ್ಯತೆ ಇದೆ. ಇಲ್ಲದಿದ್ದರೆ ರೈತ ಸುಖವಾಗಿ ಬದುಕಲು ಸಾಧ್ಯವಿಲ್ಲ ಇದಕ್ಕೆ ಆದ್ಯತೆಗಳನ್ನು ಕೊಡಬೇಕು, ಇದರ ಬಗ್ಗೆ ಡಾ। ಕಲಾಂರವರು ನಮಗಾಗಿ ಬಿಟ್ಟು ಹೋಗಿರುವ 11 ಸೂತ್ರಗಳನ್ನು ನಾವು ಅಳವಡಿಸಿಕೊಳ್ಳಬೇಕಾಗುತ್ತದೆ. ಇದೆಲ್ಲಾ ಮಾಡದೆ ಇವತ್ತು ನಾವು ಬೇರೆ ರೀತಿಯಲ್ಲಿ ರಾಜಕಾರಣ ಮಾಡುವುದು. ಇವತ್ತು ರಾಸಾಯನಿಕ ಗೊಬ್ಬರವನ್ನು ಬಳಸಬಾರದು ಎಂದು ಒಂದು ಕಡೆ ಹೇಳುತ್ತಾರೆ. ಇನ್ನೊಂದು ಕಡೆ ಉಪಯೋಗಿಸಬೇಕು ಎಂದು ಹೇಳುತ್ತಾರೆ. ನಮಗೆ ಸ್ವಾತಂತ್ರ್ಯಪೂರ್ವದಲ್ಲಿ ಆಹಾರ ಪದಾರ್ಥಗಳಿಗೆ ತೊಂದರೆ ಇತ್ತು. ಆದರೆ ಸ್ವಾತಂತ್ರ್ಯ ಬಂದ ಮೇಲೆ ಹಸಿರುಕ್ರಾಂತಿ ಆದಮೇಲೆ ಪರಿಸ್ಥಿತಿ ಬದಲಾಗಿದೆ ನಾನು ರಷ್ಯಾಕ್ಕೆ ಒಮ್ಮೆ ಹೋಗಿದ್ದಾಗ ಒಬ್ಬ ಸರ್ದಾರ್ ಅವರ ಮನೆಗೆ ಊಟಕ್ಕೆ ಕರೆದಿದ್ದರು. ಊಟ ಮಾಡುತ್ತಾ ಮಾಡುತ್ತಾ ಅವರು ಒಂದು ಮಾತನ್ನು ಹೇಳಿದರು. When India is able to fulfill their foodgrains why not other things ಎಂದು ಹೇಳಿದರು. ಆ ತರಹ ಕೆಚ್ಚನ್ನು ಕೊಡತಕ್ಕ ವ್ಯವಸ್ಥೆ ಈ ಪ್ರಕಾರ ಈ ರಾಜ್ಯದಲ್ಲಿ ಆಗಬೇಕು. ಇವತ್ತು ನಾನು ಬಹಳ ಮಾತನಾಡಬೇಕೆಂದು ಇದ್ದೆ.

ಅಧ್ಯಕ್ಷರು:– ನೀವು ಒಂದು ಗಂಟೆ ಐದು ನಿಮಿಷ ಮಾತನಾಡಿದ್ದೀರಿ.

ಶ್ರೀ ಕೆ ಶ್ರೀನಿವಾಸಗೌಡ :– ಈಗ ಒಂದೇ ಒಂದು ವಿಷಯವನ್ನು ಲಾಸ್ಟ್ ಹೇಳಿಬಿಡುತ್ತೇನೆ ಮಾತೆತ್ತಿದರೆ ಬಹಳ ಸಂಶೋಧಕರು ಕಾರ್ಪೊರೇಟ್ ಫಾರ್ಮಿಂಗ್ ಎಂದು ಪತ್ರಿಕೆಗಳಲ್ಲಿ ಅಲ್ಲಿ ಇಲ್ಲಿ ಬಹಳ ಒತ್ತನ್ನು ಕೊಡುತ್ತಾರೆ. ಇವತ್ತು ನಮ್ಮ ಪಕ್ಕದ ರಾಜ್ಯವಾದ ತಮಿಳುನಾಡಿನಲ್ಲಿ ಹೊಸೂರು ಮತ್ತು ಕೃಷ್ಣಗಿರಿಯಲ್ಲಿ ಫಾರ್ಮರ್ಸ್ ಕಾರ್ಪೊರೇಟ್ ಎಂದು ಮಾಡಿದ್ದಾರೆ ಕಾರ್ಪೊರೇಟ್ ಫಾರ್ಮಿಂಗ್ ಬೇರೆ. ಫಾರ್ಮರ್ಸ್ ಕಾರ್ಪೊರೇಟ್ ಎಂದು ಮಾಡಿದ್ದಾರೆ. ಈ ಪುಸ್ತಕವನ್ನು ನಿಮಗೂ ಬೇಕಾದರೆ ಕೊಡುತ್ತೇನೆ ಇದನ್ನು ಓದಿ. ಇವತ್ತು ಬರೀ ಕಾರ್ಪೊರೇಟ್ ಫಾರ್ಮಿಂಗನ್ನು ಮಾಡಿ ದೊಡ್ಡ ದೊಡ್ಡ ರೈತರು ಅಥವಾ ವಿಜ್ಞಾನಿಗಳಿಗೆ ಅವರಿಗೆ ಜಮೀನನ್ನು ಒದಗಿಸುವ ಬದಲು ಹತ್ತಾರು ರೈತರುಗಳು ಸೇರಿಕೊಂಡು ಅವರು ಅಲ್ಲಿ ಮಾಡುವಂಥ ಕೆಲಸಕ್ಕೆ ಅನೇಕ ವಿಧವಾದ ಸಬ್ಸಿಡಿಗಳನ್ನು ತಮಿಳುನಾಡಿನವರು ಕೊಟ್ಟಿದ್ದಾರೆ. ಇದು ನನಗೆ ಮೊದಲೇ ಗೊತ್ತಿದ್ದಿದ್ದರೆ, ನಾನು ಮಂತ್ರಿಯಾಗಿದ್ದಾಗ ಗೊತ್ತಿದ್ದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ನಮ್ಮ ಹಣಕಾಸು ಸಚಿವರಿಗೆ ಇದನ್ನು ಒಪ್ಪಿಸಿ ತರುತ್ತಿದ್ದೆ. ನನಗೆ ಇತ್ತೀಚೆಗೆ ಈ ಪುಸ್ತಕ ನನ್ನ ಕೈಸೇರಿದೆ. ಇಂಥದ್ದನ್ನು ನೀವು ನೋಡಿಕೊಂಡು ಬನ್ನಿ ಇದೇನೂ ಬಹಳ ದೂರವಿಲ್ಲ ಹೊಸೂರು ಮತ್ತು ಕೃಷ್ಣಗಿರಿ. 40 ಕಿಲೋಮೀಟರ್. ಈ ಪದ್ಧತಿಗಳನ್ನು ತಂದು ರೈತರ ಜೀವನವನ್ನು ಹಸನು ಮಾಡಬೇಕಾದಂಥ ಜವಾಬ್ದಾರಿಗಳು ಎಲ್ಲಾ ಸರ್ಕಾರಗಳು, ಎಲ್ಲಾ ಎಲೆಕ್ಟೆಡ್ ಮೆಂಬರ್ಸ್ ಮೇಲೆ ಇದೆ. ಬರೀ ನಾವು ಶಾಸಕರಾಗಿ ಬಂದು ನಾಲ್ಕು ಮಾತುಗಳನ್ನು ಮಾತನಾಡುವುದಲ್ಲ. ಯಾವ 70 ಭಾಗದ ಜನಸಂಖ್ಯೆ ಇವತ್ತು ಹಳ್ಳಿಗಾಡಿನಲ್ಲಿ ಕನಿಷ್ಟ ಜೀವನ

ಮಾಡುವುದಕ್ಕೆ ಶಕ್ತಿ ಇಲ್ಲ. ಮಾನ್ಯ ಎಂ.ಪಿ. ಪ್ರಕಾಶ್‌ರವರು ರೂರಲ್ ಡೆವಲಪ್‌ಮೆಂಟ್ ಮಿನಿಸ್ಟರ್ ಆಗಿದ್ದರು. ಅವರು ಒಳ್ಳೆಯ ಕಾರ್ಯಕ್ರಮಗಳನ್ನು ತಂದರು. ಆಗ ರಾಜಕಾರಣ ಬಂತು. ಏಕೆಂದರೆ 'ಪುರ' ಎಂದು ಹೇಳಿದ್ದರಿಂದ ಅದನ್ನು ಹೇಳಿಬಿಟ್ಟು ನಾನು ಕ್ಲೋಸ್ ಮಾಡುತ್ತೇನೆ. ಮಂಡಲಪಂಚಾಯಿತಿಗಳನ್ನು ಮಾಡಲೇಬೇಕು, ಇಲ್ಲದಿದ್ದರೆ ನಾನು ರಾಜೀನಾಮೆಯನ್ನು ಕೊಡುತ್ತೇನೆಂದು ಪಟೇಲರ ಸರ್ಕಾರ ಇದ್ದಾಗ ಹೇಳಿದರು. ಮಾನ್ಯ ರಮೇಶ್‌ಕುಮಾರ್‌ರವರು ಹೊರಟುಹೋದರು. ಆಗತಾನೇ ಚುನಾವಣೆಗಳು ಹತ್ತಿರ ಬರುತ್ತಿತ್ತು. ಅರೆ, ಇದನ್ನು ಮಾಡಿಬಿಟ್ಟರೆ ರಾಜಕೀಯವಾಗಿ ನಮಗೆ ತೊಂದರೆಯಾಗುತ್ತದೆ. ಇವತ್ತು ಮಂಡಲ ಪಂಚಾಯಿತಿಗಳು, ಆಗ ಇದ್ದ ಜಿಲ್ಲಾ ಪಂಚಾಯಿತಿಗಳ ಸಿಸ್ಟಂ ಹೈಕ್ಲಾಸ್ ಆಗಿತ್ತು ಬಹಳ ಚೆನ್ನಾಗಿ ನಡೆಯಿತು. ನಾನೂ ಕೂಡ ಜಿಲ್ಲಾ ಪರಿಷತ್ ಮೆಂಬರ್ ಇದ್ದೆ. ಅವತ್ತಿಗೂ ಇವತ್ತಿಗೂ ಎಷ್ಟು ಹದಗೆಟ್ಟಿದೆ ಎಂದರೆ ಪಂಚಾಯಿತಿಗಳಾಗಿರಬಹುದು, ತಾಲ್ಲೂಕು ಪಂಚಾಯಿತಿಗಳಾಗಿರಬಹುದು, ಜಿಲ್ಲಾ ಪಂಚಾಯಿತಿಗಳಾಗಿರಬಹುದು. ಮಾನ್ಯ ಪ್ರಕಾಶ್‌ರವರು ಅವತ್ತು ತಂದಂಥ ಮಂಡಲ ಪಂಚಾಯಿತಿ ವ್ಯವಸ್ಥೆ, ಬಗ್ಗೆ ಇನ್ನೊಂದು ಹೇಳಿದರು, ಯಾವ ಪಂಚಾಯಿತಿ ಮೆಂಬರ್‌ಗೆ ಲೆಟ್ರೀನ್ ಇಲ್ಲದಿದ್ದರೆ ಅವರು ಮೆಂಬರ್‌ಗೆ ಅನರ್ಹ ಎಂದು ಹೇಳಿದರು. ಇವೆಲ್ಲಾ ಕೂಡ ಪೊಲಿಟಿಕಲ್ ವಿಲ್ ಬರದಿದ್ದರೆ ನಾವು ಹಳ್ಳಿಗಳಲ್ಲೂ ಕೂಡ ಸ್ವಚ್ಛತೆಯನ್ನು ತರುವುದಕ್ಕಾಗುವುದಿಲ್ಲ. ಅವರು ತಂದರು. ಏನು ಮಾಡುವುದು, ರಾಜಕೀಯ ಒತ್ತಡ ಈಗ ಬಂದ ಹಾಗೆ ಪಾಪ ಆಗಲೂ ಒತ್ತಡ ಬಂತು. ಅವರು ಸುಮ್ಮನಾಗಿಬಿಟ್ಟರು. ಈಗ ಹೇಗೆ ಬಂತೋ ಆಗಲೂ ಅದೇ ತರಹ ಬಂತು. ಚುನಾವಣೆಗಳು ಬಂದವು. ಅವರು ಏಕೋ ಸ್ವಲ್ಪ ನಮ್ಮ ಸಿದ್ದರಾಮಯ್ಯನವರು, ನಮ್ಮ ಸಿಂಧ್ಯಾರವರು ಇದ್ದ ಹಾಗೆ ಸ್ವಲ್ಪ ಇರುವುದಿಲ್ಲ. ಅವರು ಒತ್ತಡ ಬರುವಷ್ಟರೊಳಗಾಗಿ ಅವರು ಯೀಲ್ಡ್ ಆಗಿಬಿಡುತ್ತಾರೆ. ಅದೊಂದು ವೀಕ್‌ನೆಸ್ ಅವರಿಗೆ ಇಲ್ಲದಿದ್ದರೆ ಅವರ ಚಿಂತನೆಗಳು, ನಿಜವಾಗಿಯೂ ಹಳ್ಳಿಗಾಡಿಗೆ ಬೇಕಾದಂಥ ರೀತಿ ನೀತಿಗಳನ್ನು ಅವರು ರೂರಲ್ ಡೆವಲಪ್‌ಮೆಂಟ್ ಮಿನಿಸ್ಟರ್ ಆಗಿದ್ದಾಗ ತಂದಿದ್ದರು. ಅದನ್ನು ನಾವು ಇವತ್ತು ಮುಂದುವರೆಸಿಕೊಂಡು ಹೋಗುವಂಥ ಚಿಂತನೆಗಳು ಇವತ್ತು ಆ 'ಪುರ' ಎಂದು ಅವರು ಹೇಳಿದ್ದಕ್ಕೆ ಮೊದಲೇ ನಮ್ಮ ರಾಜ್ಯದಲ್ಲಿ ಮಾನ್ಯ ಎಂ.ಪಿ. ಪ್ರಕಾಶ್‌ರವರು ತಂದಿದ್ದರು. ಸನ್ಮಾನ್ಯ ರಾಷ್ಟ್ರಪತಿಗಳು ಏನು ಭಾಷಣವನ್ನು ಮಾಡಿ ಹೋಗಿದ್ದಾರೆ, ಇವೆಲ್ಲಾ ಚಿಂತನೆಗಳು ಅವತ್ತು ೧೯-೯೪-೯೫ ರಲ್ಲಿ ಇದೆ. ಅದನ್ನು ತೆಗೆದುನೋಡಿ. ಎಲ್ಲವನ್ನೂ ಕೂಡ ಮಾನ್ಯ ಎಂ.ಪಿ.ಪ್ರಕಾಶ್‌ರವರು ತಂದಿದ್ದರು. 'ಗುಣಕ್ಕೆ ಮತ್ಸರ ಇರಬಾರದು' ಗುಣಕ್ಕೆ ಮತ್ಸರ ಇದ್ದರೆ ಒಳ್ಳೆಯದಲ್ಲ. ಅದನ್ನು ತಂದರೂ ಅದನ್ನು ನಾವು ಇಲ್ಲಿ ಇಂಪ್ಲಿಮೆಂಟ್ ಮಾಡಲಿಲ್ಲ ಎನ್ನುವ ಮಾತನ್ನು ಹೇಳಿ, ನನಗೆ ಇನ್ನೂ ಒಂದು ಗಂಟೆ ಮಾತನಾಡಬೇಕೆನ್ನುವ ಆಸೆ ಇತ್ತು. ಇಷ್ಟು ಹೇಳಿ ನೀವು ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಅಧ್ಯಕ್ಷರು :– ಪುನಃ ಮೂರು ಗಂಟೆಗೆ ಸೇರುವಂತೆ ಸದನವನ್ನು ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 ಗಂಟೆ 4 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಮೂರು ಗಂಟೆಗೆ ಸೇರಲು ನಿಶ್ಚಯಿಸಿತು.)

(ಸದನವು ಪುನಃ ಮಧ್ಯಾಹ್ನ 3.30 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಸಭಾಧ್ಯಕ್ಷರು (ಶ್ರೀ ಕೃಷ್ಣ)ರವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ಘನತೆವೆತ್ತ ರಾಷ್ಟ್ರಪತಿಗಳ ಭಾಷಣದ ಮೇಲಿನ ಮುಂದುವರೆದ ಚರ್ಚೆ.

ಅಧ್ಯಕ್ಷರು :– ಮಾನ್ಯ ಶ್ರೀರಾಮರೆಡ್ಡಿಯವರೆ, ತಮ್ಮ ಭಾಷಣ ಪ್ರಾರಂಭಿಸಿ. ದಯವಿಟ್ಟು ಬೇಗ ಮುಗಿಸಬೇಕು, ಇನ್ನೂ ಮಾತನಾಡುವವರು ಬಹಳ ಜನ ಸದಸ್ಯರಿದ್ದಾರೆ. ಆದಷ್ಟು ಬೇಗ ಮುಗಿಸಬೇಕು. ಮಾನ್ಯ ರೆಡ್ಡಿಯವರೆ, 15 ನಿಮಿಷಗಳಲ್ಲಿ ತಮ್ಮ ಭಾಷಣ ಮುಗಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :– ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ BAC meeting ನಲ್ಲಿ ನಾವು ಹೇಳಿದೆವು, ಇದರ ಬಗ್ಗೆ ಚರ್ಚೆ ಮಾಡತಕ್ಕಂಥದ್ದಕ್ಕೆ ನಮ್ಮ ವಿಧಾನ ಸಭೆಯ ನಿಯಮಾವಳಿಗಳಲ್ಲಿ ಅವಕಾಶ ಇಲ್ಲ, ಇದು ಭಾರಿ ಕೆಟ್ಟ ಸಂಪ್ರದಾಯವಾಗುತ್ತದೆಂದು. ನೀವೆಲ್ಲಾ ಒತ್ತಾಯ ಮಾಡಿದ್ದಕ್ಕೆ ಒಪ್ಪಿದೆವು. ಯಾವ ಆಧಾರದ ಮೇಲೆ ಒಪ್ಪಿದೆವು ಎಂದರೆ, ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಇದೊಂದು ಬಹಳ ಪ್ರಮುಖವಾದಂತಹ ವಿಚಾರವಾಗಿದೆ, ಹಾಗಾಗಿ ನಾವೆಲ್ಲರೂ ಬಹಳ ಗಂಭೀರವಾಗಿ ಇದನ್ನು ಚರ್ಚೆ ಮಾಡಬೇಕು ಎಂದು. ಈ ನಮ್ಮ attendance,ಆ ಕಡೆಗೆ ಮತ್ತು ಈ ಕಡೆಗೆ ನೋಡಿದರೆ, ನಾವೆಲ್ಲಾ ಇದರ ಬಗ್ಗೆ ಎಷ್ಟು ಗಂಭೀರವಾಗಿ ಇದ್ದೇವೆ ಎಂಬುದನ್ನು ತೋರಿಸುತ್ತದೆ. ನಾನು ಇವತ್ತು ಹೇಳುತ್ತಿದ್ದೇನೆ, ಪ್ರಚಾರದ ದೃಷ್ಟಿಯಿಂದ ಇದೊಂದು ಚರ್ಚೆಯನ್ನು ಪ್ರಾರಂಭ ಮಾಡಿದ್ದೇವೆಯೇ ಹೊರತು ಪ್ರಾಮಾಣಿಕವಾಗಿ ಒಂದು ನಿರ್ದಿಷ್ಟವಾದ ಬದ್ಧತೆಯಿಂದ, ರಾಜ್ಯದ ಅಭಿವೃದ್ಧಿ ಬಗ್ಗೆ ಚರ್ಚೆ ಮಾಡಬೇಕು ಎಂಬ ಕಾಳಜಿ ನಮಗೆಲ್ಲರಿಗೂ ಇದಿದ್ದರೆ, ಈ ಸ್ಥಿತಿ ಸದನಕ್ಕೆ ಬರುತ್ತಿರಲಿಲ್ಲ. ಮತ್ತೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಇದರ ಬಗ್ಗೆ ಚರ್ಚೆ ಮಾಡಲೇಬೇಕು ಎಂದು ಹಠ ಹಿಡಿದರು. ನಿಮ್ಮ ಸಲಹೆಗಳನ್ನೆಲ್ಲಾ ನಾವು ಕೇಳಬೇಕು, ನಮ್ಮ ಸರ್ಕಾರಕ್ಕೆ "ಅಭಿವೃದ್ಧಿ ರಂಗ " ಎಂದು ಹೊಸದಾಗಿ ಹೆಸರು ಇಟ್ಟಿದ್ದೇವೆ, ಅಭಿವೃದ್ಧಿಯನ್ನಷ್ಟೇ ನಾವು concentrate ಮಾಡುತ್ತೇವೆ, ಹಾಗಾಗಿ ಇದನ್ನು ಚರ್ಚೆ ಮಾಡಲೇಬೇಕು ಎಂದು ಹಠ ಹಿಡಿದರು. ಸುಮ್ಮನೆ ಯಾವುದೋ ನಿಯಮಾವಳಿಗಳ ಹೆಸರಿನಲ್ಲಿ ನೀವು ನಮಗೆ ತೊಂದರೆ ಮಾಡಬೇಡಿ, technical point ಮೇಲೆ ನೀವು ಯಾವಾಗಲೂ ನಮಗೆ ತೊಂದರೆ ಮಾಡಲಿಕ್ಕೆ ಹೊರಡುತ್ತೀರಿ ಎಂದು ಮಾನ್ಯ ಸದಸ್ಯರಾದ ದೇವೇಗೌಡರು ನಮ್ಮ ಮೇಲೆ ಆಪಾದನೆ ಮಾಡುತ್ತಾರೆ. ಸರಿ ಸ್ವಾಮಿ, ಒಪ್ಪಿದ್ದೇವೆ. ಇಲ್ಲಿ ಏನಿದೆ ಪರಿಸ್ಥಿತಿ ಎಂಬುದನ್ನು ನೋಡಿ. ಮಾನ್ಯ ಮುಖ್ಯಮಂತ್ರಿಗಳು ಇಲ್ಲ. . . . .

ಶ್ರೀ ಜಿ.ಟಿ. ದೇವೇಗೌಡ :– ಮಾನ್ಯ ಮುಖ್ಯಮಂತ್ರಿಗಳು ಬದ್ಧತೆಯಿಂದ ಇದನ್ನು ನಡೆಸಬೇಕು ಎಂದೇ ಇದನ್ನು ನಡೆಸುತ್ತಿದ್ದಾರೆ. ಆದರೆ ಸದಸ್ಯರಿಗೆ ಆಸಕ್ತಿ ಇಲ್ಲದಿದ್ದರೆ ಅವರೇನು ಮಾಡುತ್ತಾರೆ ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಆದರೆ ಇಲ್ಲಿ ಅವರೇ ಇಲ್ಲವಲ್ಲಾ. ಮಾನ್ಯ ದೇವೇಗೌಡರೇ, ಮುಖ್ಯಮಂತ್ರಿಗಳೇ ಇಲ್ಲಿ ಇಲ್ಲ.

(ಗೊಂದಲ)

ಶ್ರೀ ಎಸ್. ಕುಮಾರ್ ಬಂಗಾರಪ್ಪ :– ಮಾನ್ಯ ಅಧ್ಯಕ್ಷರೆ, ಅವರು ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ ಮಾತನಾಡಲಿ. ನಾವು ಈಗ ಮಾತನಾಡಿ ಬಿಡುತ್ತೇವೆ.

(ಗೊಂದಲ)

ಶ್ರೀ ಜಿ.ಟಿ. ದೇವೇಗೌಡ :– ಅವರ ಪರವಾಗಿ ಮಂತ್ರಿಗಳಿದ್ದಾರೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ನಾನು ಅದನ್ನೂ ಹೇಳುತ್ತಿದ್ದೇನೆ. ಮಾನ್ಯ ದೇವೇಗೌಡರೆ, ತಾವು ಕಣ್ಣುಮುಚ್ಚಿಕೊಂಡಿದ್ದಿರಿ ಎಂದು ಕಾಣುತ್ತದೆ. ನಾನು ಎರಡೂ ಕಡೆಯವರಿಗೂ ಹೇಳಿದ್ದೇನೆ

(ಗೊಂದಲ)

ಅಧ್ಯಕ್ಷರು :– ಮಾನ್ಯ ರೆಡ್ಡಿಯವರೆ, ಮಾತನಾಡಿ. ಇದರ ಬಗ್ಗೆ ಏನು ಸಲಹೆಗಳನ್ನು ಕೊಡಬೇಕೋ ಕೊಡಿ. Comments ಮಾಡುವುದರ ಬದಲು ನಿಮ್ಮ ಸಲಹೆಗಳನ್ನು ಕೊಡಿ.

(ಗೊಂದಲ)

ಶ್ರೀ ಎಸ್. ಕುಮಾರ್ ಬಂಗಾರಪ್ಪ :– ಅವರು ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಬಂದ ಮೇಲೆ ಮಾತನಾಡಲಿ . . . .

(ಗೊಂದಲ)

ಅಧ್ಯಕ್ಷರು :– ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ಏನೂ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ನೀವು ನಿಮ್ಮ ಸಲಹೆಗಳನ್ನು ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– . . . . . ನಮ್ಮ ಇಡೀ ಸದನದಲ್ಲಿ ಇರತಕ್ಕಂಥ ಅಟೆಂಡೆನ್ಸ್ ಬಗ್ಗೆ ನಾನು ಹೇಳಿದ್ದೇನೆ. ಆಡಳಿತ ಪಕ್ಷದವರ ಬಗ್ಗೆ ಮಾತ್ರ ನಾನು ಹೇಳಿಲ್ಲ. How we are serious? ಅದರ ಜೊತೆಗೆ ಯಾರು ಇದನ್ನು ಚರ್ಚೆ ಮಾಡಲೇಬೇಕು ಎಂದು ಹಠ ಹಿಡಿದರೋ, ಬಜೆಟ್‌ಗಿಂತ ಎರಡು ದಿವಸಗಳ ಮೊದಲು ಚರ್ಚೆ ಮಾಡಬೇಕು ಎಂದು ಒತ್ತಾಯ ಮಾಡಿ ಸದನವನ್ನು ಕರೆದರೋ, ಆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲಿ ಇಲ್ಲ, Rural Development Minister ಇಲ್ಲ, Industry Minister ಇಲ್ಲ, Law Minister ಇಲ್ಲ, ಕೈಗಾರಿಕಾ ಮಂತ್ರಿ ಇಲ್ಲ, ಕೃಷಿ ಸಚಿವರು ಇಲ್ಲ, ಯಾವ ಜವಾಬ್ದಾರಿಯುತವಾದಂತಹ ಅಧಿಕಾರಿಗಳು ಯಾರೂ ಇಲ್ಲಿ ಕುಳಿತಿಲ್ಲ. ಇದು ಅಬ್ದುಲ್ ಕಲಾಂರಿಗೆ ನಾವು ಕೊಡುತ್ತಿರತಕ್ಕಂಥ ಗೌರವವಾಗಿದೆ। ಗೌರವ ಕೊಡಬೇಕು ಎಂದು ಮೇಲ್ನೋಟಕ್ಕೆ ಹೇಳಿ ಮಾಡುತ್ತಿರುವಂತಹ ಅಗೌರವ ಇದು . . . . .

ಶ್ರೀ ಎಂ.ಪಿ. ವೆಂಕಟೇಶ್ :– ಆ ರೀತಿ ಹೇಳುವುದು ಸರಿಯಲ್ಲ.

ಶ್ರೀ ಎಸ್. ರಾಜೇಂದ್ರನ್ :– ಅವರಿಗೆ ಮಾತನಾಡಲಿಕ್ಕೆ ರೈಟ್ಸ್ ಕೊಟ್ಟಿದ್ದಾರೆ. ಅವರ ಅಭಿಪ್ರಾಯವನ್ನು ಅವರು ಹೇಳುತ್ತಾರೆ ತಾವು ಕುಳಿತುಕೊಳ್ಳಿ.

ಶ್ರೀ ಎಂ.ಪಿ. ವೆಂಕಟೇಶ್ :– ಕಾರ್ಯಕ್ರಮ ಅನುಷ್ಠಾನಗೊಳಿಸದೆ ಇದ್ದರೆ ಇದು ಅಗೌರವವಾಗುತ್ತದೆ. ಬಹಳ ಹಿರಿಯರಾದ ತಾವೇ ಹೀಗೆ ಹೇಳಿದರೆ ಹೇಗೆ ? ಅಧಿಕಾರದಲ್ಲಿ ಇದ್ದು . . . .

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಮಾನ್ಯ ವೆಂಕಟೇಶ್‌ರವರೆ, ಪದೇ ಪದೇ ಎದ್ದು ನಿಂತು ಏನು ಬೇಕೋ ಅದೆಲ್ಲಾ ಮಾತನಾಡುವುದು ಸರಿಯಲ್ಲ.

ಶ್ರೀ ಎಂ.ಪಿ ವೆಂಕಟೇಶ್ :– ಅಧಿಕಾರಿಗಳು ಮತ್ತು ಮಂತ್ರಿಗಳು ಇದ್ದರೆ ಮಾತ್ರ ಅನುಷ್ಠಾನವಾಗುತ್ತದೆಯೇ ? ನಾವು ಅದನ್ನು ಜಾರಿಗೊಳಿಸುತ್ತೇವೆ. ಅದು ಆಗದೆ ಇದ್ದರೆ ತಾವು ಹೇಳಿ. ನೀವು ಏಕದಂ ಅವಮಾನವಾಯಿತು, ರಾಜ್ಯಕ್ಕೆ ಅವಮಾನ ಮಾಡಿದ್ದೀರಿ ಎಂದು ಹಿರಿಯರಾದ ನೀವೇ ಹೇಳಿದರೆ ಹೇಗೆ ? . . . .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಮಾನ್ಯ ಅಧ್ಯಕ್ಷರೆ, ಇವರು ಅನಾವಶ್ಯಕವಾಗಿ ಎಲ್ಲಾದಕ್ಕೆ ಎದ್ದೇಳುತ್ತಾರೆ. This is intolerable.

ಶ್ರೀ ಎಂ.ಪಿ. ವೆಂಕಟೇಶ್ :– . . . . . ಹಿರಿಯ ಸದಸ್ಯರಾಗಿರುವವರು ರಾಷ್ಟ್ರಪತಿಗಳಿಗೆ ಅಗೌರವವಾಗಿದೆ ಎಂದು ಹೇಳಬಾರದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಹೌದು, ಅಗೌರವ ಆಗಿದೆ. " ಅಗೌರವವಾಗಿದೆ " ಎಂದು ನಾನು ಹತ್ತು ಸಲ ಹೇಳುತ್ತೇನೆ.

ಶ್ರೀ ಎಂ.ಪಿ. ವೆಂಕಟೇಶ್ :– ಏಕೆ ಆ ರೀತಿ ಹೇಳುತ್ತೀರಿ ?

(ಗೊಂದಲ)

ಅಧ್ಯಕ್ಷರು :– ಆಯಿತು, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್ :– ಅನುಷ್ಠಾನಗೊಳಿಸದಿದ್ದರೆ ಆಗ ನೀವು ಕೇಳಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಅನುಷ್ಠಾನಗೊಳಿಸಲೇ ಬೇಕೆಂದಿದ್ದರೆ, ಅದಕ್ಕೆ ಚರ್ಚೆ ಮಾಡತಕ್ಕಂಥ ಅವಶ್ಯಕತೆ ಇರಲಿಲ್ಲ. ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿ ಚರ್ಚೆ ಮಾಡಬೇಕಾಗಿತ್ತು.

ಅಧ್ಯಕ್ಷರು :– ಮಾನ್ಯ ವೆಂಕಟೇಶ್‌ರವರೆ, ಆಯಿತು ಕುಳಿತುಕೊಳ್ಳಿ ಅವರು ಮಾತನಾಡಲಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– . . . ಹೌದ್ರಿ, ಗೌರ್ನಮೆಂಟ್‌ಗೆ ಅನುಷ್ಠಾನಗೊಳಿಸಲೇಬೇಕೆನುವ seriousness ಇದಿದ್ದರೆ ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿ ಜಾರಿ ಮಾಡಬೇಕಾಗುತ್ತಿತ್ತು. ಇಲ್ಲಿ ಚರ್ಚೆ ಮಾಡತಕ್ಕಂಥ ಅವಶ್ಯಕತೆ ಇಲ್ಲ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಮಾನ್ಯ ಅಧ್ಯಕ್ಷರೆ, ಅನುಷ್ಠಾನಗೊಳಿಸತಕ್ಕಂಥದ್ದರ ಬಗ್ಗೆ ಹೇಳುತ್ತಿದ್ದೀರಿ. ಹಿಂದೆ ನಾನು ಸಲಹೆ ಕೊಟ್ಟಿದ್ದೆ. ನೀವು ಅನುಷ್ಠಾನಗೊಳಿಸಲಿಕ್ಕೆ ಪ್ರಾಮಾಣಿಕರಿದ್ದರೆ ಚರ್ಚೆ ಬೇಡ, ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿ ಜಾರಿ ಮಾಡಿ ಎಂದು ನಾನು ಹೇಳಿದ್ದೆ. ಇಲ್ಲಿ ಚರ್ಚೆಯ ಅವಶ್ಯಕತೆಯೇ ಇರಲಿಲ್ಲ.

ಅಧ್ಯಕ್ಷರು :– ಮಾನ್ಯ ರೆಡ್ಡಿಯವರೆ, ತಮ್ಮ ಸಲಹೆಗಳೇನಾದರೂ ಇದ್ದರೆ ಕೊಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಹೌದು ಸಾರ್, ಸಲಹೆಗಳನ್ನು ಕೊಡುವುದಕ್ಕೆ ಮುಂಚೆಯೇ ಅವರು ಅಡ್ಡ ಎದ್ದರೆ ಹೇಗೆ ?

ಶ್ರೀ ಎಂ.ಪಿ. ವೆಂಕಟೇಶ್ :– ತಾವು ಸಲಹೆಗಳನ್ನು ಕೊಡಿ. ಆದರೆ ಮಂತ್ರಿಗಳು ಇಲ್ಲ, ಅಧಿಕಾರಿಗಳು ಇಲ್ಲ, ರಾಷ್ಟ್ರಪತಿಗಳಿಗೆ ಅಗೌರವವಾಯಿತು ಎಂದರೆ ಹೇಗೆ ? ಹಿರಿಯರಾಗಿ ತಾವು ಹೀಗೆ ಹೇಳುವುದೇ ?

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ನಿಜ, ನೀವು ಅಗೌರವ ಕೊಡುತ್ತಿದ್ದೀರಿ, ಅವಮಾನ ಮಾಡುತ್ತಿದ್ದೀರಿ, ಇನ್ನೂ ಎಷ್ಟು ಸಲ ಹೇಳಬೇಕು ?

(ಗೊಂದಲ)

ಅಧ್ಯಕ್ಷರು :– ಆಯಿತು, ಕುಳಿತುಕೊಳ್ಳಿ,

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಅವಮಾನ ಮಾಡುತ್ತಿದ್ದೀರಿ, ಅವಮಾನ ಮಾಡುತ್ತಿದ್ದೀರಿ....

(ಗೊಂದಲ)

ಅಧ್ಯಕ್ಷರು :– ನಿಮ್ಮಷ್ಟಕ್ಕೆ ನೀವು ಹೇಳುತ್ತಿದ್ದೀರಿ, ಅವರುಷ್ಟಕ್ಕೆ ಅವರು ಮಾತನಾಡುತ್ತಿದ್ದಾರೆ. ದಯಮಾಡಿ ಕುಳಿತುಕೊಳ್ಳಿ,

(ಗೊಂದಲ)

ಶ್ರೀ ಸಿ.ಎಲ. ನರೇಂದ್ರಬಾಬು :– ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲಾ ಎನ್ನುತ್ತಾರೆ. ನಾವು ಎಲ್ಲಿ ಕರೆದಿರತಕ್ಕಂಥವರು ಕುಳಿತುಕೊಂಡಿದ್ದರೆ, Chief Secretary ಯಿಂದ ಹಿಡಿದು ಎಲ್ಲಾ ಐ.ಎ.ಎಸ್. ಅಧಿಕಾರಿಗಳು ಕುಳಿತುಕೊಂಡು ನೋಟ್ ಮಾಡಿಕೊಳ್ಳುತ್ತಾರೆ. ನಾವಿಲ್ಲಿ ತಮಾಷೆಗೆ ಬಂದಿದ್ದೇವೆಯೇ ? ನಾವು ಈ ಸಭೆಯಲ್ಲಿ ಕೊಡತಕ್ಕಂಥ ಸಲಹೆಗಳನ್ನು ತೆಗೆದುಕೊಳ್ಳಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ನಾವು ಸಲಹೆಗಳನ್ನು ಕೊಡಬೇಕೆಂದರೆ ಯಾರಿಗೆ ಕೊಡಬೇಕು? ನಾವು ಗೋಡೆಗೆ ಕೊಡಬೇಕೇ ?

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್ :– ಇಬ್ಬರು ಸಚಿವರುಗಳು ಇಲ್ಲಿ ಹಾಜರಿದ್ದಾರೆ.

(ಗೊಂದಲ)

ಶ್ರೀ ಜಿ.ವಿ ಶ್ರೀರಾಮರೆಡ್ಡಿ :– ಆ ಇಬ್ಬರು ಸಚಿವರು ಏನು ಮಾಡುತ್ತಿದ್ದಾರೆ ಎಂದು ನೋಡಿ.

(ಗೊಂದಲ)

ಅಧ್ಯಕ್ಷರು :– ಸುಮ್ಮನೆ ವಾದ ಮತ್ತು ಪ್ರತಿವಾದ ಬೇಡಿ.

(ಗೊಂದಲ)

ಅಧ್ಯಕ್ಷರು :– ಈಗ ದಯಮಾಡಿ ಕುಳಿತುಕೊಳ್ಳಿ, ಮಾನ್ಯ ಈಶ್ವರಪ್ಪನವರು ಮಾತನಾಡುತ್ತಾರೆ

ಶ್ರೀ ಕೆ.ಎಸ್. ಈಶ್ವರಪ್ಪ (ಮಧ್ಯಮ ಮತ್ತು ಭಾರಿ ನೀರಾವರಿ ಹಾಗೂ ಜಲ ಸಂಪನ್ಮೂಲ ಸಚಿವರು):- ಮಾನ್ಯ ಅಧ್ಯಕ್ಷರೆ, ತಮಗೂ ಗೊತ್ತಿದೆ, ನಾಡಿದ್ದು ಬಜೆಟ್ ಇರುವಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಅದರ ಬಗ್ಗೆಯೇ ತಯಾರಾಗುತ್ತಿದ್ದಾರೆ. ಇದರ ಜೊತೆಗೆ ಎಲ್ಲಾ ಸದಸ್ಯರು ಕೊಡುತ್ತಿರುವಂತಹ ವಿಶೇಷವಾದ ಸಲಹೆಗಳನ್ನು ತೆಗೆದುಕೊಳ್ಳಲಿಕ್ಕೆ ನಾವೆಲ್ಲಾ ಇದ್ದೇವೆ. ಖಂಡಿತ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳ ಹತ್ತಿರ ಇದರ ಬಗ್ಗೆ ಚರ್ಚೆ ಮಾಡಿ, ಇದನ್ನು implement ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ. ಇಲ್ಲಿ ಏನು ನಡೆಯುತ್ತಿದೆಯೋ, ಅದು ಪೂರ್ಣವಾಗಿ ನನಗೂ ಕೂಡ ಒಪ್ಪಿಗೆ ಇಲ್ಲ. ನೀವು ಹೇಳುತ್ತಿರುವಂತಾದ್ದು ಸರಿ. ದಯವಿಟ್ಟು ನಿಮ್ಮ ಸಲಹೆಗಳನ್ನು ಕೊಡಿ. ನಾವು ಅದರ ಬಗ್ಗೆ ಮುಂದುವರೆಯುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನಾನೂ ಅಷ್ಟೇ ಮಾನ್ಯ ಈಶ್ವರಪ್ಪನವರೆ. I am not objecting anything. If you are serious about it, you seriously involve in it. ಅಷ್ಟೇ ನಾನು ಹೇಳುತ್ತಿರುವುದು. ಸನ್ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ರಾಷ್ಟ್ರಪತಿಗಳ ಬಗ್ಗೆ ನಮಗೆ ಬಹಳ ಗೌರವ ಇದೆ. He is a proud son of India. We are all very proud of that great man. ೧೧ ಅಂಶಗಳನ್ನು ವಿಷನರೀಸ್ ಎಂದು ಅವರು ನಮಗೆ ಕೊಟ್ಟಿದ್ದಾರೆ. ಅವರು ಕೊಟ್ಟಿರತಕ್ಕಂಥ ಈ ೧೧ ಅಂಶಗಳನ್ನು ನಾನು ಬಹಳ ಸೀರಿಯಸ್ಸಾಗಿ ಓದಿದ್ದೇನೆ. ಏಕೆಂದರೆ, ಒಬ್ಬ ಜವಾಬ್ದಾರಿ ಸ್ಥಾನದಲ್ಲಿ ಇರತಕ್ಕಂಥ ರಾಷ್ಟ್ರಾಧ್ಯಕ್ಷರು ಸಲಹೆ ಕೊಟ್ಟಾಗ, ನಾವು ಬಹಳ ಗಂಭೀರವಾಗಿ ಅದನ್ನು ತೆಗೆದುಕೊಳ್ಳಬೇಕಾಗುತ್ತದೆ, ನೋಡಬೇಕಾಗುತ್ತದೆ. ಅದನ್ನು ನೋಡಿದಾಗ ನನಗನ್ನಿಸಿದ್ದು, It is a technocrat approach to the export oriented production. I am specifically putting this word ' Technocrat approach' to the export oriented production. ಈ ಐಡಿಯಾವನ್ನು ಅವರು ಕೊಟ್ಟಿದ್ದಾರೆ. It is No.1. Number two-It is everything, Nothing new in it. Everything is formulated by the Planning Commission and more particularly, the ideas, crux, intentions, The thrust of these 11 points is exactly the brain child of Mr. Montek Singh Ahluwallia, who is the Vice-Chairman of the Planning Commission. No3- The majority of the Suggestions made in the 11 points are, export-oriented production ಗೆ ಯಾವ ರೀತಿ ನಾವು ಪ್ರೋತ್ಸಾಹ ಕೊಡಬೇಕು, export oriented production ಗೆ ನಿಂದ ಯಾವ ರೀತಿ ನಮ್ಮ ದೇಶಕ್ಕೆ ಲಾಭ ಬರುತ್ತದೆ, ಹೇಗೆ employment generation ಆಗುತ್ತದೆ ಎನ್ನತಕ್ಕಂಥದ್ದಕ್ಕೆ ಹೆಚ್ಚಿ stress ಮಾಡಿ ಹೇಳಿದ್ದಾರೆ. ನಾನು ಹನ್ನೊಂದು ಅಂಶಗಳ ವಿವರಗಳಿಗೂ ಹೋಗುವುದಿಲ್ಲ. ಎರಡು–ಮೂರು ವಿಷಯಗಳನ್ನು ನಿಮ್ಮ ಅವಗಾಹನೆಗೆ ತರಲಿಕ್ಕೆ, ಅರ್ಥ ಮಾಡಿಕೊಳ್ಳುವುದಕ್ಕೆ ಎರಡು–ಮೂರು items ಮಾತ್ರ ನಾನು example ಕೊಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ನನಗೆ ಇದರಲ್ಲಿ ಒಂದು ಬಹಳ ನೋವಿನ ಸಂಗತಿ ಇದೆ. ಬೇಸರದ ಸಂಗತಿ ಇದೆ. With due respect to our Hon'ble President of India, there are so many great visionaries we had in this country, commencing from Sir M. Vishweshwaraiah to Montek Singh Ahluwalia. ಇನ್ನೂ ಒಂದು ಬಹಳ ಮುಖ್ಯವಾದ ಅಂಶ ನಾನು ಹೇಳುವುದು, ಏಕೆ ಇದನ್ನು ಪ್ರಸ್ತಾಪ ಮಾಡಿದೆ ಎಂದರೆ, here we

are, ಬಹಿರಂಗವಾಗಿ ನಾವು ಒಂದನ್ನು ಪ್ರದರ್ಶನ ಮಾಡುತ್ತಿದ್ದೇವೆ. ನಾವೆಲ್ಲರೂ ಸೇರಿ ಏನನ್ನು ಪ್ರದರ್ಶನ ಮಾಡುತ್ತಿದ್ದೇವೆ ಎಂದರೆ, ನಮ್ಮ ಭೌತಿಕ ದಿವಾಳಿಕೋರತನವನ್ನು ಮತ್ತು ನಮ್ಮ ಭೌತಿಕ ಅಪ್ರಾಮಾಣಿಕತೆ ಅಂದರೆ, intellectual bankruptcy as well as intellectual dishonesty-ಏಕೆ ಹೇಳುತ್ತಿದ್ದೇನೆಂದರೆ, ಸರ್ವಪಲ್ಲಿ ರಾಧಾಕೃಷ್ಣನ್‌ನಂತಹ ಒಬ್ಬ ರಾಷ್ಟ್ರಾಧ್ಯಕ್ಷರೂ ಕೂಡ ಇದೇ ಸದನದಲ್ಲಿ ಮಾತನಾಡಿ ಸಲಹೆಗಳನ್ನು ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ we had our Father of the Nation. Father of the Nation ಇಡೀ ದೇಶದ ಭವಿಷ್ಯದ ಬಗ್ಗೆ ಯಾರಾದರೂ ಪ್ರಾಮಾಣಿಕವಾದಂಥ ಕಾಳಜಿಯನ್ನು ಹೊತ್ತು ಈ ದೇಶದ ಭವಿಷ್ಯದ ಬಗ್ಗೆ ಕನಸನ್ನು ಕಂಡಿದ್ದರೆ, Father of the Nation ಬರೀ ಕನಸನ್ನು ಕಂಡಿದ್ದು ಅಲ್ಲ ಅದಕ್ಕೆ ಜೀವನ ಪರ್ಯಂತ ಅವರ ಸಾವಿನ ಕೊನೆಯ ಗಳಿಗೆಯವರೆಗೂ ಪ್ರಯತ್ನ ಮಾಡಿದ ಯಾರಾದರೂ ಒಬ್ಬ ಮನುಷ್ಯ ಈ ದೇಶದಲ್ಲಿ ಉಳಿದಿದ್ದರೆ ಅದು ಮಹಾತ್ಮ ಗಾಂಧಿ ಮಾತ್ರ ಇಡೀ ಜೀವನದ ಉದ್ದಕ್ಕೂ ಈ ದೇಶದ ವಿಮೋಚನೆಗೆ ಹೋರಾಟ ಮಾಡಿದಂತಹವರು, ಇಡೀ ತಮ್ಮ ಜೀವನದ ಉದ್ದಕ್ಕೂ ಈ ದೇಶದ ವಿಮೋಚನೆಗೆ ಹೋರಾಟ ಮಾಡಿ ಈ ದೇಶ ಸಂತೋಷವಾಗಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಣೆ ಮಾಡುತ್ತಿದ್ದರೆ, that great man was in Nakoli. He was not a part of celebrations of the 1947. ಭಾರೀ ಗಂಭೀರವಾದಂಥ ಮತ ಕಲಹಗಳು ಜರುಗಿ, ನಕೋಲಿಯಲ್ಲಿ ಜೀವಗಳು ನಾಶ ಆಗಿದ್ದಂಥ ಸಂದರ್ಭದಲ್ಲಿ, he was in Nakoli when the whole of the country was celebrating Independence Day. A British correspondent went to him and asked in Nakoli; "What is this irony ? man who one time sacrificed you life for the country and freedom, but you are in Nakili when they are celebrating the Independence day." What was the Gandhi's answer ? Gandhi told "I am disappointed with this Congress." That is why he suggested immediately after independence to dissolve this Congress. " My vision of the Congress was, it was a movement to get the freedom, not as political party. But today, all the vested interests, self interest fellows joined the party and caught the power." They are only after power. That is why he was disappointed. ' I was in Nakoli seeing the fate and tregedy of my people who are shedding their blood in the name of religion.' That was Gandhi's message on that day. ಆದರೆ, ಗಾಂಧಿ ಗ್ರಾಮ ಸ್ವರಾಜ್ಯದ ಕನಸನ್ನು ಕಂಡಿದ್ದರು. ಅವರು ಬರೀ ಕನಸು ಕಾಣಲಿಲ್ಲ ತತ್ವವನ್ನೇ ಬರೆದರು. His greatest philosophy, of the trusteeship philosophy ಈ ದೇಶಕ್ಕೆ ಕೊಟ್ಟರು. ನಾನು ಇವತ್ತು ಪ್ರಾಮಾಣಿಕವಾಗಿ ಎಲ್ಲರನ್ನೂ ಕೇಳುತ್ತಿದ್ದೇನೆ, irrespective of political party, if we are having an iota of respect to this great man, ಆ ಗ್ರಾಮ ಸ್ವರಾಜ್ಯದ ಬಗ್ಗೆ ಅವರು ಕೊಟ್ಟಂಥ ಕಲ್ಪನೆಯ ಬಗ್ಗೆ, ಅದರಲ್ಲಿ 1% ಏನಾದರೂ ನಾವು ಈವತ್ತು implement ಮಾಡಿದ್ದೇವೆಯೇ, after 58 years ? Let us interact ourselves. It is not a question of blaming any single party or

single person. Let us interact ourselves. Are we respecting that great man, till today? ಅವರು ಹೇಳಿದ್ದೇನು ? ಗ್ರಾಮಗಳು ಎಲ್ಲಿಯವರೆಗೆ ಈ ದೇಶದಲ್ಲಿ ಸ್ವಯಂ ಪರಿಪೂರ್ಣವಾಗುವುದಿಲ್ಲವೋ, ಆ ಗ್ರಾಮದಲ್ಲಿರತಕ್ಕಂತಹ ಪ್ರತಿಯೊಬ್ಬ ಮನುಷ್ಯನಿಗೂ ಎಲ್ಲಿಯವರೆಗೆ ತನ್ನ ಕಾಲ ಮೇಲೆ ತಾನು ನಿಂತು ಜೀವನ ಮಾಡತಕ್ಕಂತಹ ಶಕ್ತಿಯನ್ನು ನಾವು ಕೊಡುವುದಿಲ್ಲವೋ, ಅಲ್ಲಿಯವರೆಗೂ ಸ್ವಾತಂತ್ರ್ಯಕ್ಕೆ ಅರ್ಥ ಇಲ್ಲ. ಅಲ್ಲಿಯವರೆಗೂ ನಿಮ್ಮ ಗ್ರಾಮಗಳಿಗೆ ಬೆಲೆ ಇಲ್ಲ. ನಿಮ್ಮ ದೇಶದ ಸ್ವಾತಂತ್ರ್ಯಕ್ಕೆ ಬೆಲೆ ಇಲ್ಲ. ಆದರೆ ಇವತ್ತು 58 ವರ್ಷಗಳ ನಂತರ ನಮ್ಮನ್ನು ನಾವು ವಿಮರ್ಶೆಗೆ ಒಳಪಡಿಸಿಕೊಂಡರೆ ನಮ್ಮ ಗ್ರಾಮಗಳ ಪರಿಸ್ಥಿತಿ ಏನಾಗಿದೆ ಎಂದು ಇಲ್ಲಿರುವ ನಮಗೆಲ್ಲರಿಗೂ ಗೊತ್ತಿದೆ. ಗೊತ್ತಿಲ್ಲದೆ ಇರುವವರು ಇಲ್ಲಿ ಯಾರೂ ಇಲ್ಲ. ಏಕೆಂದರೆ 90 ಭಾಗ ಎಲ್ಲಾ ಶಾಸಕರೂ ಬಂದಿರತಕ್ಕಂಥದ್ದು ಹಳ್ಳಿಗಾಡಿನ ಪ್ರದೇಶಗಳಿಂದ. ಅಲ್ಲಿ ಏನು ನಡೆಯುತ್ತಿದೆ, ಏನಾಗಿದೆ, ಅಲ್ಲಿಯ ಜನರ ಜೀವನ ಪರಿಸ್ಥಿತಿ ಏನಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ನಮ್ಮೆಲ್ಲರಿಗೂ ಅವರ ಬಗ್ಗೆ sympathy ಇದೆ, ಅಪಾರವಾದ sympathy ಇದೆ, ಪ್ರಾಮಾಣಿಕವಾದ sympathy ಇದೆ. ಅವರನ್ನು ಬಿಟ್ಟು ನಾವೇನೂ ಮಾತನಾಡುವುದೇ ಇಲ್ಲ. ಆದರೆ, What we did for them? ಏನೂ ಇಲ್ಲ. One of the greatest disciples of Gandhi, ನಮ್ಮ ಡಿ.ಆರ್. ಪಾಟೀಲ್‌ರವರಿಗೆ ಚೆನ್ನಾಗಿ ಗೊತ್ತು. ವಿ.ಎಂ. ದಾಂಡೇಕರ್‌ರವರು ಒಂದು ಕಡೆ ಹೇಳುತ್ತಾರೆ, " Minus land distribution to the tiller. It is a hypocrisy to talk about the rural economy. It is a hypocrisy to talk about the self-reliance of the villages. Because the basic criteria for the agricultural development is land. It is not only land, it is the re-distribution of the land to the tiller. ಅವರು ಮತ್ತು ಅವರ ಸ್ನೇಹಿತರಾದ ನೀಲಕಂಠರಾವ್ ಇಬ್ಬರೂ ಸೇರಿ 'Poverty in India' ಅನ್ನುವಂಥ ಪುಸ್ತಕದಲ್ಲಿ ಬಹಳ ಕ್ಲಿಯರ್ ಆಗಿ mention ಮಾಡಿದ್ದಾರೆ. ಅದನ್ನು ಬೇಕಾದರೆ ತಮಗೆ ಓದುವುದಕ್ಕೆ ಕೊಡುತ್ತೇನೆ. ನೀವು ಓದಬಹುದು, interest ಇರುವವರು ಕೇಳಬಹುದು.

'A major means of production in Indian economy is a land, as we have seen a large majority of the rural poor have either no land or have very little land. With little or inadequate land, only they cannot fully employ themselves, and members of their family and -or part of the year, they have to wait and look around for work'. It is not I am telling. It is V.M.Dandekar, the greatest disciple of Mahatma Gandhi, told. ಈ ರೀತಿ ಯಾವಾಗ ಹೇಳಿದ್ದು ಗೊತ್ತೇ, 1964 ರಲ್ಲಿ. He told after 20 years of Independenace. - ಅದೇ ರೀತಿಯ ಸಂದರ್ಭದಲ್ಲಿ ಇವೊತ್ತು ಇಲ್ಲಿ ಡಾ: ಅಬ್ದುಲ್ ಕಲಾಂರವರು ಹೇಳಿರುವುದರಲ್ಲಿ ನಾನು ಎಲ್ಲವನ್ನೂ ರೆಫರ್ ಮಾಡುವುದಕ್ಕೆ ಹೋಗುವುದಿಲ್ಲ. ಡಾ। ಅಬ್ದುಲ್ ಕಲಾಂರವರು ತಮ್ಮ ಭಾಷಣದಲ್ಲಿ 'Focus on how the per-capita income of Karnataka can be increased from the existing Rs. 25,000 (at 2004-05) ಎಂದು ಹೇಳುತ್ತಾರೆ. ಅಂದರೆ 2004–2005ರ ಲೆಕ್ಕದಲ್ಲಿ. It increased Rs. 75,000 by 2009 and also to

create investment friendly climate leading to employment avenues for the two million unemployed or underemployed persons of the state. ಅಧ್ಯಕ್ಷರೆ, ಈ ಪರ್ ಕ್ಯಾಪಿಟಾ ಇನ್‌ಕಂನ್ನು ಡಿವೈಡ್ ಮಾಡುವುದು. ಎಷ್ಟು ಅನ್–ಸೈಂಟಿಫಿಕ್ ಮೆತೆಡ್‌ನಲ್ಲಿ ಪರ್ ಕ್ಯಾಪಿಟಾ ಇನ್‌ಕಂ ಡಿವೈಡ್ ಮಾಡುತ್ತಾರೆ ಇಂಡಿಯಾ ದೇಶದಲ್ಲಿ ಎಂದು ಹೇಳಿದರೆ ಒಬ್ಬ ಐ.ಎ.ಎಸ್. ಆಫೀಸರ್‌ಗೆ ಎಲ್ಲಾ ರೀತಿಯ ಭತ್ಯೆ ಸೇರಿ ಒಂದು ತಿಂಗಳಿಗೆ 50 ಸಾವಿರ ರೂಪಾಯಿ ಸಂಬಳ ಬರುತ್ತದೆ. ಒಬ್ಬ ಕ್ಲಾಸ್ 4 ಎಂಪ್ಲಾಯೀಗೆ ತಿಂಗಳಿಗೆ ಎಲ್ಲಾ ಭತ್ಯೆ ಸೇರಿ 3 ರಿಂದ 5 ಸಾವಿರ ರೂಪಾಯಿಗಳ ತನಕ ಸಂಬಳ ಬರುತ್ತದೆ. ಅವನದ್ದು ಮತ್ತು ಇವನದ್ದನ್ನು ಸೇರಿಸಿಬಿಟ್ಟು ಸರಾಸರಿ ಪರ್ ಕ್ಯಾಪಿಟಾ ಇನ್‌ಕಂನ್ನು ಲೆಕ್ಕ ಹಾಕುವುದು ಈ ದೇಶದಲ್ಲಿ.

SRI BASAVARAJ RAYAREDDI :- It is not on the salary. It is divided under GSDP. Gross Net Product.

Sri G.V. Sriramareddy :- Whatever it may be. I have given an example.

SRI BASAVARAJA RAYAREDDY :- It is not on the salary. Salary is not coming under divided per-capita income.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಹೋಗಲಿ ಬಿಡಿ, ಸ್ಯಾಲರಿ ಎಂದರೆ ಬಸವರಾಜ ರಾಯರೆಡ್ಡಿಯವರಿಗೆ ಏಕೋ ಸಿಟ್ಟು ಬರುತ್ತದೆ. ರಾಯರೆಡ್ಡಿಯವರ ಆದಾಯ ಒಂದು ತಿಂಗಳಿಗೆ 20 ಸಾವಿರ ರೂಪಾಯಿ ಇದೆ

ಶ್ರೀ ಬಸವರಾಜ ರಾಯರೆಡ್ಡಿ :- ನಾನು ಸ್ಯಾಲರಿ ಬಗ್ಗೆ ಹೇಳಲಿಲ್ಲ. ಹೇಗೆ ಪರ್ ಕ್ಯಾಪಿಟಾ ಇನ್‌ಕಂ ಡಿವೈಡ್ ಮಾಡುತ್ತಾರೆ ಎಂಬುದನ್ನು ಹೇಳಿದೆನಷ್ಟೆ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನಾನು ಅದನ್ನೇ ಹೇಳುತ್ತಿರುವುದು. ಹೇಗೆ ಪರ್ ಕ್ಯಾಪಿಟಾ ಇನ್‌ಕಂನ್ನು ಅನ್ – ಸೈಂಟಿಫಿಕ್ ಆಗಿ ಲೆಕ್ಕ ಹಾಕುತ್ತಾರೆ ಎಂದು ಹೇಳಿದರೆ 500 ರೂಪಾಯಿ ಇನ್ ಕಂಗೂ 100 ರೂಪಾಯಿ ಇನ್‌ಕಂಗೂ ಸರಾಸರಿ ಮಾಡಿಬಿಟ್ಟು ಪರ್ ಕ್ಯಾಪಿಟಾ ಇನ್‌ಕಂ ಹಾಕಿ ಈ ರೀತಿ ಲೆಕ್ಕ ಹೇಳುತ್ತಾರೆ. ಈ ಲೆಕ್ಕದ ಪ್ರಕಾರ ನಿಮಗೆ 26 ಸಾವಿರ ಇನ್‌ಕಂ ಪರ್ ಆ್ಯನಂ ಇದೆ ಎಂದು ಹೇಳುತ್ತೀರಿ. To increase that, ನೀವು ಏನು ಪ್ರೋಗ್ರಾಂನ್ನು ಹಾಕಿದ್ದೀರಿ ? ಮತ್ತೆ ಅವರೇ ಹೇಳುತ್ತಾರೆ, ಅಂದರೆ ಡಾ॥ ಕಲಾಂರರವರೇ ತಮ್ಮ ಭಾಷಣದಲ್ಲಿ 'Generation of the state and earning capacity of the citizens through certain development missions, which I will be discussing. ಏನು ಡಿಸ್‌ಕಸ್ ಮಾಡಿದ್ದಾರೆ ಸಾರ್ ಅವರು, ಇಲ್ಲಿ ಏನು ಡಿಸ್‌ಕಸ್ ಮಾಡಿದ್ದಾರೆ ಅದರ ಬಗ್ಗೆ ಎಂದು ಹೇಳಿದರೆ, ಏನು ಅವರು ಸಜೆಸ್ಟ್ ಮಾಡುತ್ತಾರೆಂದರೆ, 'India is presently exporting six billion dollars worth of garments, where as with the WTO regime in place, we should aim to enhance the production and export of apparel and garments to over 18 to 20 billion dollars within the next three years. This will need establishment of garment and apparel industries in different parts of the country. ' This is

the solution. Can anybody expect ? ನಾನು ದೊಡ್ಡ ಎಕನಾಮಿಸ್ಟ್ ಅಲ್ಲ. ಈ ಎಕ್ಸ್‌ಪೋರ್ಟ್ ಮಾಡುವುದರಿಂದ ನೀವು ಪರ್ಸೆಂಟೇಜ್ ಆಫ್ ಎಕ್ಸ್‌ಪೋರ್ಟ್ ಮಾಡುವುದರಿಂದ ನಮ್ಮ ದೇಶದಲ್ಲಿ ಹಾಕುವುದಕ್ಕೆ ಬಟ್ಟೆ ಇಲ್ಲದೇ ಇರತಕ್ಕಂಥವನಿಗೆ ಬಟ್ಟೆ ಬರತಕ್ಕಂಥ ವಿಧಾನ ಹೇಗೆ ? ನಾನು ಒಂದು ಉದಾಹರಣೆಯನ್ನು ನಿಮಗೆ ಹೇಳುತ್ತೇನೆ. ನಮ್ಮ ಬಳ್ಳಾರಿ ಡಿಸ್ಟ್ರಿಕ್ಟ್‌ನಲ್ಲಿ, ನಿಮಗೂ ನಮಗೂ ಆಶ್ಚರ್ಯ ಆಗತಕ್ಕಂಥ ರೀತಿಯಲ್ಲಿ ಅಲ್ಲಿ ಕ್ಯಾಪಿಟಲ್ ಜನರೇಟ್ ಆಗುತ್ತಿದೆ. by export of the iron ore. ನಮಗೆಲ್ಲರಿಗೂ ಹೆಚ್ಚು ಜನರಿಗೆ ಗೊತ್ತಿದೆ. The highest private helicopters owned people in Karnataka is in Bellary district. Highest Benz cars . .

SRI BASAVARAJA RAYAREDDY :- Not even one helicopter in Bellary district.

ಶ್ರಿ ಜಿ.ವಿ. ಶ್ರೀರಾಮರೆಡ್ಡಿ :- ಸುಮ್ಮನೆ ಕುಳಿತುಕೊಳ್ಳಿರಿ. ನಿಮ್ಮನ್ನು ನಾನು ಮಾತನಾಡಿಸಲೇ ಇಲ್ಲ. ಪ್ಲೀಸ್ ನಿಮಗೆ ಗೊತ್ತಿಲ್ಲ. ನೀವು ಕುಳಿತುಕೊಳ್ಳಿ, It is my opinion.

ಶ್ರೀ ಬಸವರಾಜ ರಾಯರೆಡ್ಡಿ :- ನನಗೆ ಗೊತ್ತಿದೆ. ನಿಮ್ಮ ಅಭಿಪ್ರಾಯ ಅದು ಇರಬಹುದು. ನೀವು ವೆರಿಫೈ ಮಾಡಿಕೊಳ್ಳಿ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನನಗೆ ಗೊತ್ತಿದೆ. ಬೇಕಾದರೆ ವೆರಿಫೈ ಮಾಡಿಸೋಣ ಬಿಡಿ

ಅಧ್ಯಕ್ಷರು :- ಶ್ರೀ ರಾಮರೆಡ್ಡಿಯವರೆ, ಬೇಗ ಮುಗಿಸಿ.

ಶ್ರೀ ಬಸವರಾಜ ರಾಯರೆಡ್ಡಿ :- ಹೆಲಿಕ್ಯಾಪ್ಟರ್ ಹೊಂದಿದ್ದಾರೆ ಎಂದು ಹೇಳಿಬಿಟ್ಟರೆ ಹೇಗೆ?

ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ :- ನೋಡಿ ರಾಯರೆಡ್ಡಿಯವರೆ, this is my opinion. you are not suppose to dispute. You say whenever you have an opportunity. This is not correct. Still I stand by my words. That Highest number 2 helicopters are in Bellary district. ಬಳ್ಳಾರಿಯಲ್ಲಿ ಇವೊತ್ತು ಐರನ್ 'ಒರ್ ಏನು ಎಕ್ಸ್‌ಪೋರ್ಟ್ ಆಗುತ್ತಿದೆ, ಆ ಬಳ್ಳಾರಿ ಡಿಸ್ಟ್ರಿಕ್ಟ್‌ಗೆ ಒಂದು ವರ್ಷಕ್ಕೆ ಎಷ್ಟು ಸಾವಿರ ಕೋಟಿ ರೂಪಾಯಿಗಳ ಟ್ರಾನ್ಸ್ಯಾಕ್ಶನ್ ಬಳ್ಳಾರಿ ಡಿಸ್ಟ್ರಿಕ್ಟ್‌ನಲ್ಲಿ ಆಗುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಆದರೆ ಬಳ್ಳಾರಿ ಜಿಲ್ಲೆಯ ಹಳ್ಳಿ ಪ್ರದೇಶಗಳಲ್ಲಿ ಇರತಕ್ಕಂಥ ಜನಗಳ ಜೀವನ ಮಟ್ಟ ಹೇಗಿದೆ? ಬಳ್ಳಾರಿ ಜಿಲ್ಲೆಯ ಹಳ್ಳಿಯ ಜನರ ಜೀವನ ಮಟ್ಟ ಹೇಗಿದೆ ? ಸಾವಿರಾರು ಕೋಟಿ ರೂಪಾಯಿಗಳ ಐರನ್ 'ಒರ್‌ನ್ನು ಚೈನಾಗೆ ಎಕ್ಸ್‌ಪೋರ್ಟ್ ಮಾಡುತ್ತಾರೆ. ಇದರಿಂದ ಇನ್‌ಕಂ ಟ್ಯಾಕ್ಸ್ ಬರುತ್ತಿದೆ. ಸೆಸ್ ಬರುತ್ತಿದೆ, ರಾಯಲ್ಟಿ ಬರುತ್ತಿದೆ. ಇಷ್ಟೆಲ್ಲಾ ಇದ್ದರೂ ಕೂಡ ಬಳ್ಳಾರಿಯ ಹಳ್ಳಿಗಾಡಿನ ಜನರ ಜೀವನ ಯಾವ ಸ್ಥಿತಿಯಲ್ಲಿದೆ. ? ಇದು ಒಂದು ಎಕ್ಸಾಂಪಲ್ ಕೊಟ್ಟೆ ನಾವು ಕೋಲಾರ ಜಿಲ್ಲೆಯವರು. ಈ ನಾಡಿಗೆ ಚಿನ್ನವನ್ನು ಕೊಟ್ಟವರು. ಈ ದೇಶಕ್ಕೆ ರೇಷ್ಮೆ ಕೊಟ್ಟಿದ್ದೇವೆ. ಈ ದೇಶಕ್ಕೆ ಹಾಲು ಕೊಡುತ್ತಿದ್ದೇವೆ. ಆದರೆ ನಮ್ಮ ಜಿಲ್ಲೆಯಲ್ಲಿ ಇವೊತ್ತು ಕೆಲಸ ಇಲ್ಲದೇ ಊರುಗಳನ್ನು ಬಿಟ್ಟು ಬೇರೆ ಕಡೆಗೆ ಹೊರಟುಹೋಗುತ್ತಿದ್ದಾರೆ. ಅಂದರೆ ನಾನು ಏಕೆ ಈ ವಿಚಾರವನ್ನು ಹೇಳಿದನೆಂದರೆ,

ನಾವು ಇನ್‌ಕಂನ್ನು ಜನರೇಟ್ ಮಾಡುತ್ತಿದ್ದೇವೆ, ಆದಾಯವನ್ನು ಜನರೇಟ್ ಮಾಡುತ್ತಿದ್ದೇವೆ. ಆದರೆ ಜನರೇಟ್ ಆದಂಥ ಆದಾಯ ಯಾರ ಕೈಯಲ್ಲಿ ಅಕ್ಯುಮ್ಯುಲೀಟ್ ಆಗುತ್ತಿದೆ. Whether that accumulated capital has been equally distributed to the common man or any Government is having any plan to distribute that income equally to the common man. ? ನೀವೇನು ಹೇಳುತ್ತೀರಿ, ಇನ್ನೊಂದು ಉದಾಹರಣೆಯನ್ನು ಕೊಡುತ್ತೀರಿ. ಇಲ್ಲಿ ಐ.ಟಿ.,ಬಿ.ಟಿ., ಇದೆ. 20 ಸಾವಿರ ಕೋಟಿ ರೂಪಾಯಿಗಳ ವರಮಾನ ತೆರಿಗೆಯನ್ನು ವರ್ಷಕ್ಕೆ ಅವರು ಕೊಡುತ್ತಿದ್ದಾರೆ. ಅದಕ್ಕೋಸ್ಕರ ಅವರಿಗೆ ನಾವು ಪ್ರಾಧಾನ್ಯತೆಯನ್ನು ಕೊಡಬೇಕು ಎಂದು ಹೇಳುತ್ತೀರಿ. ಸರಿ, ಅಗ್ರೀಡ್ . ಅವರು ಕೊಡತಕ್ಕಂಥ 25 ಸಾವಿರ ಕೋಟಿ ರೂಪಾಯಿಗಳನ್ನು ಮಾತ್ರ ನೀವು ಲೆಕ್ಕ ಹಾಕುತ್ತೀರಿ. ಆದರೆ ಇಡೀ ಕೃಷಿ ರಂಗದಿಂದ, ಬೇರೆ ಬೇರೆ ವಲಯಗಳಿಂದ ನಿಮಗೆ ಬರತಕ್ಕಂಥ ಟ್ಯಾಕ್ಸ್ ಎಷ್ಟು ಸಾವಿರ ಕೋಟಿ ರೂಪಾಯಿ ? ಅವರಿಗೆ ಎಷ್ಟು ಕೊಟ್ಟೀರಿ ? ನಿನ್ನೆ ನಮ್ಮ ಮಾಧುಸ್ವಾಮಿಯವರು ಎತ್ತಿದ್ದಂಥ ವಿಚಾರದಲ್ಲಿ ಎಲ್ಲರೂ ಅವರ ಮೇಲೆ ಜಗಳಕ್ಕೆ ಬಂದಿರಿ. ನಾನು ಇವೊತ್ತು ನನ್ನ ಸ್ನೇಹಿತರಿಗೆ ಕೇಳುತ್ತಿದ್ದೇನೆ, ಇಂಡಿಯಾ ದೇಶದಲ್ಲಿ 6 ಲಕ್ಷ ಹಳ್ಳಿಗಳಿವೆ. 6 ಲಕ್ಷ ಹಳ್ಳಿಗಳಲ್ಲಿ ಜೀವನ ಮಾಡತಕ್ಕಂಥ ಜನಸಂಖ್ಯೆ ಎಷ್ಟು ? ಅರ್ಬನ್ ಪಾಪ್ಯುಲೇಶನ್ ಎಷ್ಟು ? ಅರ್ಬನ್ ಪಾಪ್ಯುಲೇಶನ್‌ಗೆ ನೀವು ಖರ್ಚು ಮಾಡುತ್ತಿರುವ ಹಣ ಎಷ್ಟು ? ರೂರಲ್ ಪಾಪ್ಯುಲೇಶನ್‌ಗೆ ನೀವು ಖರ್ಚು ಮಾಡುತ್ತಿರತಕ್ಕಂಥ ಹಣವೆಷ್ಟು ? ಲೆಕ್ಕ ಕೊಡಿ. ಇದಕ್ಕೆ ಶ್ವೇತಪತ್ರವನ್ನು ಕೊಡಿ ಅಥವಾ ಏನನ್ನಾದರೂ ಕೊಡಿ. ಒಟ್ಟಿನಲ್ಲಿ ಲೆಕ್ಕ ಕೊಡಿ. ಒಂದು ಕಡೆ ಈ ದೇಶದಲ್ಲಿ ಒಂದು ಮಾಸ್ಟರ್ ಬಾತ್ ರೂಂಗೆ 10 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗುತ್ತಿದೆ. ಆದರೆ ನಿರ್ಮಲ ಗ್ರಾಮ ಯೋಜನೆಯ ಹೆಸರಿನಲ್ಲಿ ಒಂದು ಶೌಚಾಲಯಕ್ಕೆ 500 ರೂಪಾಯಿಗಳನ್ನು ಕೊಡಲಾಗುತ್ತಿದೆ. ಮಾಸ್ಟರ್ ಬಾತ್‌ರೂಂಗೆ, ಟಾಯ್ಲೆಟ್‌ಗೆ ಹೋಗುವವರಿಂದ ಎಕ್ಸ್‌ಟ್ರಾ ಏನಾದರೂ ಬರುತ್ತದೆಯೋ ಏನೋ ನನಗೆ ಗೊತ್ತಿಲ್ಲ. ನಿರ್ಮಲ ಗ್ರಾಮ ಯೋಜನೆಯ ಟಾಯ್ಲೆಟ್‌ಗೆ ಹೋಗುವವರಲ್ಲಿ ಎಕ್ಸ್‌ಟ್ರಾ ಇಲ್ಲದೆ ಏನು ಕಡಿಮೆ ಬರುತ್ತದೆಯೋ ನನಗೆ ಗೊತ್ತಿಲ್ಲ. ಅವರ ಬಾತ್‌ರೂಂನ್ನು 10 ಲಕ್ಷ ರೂಪಾಯಿಗಳು ಖರ್ಚು ಮಾಡಿ ಕಟ್ಟಬಹುದು. ಆದರೆ ಇವರ ಬಾತ್‌ರೂಂ ಟಾಯ್ಲೆಟ್‌ಗೆ ನಿರ್ಮಲ ಗ್ರಾಮ ಯೋಜನೆಯಲ್ಲಿ ನೀವು 500 ರೂಪಾಯಿಗಳನ್ನು ಕೊಡುತ್ತೀರಿ. ಅದೂ ಏನು ಎರಡು ಸಿಮೆಂಟ್ ಮೂಟೆ, ಒಂದು ಬೇಸಿನ್ ಕೊಡುವುದು. ಅದನ್ನು ಕೊಟ್ಟು ಕಳುಹಿಸುವುದು. ಅವನು ಅದನ್ನು ಊರಿಗೂ ಕೂಡ ಹೊತ್ತುಕೊಂಡು ಹೋಗುವುದಿಲ್ಲ. ದಾರಿಯಲ್ಲಿಯೇ ಮಾರಿಕೊಂಡು ಹೋಗಿರುತ್ತಾನೆ. ಇದು ನಿರ್ಮಲ ಗ್ರಾಮ ಯೋಜನೆ. ನಿರ್ಮಲ ಗ್ರಾಮ ಯೋಜನೆ ಆಯಿತು, ಸ್ವಾಭಿಮಾನ ಕರ್ನಾಟಕ ಆಯಿತು, ಈಗ ನಾವು ಸುವರ್ಣ ಕರ್ನಾಟಕಕ್ಕೆ ಬಂದಿದ್ದೇವೆ. ಸುವರ್ಣ ಕರ್ನಾಟಕದ ಈ ಸಂದರ್ಭದಲ್ಲಿ ಶ್ರೀ ವಿ.ಎಂ. ಧಾಂಡೇಕರ್ ಇನ್ನೊಂದು ವಿಚಾರವನ್ನೂ ಕೂಡ ಹೇಳುತ್ತಾರೆ. ನಮ್ಮ ದೇಶದ ಪ್ರತಿಯೊಬ್ಬ ಮನುಷ್ಯನಿಗೆ ಸರಾಸರಿಯಾಗಿ ಒಂದು ವರ್ಷಕ್ಕೆ ಐದು ಮೀಟರ್ ಬಟ್ಟೆ ಕೊಂಡುಕೊಳ್ಳುವಂತಹ ಶಕ್ತಿ ಏನಾದರೂ ಬಂದರೆ, ಈಗ ನಮ್ಮ ದೇಶದಲ್ಲಿ ಎಷ್ಟು ಟೆಕ್ಸ್‌ಟೈಲ್ಸ್ ಮಿಲ್ಸ್ ಇದೆಯೋ, ಆ ಟೆಕ್ಸ್‌ಟೈಲ್ಸ್ ಮಿಲ್ಸ್‌ನ ನೂರರಷ್ಟು ಟೆಕ್ಸ್‌ಟೈಲ್ಸ್ ಮಿಲ್ಸ್ ನಮಗೆ ಬೇಕು ಎಂದು ಹೇಳಿದರು. ಆದರೆ ಇವತ್ತು ಅಹಮದಾಬಾದ್ ಹಾಗೂ ಬಾಂಬೆ ಎಲ್ಲಾ ಕಡೆ ಟೆಕ್ಸ್‌ಟೈಲ್ಸ್ ಮಿಲ್ಸ್ ಮುಚ್ಚಿಹೋಗುತ್ತಿದೆ. ದಾವಣಗೆರೆ once it was called Lancashire of Karnataka

ಮ್ಯಾಂಚೆಸ್ಟರ್ ಎಂದು ಕರೆಯುತ್ತಿದ್ದೆವು, ಈಗ ಒಂದೇ ಒಂದು ಫ್ಯಾಕ್ಟರಿ ಅಲ್ಲಿ ಉಳಿದಿಲ್ಲ. ಅಲ್ಲಿ ಬಟ್ಟೆ ತಯಾರು ಮಾಡತಕ್ಕಂಥ ಒಂದೇ ಒಂದು ಫ್ಯಾಕ್ಟರಿ ಅಲ್ಲಿ ಉಳಿದಿಲ್ಲ. ಟೆಕ್ಸ್‌ಟೈಲ್ಸ್ ಬಗ್ಗೆ ನಮ್ಮ ಡಾ। ಅಬ್ದುಲ್ ಕಲಾಂರವರು ಹೇಳುತ್ತಾರೆ, ಗಾರ್ಮೆಂಟ್ಸ್ ಅನ್ನು ತಯಾರು ಮಾಡಿ ಎಕ್ಸ್‌ಪೋರ್ಟ್ ಮಾಡಿ ಎಂದು ನಮ್ಮ ದೇಶದಲ್ಲಿ ಇರತಕ್ಕಂಥ ಜನಕ್ಕೆ ಒಂದು ವರ್ಷಕ್ಕೆ ಐದು ಮೀಟರ್ ಬಟ್ಟೆ ಕೊಂಡುಕೊಳ್ಳತಕ್ಕಂತಹ ಶಕ್ತಿ ಇಲ್ಲ, ಆದರೆ ಗಾರ್ಮೆಂಟ್ಸ್ ಅನ್ನು ತಯಾರು ಮಾಡಿ ಎಕ್ಸ್‌ಪೋರ್ಟ್ ಮಾಡಿ ಎಂದು ನೀವು ಹೇಳುತ್ತೀರಿ ನಮ್ಮ ದೇಶದ ಜನರನ್ನು ಬೆತ್ತಲೆಯಲ್ಲಿ ಓಡಾಡಿ ಎಂದು ಹೇಳಬೇಕಾ ? ಇದಕ್ಕೆ ಬೇಕಾದಂತಹ ಕಾಟನ್ ಬೆಳೆದರೆ ... ಹೇಳುತ್ತೇನೆ ಸಾರ್, ಅದಕ್ಕೆ ಬರುತ್ತೇನೆ . . . ಬರುತ್ತೇನೆ, ಏಕೆ ಆತುರ ಪಡುತ್ತೀರಿ ?

ಅಧ್ಯಕ್ಷರು :– ಮಾನ್ಯ ರೆಡ್ಡಿಯವರೆ, ಬೇಗ ಮುಗಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಕಾಟನ್ ಬೇಕು, ಅವರು ಇನ್ನೊಂದು ಏನು ಹೇಳುತ್ತಾರೆ.

ಶ್ರೀ ಸಿದ್ಧರಾಮಯ್ಯ :– ಯಾರಾದರೂ ಏನಾದರೂ ಹೇಳುವುದಕ್ಕೆ ಹೋದರೆ ನೀವು ಏಕೆ ಮೇಲೆ ಬೀಳುತ್ತೀರಿ ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಮೇಲೆ ಬೀಳುತ್ತೀರಿ ಎಂದು ಹೇಳುತ್ತೀರಿ, ನೀವು ಅಲ್ಲಿದ್ದೀರಿ, ನಾನು ಇಲ್ಲಿದ್ದೇನೆ, ಹೇಗೆ ಮೇಲೆ ಬೀಳುವುದು ?

ಶ್ರೀ ಜೆ.ಸಿ. ಮಾಧುಸ್ವಾಮಿ :– ಮೇಲೆ ಬೀಳೋದು ಯಾರ ಮೇಲೆ ಹೇಳಿ, ಪ್ರೀತಿ ಇರುವವರ ಮೇಲೆ ಅಲ್ಲವೆ ?

ಶ್ರೀ ಎಸ್. ರಾಜೇಂದ್ರನ್ :– ಹಾಗಾದರೆ ಕುಸ್ತಿ ಮಾಡುವವರು ಒಬ್ಬೊಬ್ಬರು ಮೇಲೆ ಬೀಳುತ್ತಾರೆ ಎಂದರೆ ಅದು ಪ್ರೀತಿನಾ ? ಒಳ್ಳೆಯ ಕತೆ ಇದು ।

ಅಧ್ಯಕ್ಷರು :– ರೆಡ್ಡಿಯವರೆ, ಬೇಗ ಮುಗಿಸಿ. ಇನ್ನೂ ಬಹಳ ಜನ ಮಾತನಾಡುವವರು ಇದ್ದಾರೆ. ಏನಿದು ? ಎಷ್ಟು ಹೇಳಿದರೂ ಅರ್ಥವಾಗುವುದಿಲ್ಲ. ಬೇಗ ಮುಗಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಈ ತರಹ ಡಿಸ್ಟರ್ಬ್ ಮಾಡಿದರೆ ನನ್ನ ಕೈಯಲ್ಲಿ ಆಗುವುದಿಲ್ಲ. ಎಕ್ಸ್‌ಪೋರ್ಟ್‌ಗೆ ಬೇಕಾದ ಕಾಟನ್ ಬೆಳೆಯುವುದಕ್ಕೆ ಸಾಧ್ಯವಿದೆ. ಹೆಚ್ಚು ಕಾಟನ್ ಬೆಳೆಯುತ್ತಾರೆ, ಗಾರ್ಮೆಂಟ್ ಉಪಯೋಗ ಮಾಡಿ ಎಕ್ಸ್‌ಪೋರ್ಟ್ ಮಾಡುತ್ತಾರೆಂದು ಹೇಳುತ್ತಾರೆ. ನಮಗೆಲ್ಲರಿಗೂ ಗೊತ್ತಿದೆ, ಕಳೆದ ಹತ್ತು ವರ್ಷಗಳಲ್ಲಿ ಆಂಧ್ರಪ್ರದೇಶ ಒಂದೇ ರಾಜ್ಯದಲ್ಲಿ ಕಾಟನ್ ಬೆಳೆದಂತಹ 15 ಸಾವಿರ ರೈತ ಕುಟುಂಬಗಳು ಆತ್ಮಹತ್ಯೆ ಮಾಡಿಕೊಂಡವು. ಅವರು ಏಕೆ ಆತ್ಮಹತ್ಯೆ ಮಾಡಿಕೊಂಡಿದ್ದು? ಕಾಟನ್‌ಗೆ ಬೆಲೆ ಸಿಗಲಿಲ್ಲವೆಂದು. ಆದರೆ ಆತ್ಮಹತ್ಯೆ ಮಾಡಿಕೊಂಡಂತಹ ನಮ್ಮ ರೈತರ ಬಗ್ಗೆ ಒಂದೇ ಒಂದು ಅಕ್ಷರ ಇದರಲ್ಲಿ ಇಲ್ಲ. ಇನ್ನೊಂದು ಗಂಭೀರವಾದಂತಹ ವಿಚಾರವನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. Intelectual dishonesty ಎಂದು ಸುವರ್ಣ ಕರ್ನಾಟಕದ ಈ ಸಂದರ್ಭದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರ ಬಗ್ಗೆ ಒಂದೇ ಒಂದು ಅಕ್ಷರ ಕೂಡ ಇದರಲ್ಲಿ ಇಲ್ಲ. The great man, who brought Karnataka into the national map both in Literacy and industry and agriculture, irrigation. ಎಲ್ಲಾ ರೀತಿಯಲ್ಲಿ ಇಡೀ ದೇಶದಲ್ಲಿ ಆಧುನಿಕ ರಾಜ್ಯವನ್ನಾಗಿ ಮಾಡಿದಂತಹ ಕೀರ್ತಿ ಸಲ್ಲಬೇಕಾದರೆ ಈ ರಾಜ್ಯದಲ್ಲಿ, ಅದು

ಸರ್ ಎಂ. ವಿಶ್ವೇಶ್ವರಯ್ಯನವರಿಗೆ ಮಾತ್ರ ಅದು ಬಿಟ್ಟರೆ ನೀರಾವರಿ ಇಂಜಿನಿಯರ್ ಆದಂತಹ ಬಾಳೆಕುಂದ್ರಿ ಅವರಿಗೆ. ಅವರ ಬಗ್ಗೆ ಇದರಲ್ಲಿ ಏನಾದರೂ ಮೆನ್‌ಷನ್ ಮಾಡಿದೆಯಾ ? ನಿಮ್ಮ ಭದ್ರಾವತಿ ಸ್ಟೀಲ್ ಫ್ಯಾಕ್ಟರಿ ಪ್ರಾರಂಭ ಮಾಡಿದ್ದು ಯಾರು ? ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಪ್ರಾರಂಭ ಮಾಡಿದ್ದು ಯಾರು ? ಇಲ್ಲಿ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ಕಾಲೇಜು ಪ್ರಾರಂಭ ಮಾಡಿದ್ದು ಯಾರು ? ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪ್ರಾರಂಭ ಮಾಡಿದ್ದು ಯಾರು ? ಕೆ.ಆರ್. ಸಾಗರ ಕಟ್ಟಿದ್ದು ಯಾರು ? ಕರ್ನಾಟಕದಲ್ಲಿ ಸ್ಟೀಲ್ ಇಂಡಸ್ಟ್ರಿ ಕಟ್ಟಿಸಿದ್ದು ಯಾರು ? ಆಧುನಿಕ ಕರ್ನಾಟಕವನ್ನು ನಿಜವಾಗಿ ಕಟ್ಟಿದಂತಹ ಶಿಲ್ಪಿ, ಅವರ ಬಗ್ಗೆ ಒಂದು ಅಕ್ಷರ ಕೂಡ ಈ ಸುವರ್ಣ ಕರ್ನಾಟಕದ ಸಂದರ್ಭದಲ್ಲಿ ನೆನಪಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಅಂಬೇಡ್ಕರ್, ಮೊಟ್ಟಮೊದಲು ಈ ದೇಶದಲ್ಲಿ...........

ಅಧ್ಯಕ್ಷರು :– ರೆಡ್ಡಿಯವರೆ, ಈ ಕರ್ನಾಟಕದ ಅಭಿವೃದ್ಧಿ ಹತ್ತು ವರ್ಷಗಳಲ್ಲಿ ಆಗಬೇಕೆಂದು ಅವರು ಕಂಡ ಹಾಗೆ ಕೊಟ್ಟಿದ್ದಾರೆ. ಅದರ ಬಗ್ಗೆ ಏನಾದರೂ ಸಲಹೆಗಳು ಇದ್ದರೆ ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಅದಕ್ಕೇ ನಾನು ಹೇಳುತ್ತಿದ್ದೇನೆ, ಅವರು ಕಂಡಂತಹ ವಿಜನ್, ನಾನು ಹೇಳುತ್ತಿರುವುದು ಮೊಟ್ಟಮೊದಲನೆಯದಾಗಿ ಈ ವಿಜನ್ ಅನ್ನು ಕರ್ನಾಟಕಕ್ಕೆ ಕೊಟ್ಟವರು ಸರ್ ಎಂ. ವಿಶ್ವೇಶ್ವರಯ್ಯ. ಬೇರೆ ಯಾರೂ ಕೊಡಲಿಲ್ಲ. ವಿಶ್ವೇಶ್ವರಯ್ಯನವರು ಕೊಟ್ಟಂತಹ ವಿಜನ್ ಏನಿದೆ ಕರ್ನಾಟಕದಲ್ಲಿರುವಂತಹ ಎಲ್ಲಾ ಗೌವರ್ನ್‌ಮೆಂಟ್ ಪಬ್ಲಿಕ್ ಸೆಕ್ಟರ್ ಯಾವ್ಯಾವುದಿದೆಯೋ ಅವೆಲ್ಲವೂ ಪ್ರಾರಂಭವಾಗಿದ್ದು ಮಾನ್ಯ ವಿಶ್ವೇಶ್ವರಯ್ಯನವರ ಕಾಲದಲ್ಲಿ. ಈ ಐಟಿ : ಬಿಟಿ ಇವತ್ತು ಬೆಂಗಳೂರಿಗೆ ಬಂದಿದೆ. ಏಕೆ ಬಂದಿದೆ ಗೊತ್ತಾ ? because of strong public sector base created in Karnataka commencing from Sir. M.Vishweshvaraiah to Nehru, ಹೆಚ್‌ಎಎಲ್, ಬಿಇಎಲ್, ಹೆಚ್‌ಎಂಟಿ ಇವೆಲ್ಲವನ್ನೂ ಪ್ರಾರಂಭ ಮಾಡಿರುವುದಕ್ಕೋಸ್ಕರ ಅಲ್ಲಿ Highly technically qualified . . .

ಅಧ್ಯಕ್ಷರು :– ಈಗ ರೆಡ್ಡಿಯವರೆ, ಬೇಗ ಮುಗಿಸಬೇಕು. ಅರ್ಧ ಗಂಟೆ ಆಯಿತು.

ಶ್ರೀ ಎಂ. ಮಹದೇವ್ :– ಮಾನ್ಯ ಅಧ್ಯಕ್ಷರೆ, ಈ ಸೆಷನ್ ಕರೆದಿರುವುದು ಏತಕ್ಕೆ ?

(ಗೊಂದಲ)

ಶ್ರೀ ಎನ್. ಚಲುವರಾಯ ಸ್ವಾಮಿ (ಸಾರಿಗೆ ಸಚಿವರು) :– ಮಾನ್ಯ ಅಧ್ಯಕ್ಷರೆ, ನಮ್ಮ ಸದಸ್ಯರಿಗೆ ಸ್ವಲ್ಪ ಹೇಳಿ. ಇಲ್ಲಿರುವವರೆಲ್ಲಾ ಮಂತ್ರಿಗಳೇ, ಅವರಿಗೆ ಏನಾದರೂ ಬೇರೆ ರೀತಿಯಲ್ಲಿ ಕಂಡರೆ ಸ್ವಲ್ಪ ಕನ್ನಡಕ ಹಾಕಿಕೊಳ್ಳುವುದಕ್ಕೆ ಹೇಳಿ. ಇಲ್ಲಿರುವವರೆಲ್ಲಾ ಮಂತ್ರಿಗಳೇ ತಾವು ದಯವಿಟ್ಟು ಮಾನ್ಯ ಸದಸ್ಯರಿಗೆ ಹೇಳಬೇಕು.

ಅಧ್ಯಕ್ಷರು :– ರೆಡ್ಡಿಯವರೆ, ಬೇಗ ಮುಗಿಸಿ, ಇನ್ನು ಬಹಳ ಜನ ಮಾತನಾಡುವವರು ಇದ್ದಾರೆ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ನೀವು ಮಾತನಾಡುವುದನ್ನು ಬೇಗ ಮುಗಿಸಿ ಎಂದರೆ ಮುಗಿಸಿಬಿಡುತ್ತೇನೆ.

ಮಾನ್ಯ ಸದಸ್ಯರು :– ಮಾನ್ಯ ಅಧ್ಯಕ್ಷರೆ, ಟೈಂ ಕೊಡುವಾಗ ಎಲ್ಲರಿಗೂ ಲಿಮಿಟ್ ಮಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ನಾನು ಕೆಲಸಕ್ಕೆ ಬಾರದೆ ಇರುವಂತಾದ್ದು ಏನೂ ಇಲ್ಲಿ ಮಾತನಾಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು :– ಮಹದೇವ್, ಏಕೆ ಈ ರೀತಿ ಮಧ್ಯದಲ್ಲಿ ನಿಂತು ಮಾತನಾಡುತ್ತೀರಿ ?

ಶ್ರೀ ಎಂ. ಮಹದೇವ್ :– ಇಂದು ಡಾ॥ ಅಬ್ದುಲ್ ಕಲಾಂ ಅವರ ಸ್ಪೀಚ್ ಬಗ್ಗೆ ಅವರು ಕರ್ನಾಟಕಕ್ಕೆ ಹಾಕಿಕೊಟ್ಟಿರತಕ್ಕಂಥ ಅಂಶಗಳ ಬಗ್ಗೆ ಚರ್ಚೆ ನಡೆದಿದೆ . . . .

(ಗೊಂದಲ)

ಅಧ್ಯಕ್ಷರು :– ಆಯಿತು, ನೀವು ವಿಚಾರ ಎತ್ತಿದಿರಲ್ಲಾ, ಆ ವಿಚಾರವನ್ನು ಹಿಂದೆ ಎತ್ತಿದ್ದು, ಅದಕ್ಕೆ ಸರ್ಕಾರದ ಕಡೆಯಿಂದ ನಾವು ಮಂತ್ರಿಗಳು ಇದ್ದೇವೆ, ಅವರ ಪರವಾಗಿ ಬರೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ನೀವು ಕುಳಿತುಕೊಳ್ಳಿ, ಲೇಟಾಗಿ ಬಂದು ಮಧ್ಯ ಮಧ್ಯದಲ್ಲಿ ಏನೇನೋ ಮಾತನಾಡಿದರೆ ಏನಿದು ? ದಯಮಾಡಿ ಕುಳಿತುಕೊಳ್ಳಿ, ಅದರ ಬಗ್ಗೆ ಚರ್ಚೆಯಾಗಿದೆ.

ಶ್ರೀ ಎಂ. ಮಹದೇವ್ :– ಇಲ್ಲ, ಇದೆಲ್ಲಾ ನೀವು ಹೇಳಲೇಬೇಕಾಗುತ್ತದೆ. ತಾವು ಹುಡುಗರಿಗೆ ಮಾರ್ಗದರ್ಶನ ನೀಡಬೇಕು. ನಾವು ಹೇಳುವಂತಹ ಅಭಿಪ್ರಾಯವನ್ನು ತಾವು ತೆಗೆದುಕೊಳ್ಳಬೇಕು. ಈ ತರಹ ನಮ್ಮನ್ನು ಕಡೆಗಣಿಸಬಾರದು ತಾವು.

(ಗೊಂದಲ)

ಅಧ್ಯಕ್ಷರು :– ನೋಡಿ ಮಹದೇವ್‌ರವರೆ, ಈಗ ನೀವೇನು ವಿಷಯ ಎತ್ತಿದ್ದೀರಿ ಅದನ್ನು ಹಿಂದೆ ಆಗಲೇ ಎತ್ತಿ ಅದರ ಬಗ್ಗೆ ಹೇಳಿದ್ದಾರೆ ನೀವು ಮತ್ತೆ ಮತ್ತೆ ಹೇಳುತ್ತಿದ್ದೀರಿ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಮಹದೇವ್ :– ಚೊಚ್ಚಲು ಹೆತ್ತು ಹೆಜ್ಜೆ ಹಾಕುವವರು ನಾವು.

ಅಧ್ಯಕ್ಷರು :– ದಯವಿಟ್ಟು ಅದೆಲ್ಲಾ ಆಗಿದೆ ಕುಳಿತುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಹಾಗಾಗಿ ಇವತ್ತು ನಮ್ಮ ಕರ್ನಾಟಕಕ್ಕೆ ಏನಾದರೂ ಸಿಲಿಕಾನ್ ವ್ಯಾಲಿ ಆಫ್ ಏಷಿಯಾ ಎಂದಾಗಲಿ, ಐಟಿ:ಬಿಟಿ ಸೆಂಟರ್ ಎಂದಾಗಲಿ, ಈ ರೀತಿ ಏನಾದರೂ ಜಾಗತಿಕ ಮಟ್ಟದಲ್ಲಿ ಹೆಸರು ಬಂದಿದೆ ಎಂದು ಹೇಳಿದರೆ, that is because of the base created by Late Sir. M. Vishweshvaraiah. ಇದರಲ್ಲಿ ಯಾರೂ ಡಿಸ್ಪೂಟ್ ಮಾಡುವುದಕ್ಕೆ ಸಾಧ್ಯವಿಲ್ಲ. ಸುವರ್ಣ ಕರ್ನಾಟಕದ ಸಂದರ್ಭದಲ್ಲಿ ನಾವ್ಯಾರೂ ಅವರನ್ನು ನೆನಪಿಸಿಕೊಳ್ಳುವುದಕ್ಕೆ ತಯಾರಾಗಿಲ್ಲ. ಇನ್ನೊಂದು ಬಹಳ ಮುಖ್ಯವಾದಂತಹ ವಿಚಾರ, ಅವರು ಹನ್ನೊಂದು ವಿಜನ್ಸ್ ಏನು ಹೇಳಿದ್ದಾರೆ, ಇವೆಲ್ಲವೂ ಕೂಡ ಅವರ ಒಂದು ದೃಷ್ಟಿ ಅವರ ಆಶಯ, ಈ ಆಶಯಗಳು ಭಾರತ ದೇಶಕ್ಕೆ ಹೊಸದಲ್ಲ. Commencing from Buddha to Ambedkar, they are the great visionaries. Gandhi, Nehru, Buddha, Basava, Ambedkar, Mahaveera are the great visionaries. ಅವರೆಲ್ಲರೂ ಕೂಡ ಭಾರತ ದೇಶಕ್ಕೆ ಈ ದೇಶ ಹೀಗಿರಬೇಕು ಎಂದು ತಮ್ಮದೇ ಆದಂತಹ ಕನಸನ್ನು ಕಂಡಿದ್ದರು. ಬುದ್ಧನನ್ನು ಇಲ್ಲಿಂದ ಓಡಿಸಿಬಿಟ್ಟೆವು. Ambedkar was the man who first talked

about the nationalization of land. ಸರ್ಕಾರದ ಪ್ಲಾನಿಂಗ್ ಕಮಿಷನ್‌ನವರೆ ಕೊಟ್ಟಿರತಕ್ಕಂಥ ಅಂಕಿಅಂಶಗಳ ಪ್ರಕಾರ 80% of the agriculture land till today are under the control of 20% population. The remaining 80% of population having only 20% of land. This is not my figure. This is the Planning Commissions figure. 80 ಪರ್ಸೆಂಟ್ ಭೂಮಿಯನ್ನು 20 ಪರ್ಸೆಂಟ್ ಜನಕ್ಕೆ ಕೊಟ್ಟು, ಇನ್ನು 20 ಪರ್ಸೆಂಟ್ ಭೂಮಿಯನ್ನು 80 ಪರ್ಸೆಂಟ್ ಜನಕ್ಕೆ ಕೊಟ್ಟು, ಈ ದೇಶದಲ್ಲಿ ನಾವು ಕೃಷಿ ವಲಯವನ್ನು ಅಭಿವೃದ್ಧಿ ಮಾಡುತ್ತೇವೆಂದು ಯಾರಾದರೂ ಯೋಜನೆ ಹಾಕಿದ್ದರೆ, ಅದು ಖಂಡಿತ ಹಿಪೋಕ್ರಸಿ ಆಗುತ್ತದೆ. ಅದೊಂದು ಬೂಟಾಟಿಕೆಯಾಗುತ್ತದೆ. ಅದನ್ನೇ ಶ್ರೀ ವಿ.ಎಂ. ದಾಂಡೇಕರ್‌ರವರೂ ಕೂಡ ಹೇಳಿದ್ದಾರೆ. ಮಾನ್ಯ ವಿ.ಎಂ. ದಾಂಡೇಕರ್‌ರವರು ಹೇಳಿರುವಂತಹ ಪಾಯಿಂಟನ್ನೇ ಅವರು ಹೇಳಿರುವಂಥಾದ್ದು. ಭೂಮಿ ಹಂಚಿಕೆ ಸಮಾನವಾಗಿ ಇಲ್ಲದೇ, ಈ ದೇಶದಲ್ಲಿ ಕೃಷಿಯನ್ನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿಲ್ಲ. ಆ ಭೂಮಿಯನ್ನು ಉಳುವವನಿಗೆ ಹಂಚುವಂತಹ ಕಾರ್ಯಕ್ರಮ ಯಾವ ವಿಜನ್‌ನಲ್ಲಿ ಇದೆ ? ಇಲ್ಲ, ಇದು ಮೊದಲನೆಯದು, ನಮಗೆ ನಿಜವಾಗಿ, ಪ್ರಾಮಾಣಿಕವಾಗಿ ಕೃಷಿ ರಂಗ ಅಭಿವೃದ್ಧಿಯಾಗಬೇಕೆಂದರೆ, ಮೊದಲು ಮಾಡಬೇಕಾದಂತಹ ಕೆಲಸ, ಯಾರು ಭೂಮಿಯನ್ನು ಉಳುಮೆ ಮಾಡುತ್ತಾರೆ, ಅವರಿಗೆ ಕೊಡಿ. ಎರಡನೆಯದಾಗಿ, ಯೋಜನೆಗಳ ಬಗ್ಗೆ ಹೇಳಿದ್ದಾರೆ. ಇಲ್ಲಿ ಮತ್ತೆ ನಾನು ಸರ್. ಎಂ. ವಿಶ್ವೇಶ್ವರಯ್ಯನವರನ್ನು ಕೋಟ್ ಮಾಡಬೇಕಾಗುತ್ತದೆ. ಇಂಡಿಯಾ ದೇಶದಲ್ಲಿ ನಾವು ಇವತ್ತು 11ನೇ ಪಂಚವಾರ್ಷಿಕ ಯೋಜನೆಗೆ ಬರುತ್ತಿದ್ದೇವೆ. ಆದರೆ ಈ ಅಧಿಕೃತ 11ನೇ ಪಂಚವಾರ್ಷಿಕ ಯೋಜನೆಗಿಂತ ಮೊದಲು 1935ನೇ ಇಸವಿಯಲ್ಲಿ "ಬಾಂಬೆ ಪ್ಲಾನ್" ಎನ್ನತಕ್ಕಂಥ ಯೋಜನೆಯನ್ನು ಸರ್.ಎಂ. ವಿಶ್ವೇಶ್ವರಯ್ಯನವರು ತಯಾರು ಮಾಡಿದರು. ನೀವು ಅದರ ಇಡೀ ದಾಖಲೆಗಳನ್ನು ಯಾರಾದರೂ ನೋಡಬೇಕಾದರೆ, Land Economy of India ಎನ್ನತಕ್ಕಂಥ ಡಾಕ್ಯುಮೆಂಟ್‌ನಲ್ಲಿ 267 ನೇ ಪೇಜ್‌ನಲ್ಲಿ ಇದೆ. i.e., Vishweshwaraiah's Paln and also called Bombay Plan. 1935 ರಲ್ಲಿ ಜಿಡಿಆರ್. ಬಿರ್ಲಾ, ಟಾಟಾ, ಇವರೆಲ್ಲಾ ಸೇರಿ ಮಾಡಿದಂತಹ ಪ್ಲಾನ್. ಅವತ್ತಿನ ಪ್ಲಾನ್ ಅಂದರೆ 1935 ಎಂದರೆ, almost 78 years back, Vishweshwaraiah told on that day in the Board Meeting of Bombay Plan that, "unless we develop the heavy industries, medium scale industries, India cannot grow." To develop the heavy industries, Vishweshwaraiah then asked the Government to take the responsibility to develop the heavy industries and medium scale industries. Till today, what we are doing ? All our industries have been killed by our own people not anybody else. ಇವತ್ತು ಅದರ ಪರಿಣಾಮ ಏನಾಗಿದೆ ? In the name of liberalization, we are selling all our public sectors. ವಿಶ್ವೇಶ್ವರಯ್ಯನವರು ಬಾಂಬೆ ಪ್ಲಾನ್‌ನಲ್ಲಿ ಒಂದು ಕಡೆ ಹೇಳುತ್ತಾರೆ. ನಿಮಗೆ ಸಾಧ್ಯವಾದರೆ ಅದನ್ನು ಓದಿ. Considering all these developments and having regard to the conditions prevailing in India, he (Vishweshvavaraiah) came to the conclusion, that it is safe for this Country to proceed along with the lines practiced by such capitalist

countries as France, and United Stares of America and we have yet to build some messure of moderate industrial property and the present capitalism is best suited for this purpose. Only the monopoly, incidental and capitalism should be minimized and wherever they are inventible a war should be maintained and special modifications made by the legal enactment and otherwise in the direction of service to the public. This is the conclusion of Vishweshwaraiah in the Bombay Plan 1935. ಇವತ್ತಿಗೆ ನಾವು ಅದನ್ನು ಏನು ಮಾಡಿದ್ದೇವೆ, ಇದಕ್ಕಿಂತ ಗ್ರೇಟ್ ವಿಜನ್ ಅನ್ನು ಎಲ್ಲಾದರೂ ನಾವು ಹುಟ್ಟು ಹಾಕಿದ್ದೇವೆಯೇ ? ಅದು ಆದಮೇಲೆ ಏನಾಯಿತು ? All the Planning ನಾವು ಮಾಡುತ್ತಾ ಬಂದೆವು. For every plan, we had a vision. But, have we implemented these plans, which were prepared by us in letter and spirit No. ಆದರೆ ಇವತ್ತು ಏನು ಆಗಿದೆ ? the whole Indian Economy is dominated by the capitalistic class. Vishweshvaraiah said in Bombay Plan 1935, that we have to minimize, we have to watch on that. But, today what we are telling ? what we are doing ? The whole economic system has been handed over to these people. ಅವರು ಯಾರು ? ಈ ದೇಶದ ಬಂಡವಾಳಗಾರರು. ಅದಕ್ಕೇ ಆಡಮ್‌ಸ್ಮಿತ್‌ರವರು ಹೇಳಿದ್ದನ್ನು ಕೋಟ್ ಮಾಡಿ ಪರಿಸ್ಥಿತಿ ಏನಾಗಿದೆಯೆಂಬುದನ್ನು ಹೇಳುತ್ತಾನೆ Adam Smith has pointed out that the principle architecture of the policy in England were merchants and manufacturers. Principle architecture of the England Economy are controlled by merchants and manufacturers. ನಮ್ಮ ದೇಶದ ಪರಿಸ್ಥಿತಿ ಇವತ್ತು ಏನಾಗಿದೆ ? who is controlling the Indian industries ? who is controlling Indian manufacturing the corporate sectors. ಆದರೆ ಭಾರತ ದೇಶದಲ್ಲಿ ಇನ್ನು ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಅವರು ಇಂಡಸ್ಟ್ರೀಸ್‌ಗೆ ಮಾತ್ರವೇ corporate sector ಇತ್ತು. ಈಗ ಅಗ್ರಿಕಲ್ಚರ್‌ಗೆ ಕೂಡ corporate sector ಅನ್ನು ತರುತ್ತಾ ಇದ್ದಾರೆ. ಮಾನ್ಯ ಶ್ರೀನಿವಾಸಗೌಡರು ಮಾತನಾಡುವಾಗ ಒಂದು ಕೋಟ್ ಮಾಡಿ ಹೇಳಿದರು. Farmer Corporate. It is different from Corporate Agriculture. Farmer Corporate is different and Corporate Agriculture is different. ಈಗ ನಮ್ಮಲ್ಲಿ ಏನು ಮಾಡುತ್ತಿದ್ದೇವೆಂದರೆ, Corporate Agriculture ಅನ್ನು ಇಂಟ್ರಡ್ಯೂಸ್ ಮಾಡುತ್ತಿದ್ದೇವೆ. Companies like Monsanto, Kargil, we are inviting than to take over our agriculture, there by pauperising the peasants and make them agricultural labourers in their own land. This is the Corporate Agriculture that we are inviting.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೆ, ತಾವು 45 ನಿಮಿಷಗಳ ಕಾಲ ಮಾತನಾಡಿದ್ದೀರಿ. ತಾವು ದಯಮಾಡಿ ಭಾಷಣವನ್ನು ಬೇಗ ಮುಗಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾವು ಮಾತನಾಡುವುದು ಪ್ರಯೋಜನ ಇಲ್ಲವೆಂದರೆ ನಿಲ್ಲಿಸಿ ಬಿಡುತ್ತೇನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗ ಆಡೆಮ್‌ಸ್ಮಿತ್ ಅನ್ನು ಹಿಡಿದುಕೊಂಡು, ಇನ್ನು ಕಾರ್ಲ್‌ಮಾರ್ಕ್ಸ್ ಲೆನಿನ್ , present day ಈಗ ಜ್ಯೋತಿಬಸುಗೆ ಬಂದು, ಬುದ್ಧದೇವ್, ಭಟ್ಟಾಚಾರ್ಯವರೆಗೂ ಇನ್ನೂ ಬರಬೇಕು. ಅವರಿಗೆ ನೀವು 45 ನಿಮಿಷಗಳು ಎಂದರೆ ಹೇಗೆ ?

ಅಧ್ಯಕ್ಷರು : ಇನ್ನೂ ಬಹಳ ಜನ ಸದಸ್ಯರು ಮಾತನಾಡುವವರು ಇದ್ದಾರೆ. ಅದಕ್ಕೋಸ್ಕರ ಅವರಿಗೆ ಹೇಳಿದೆ. ಮಾನ್ಯ ಶ್ರೀರಾಮರೆಡ್ಡಿಯವರೆ, ತಾವು ಇನ್ನು 5 ನಿಮಿಷಗಳಲ್ಲಿ ಮುಗಿಸಬೇಕು. ತಾವು ಭಾಷಣ ಪ್ರಾರಂಭ ಮಾಡಿ 45 ನಿಮಿಷಗಳಾಯಿತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಿಮಗೆ ಅಷ್ಟು ಅರ್ಜೆಂಟ್ ಇದ್ದರೆ, ನಾನು ನನ್ನ ಮಾತುಗಳನ್ನು ಮುಗಿಸಿ ಕುಳಿತುಕೊಳ್ಳುತ್ತೇನೆ.

Mr. Speaker : O.K. It is your wish. ಈಗ ಮಾನ್ಯ ಎಂ.ಪಿ. ಪ್ರಕಾಶ್‌ರವರು ಮಾತನಾಡಲಿ ಇವರ ಕಡೆಯಿಂದ ಯಾರೂ ಮಾತನಾಡಿಲ್ಲ.

6) ಅಧ್ಯಕ್ಷರ ಅಪ್ಪಣೆ ಮೇರೆಗೆ :

ವಿಷಯ : ಘನತೆವೆತ್ತ ರಾಷ್ಟ್ರಪತಿಯವರ ಭಾಷಣದ ಮೇಲೆ ಚರ್ಚಿಸಲು ಅವಕಾಶ ನೀಡುವ ಬಗ್ಗೆ.

ಶ್ರೀ ಕೆ. ಚಂದ್ರಶೇಖರ್ : ಮಾನ್ಯ ಅಧ್ಯಕ್ಷರೇ, ನಾವು ಒಂದು ಹದಿನೈದು ನಿಮಿಷಗಳಲ್ಲಿ ಮುಗಿಸುತ್ತೇವೆ.

(ಗೊಂದಲ)

ಅಧ್ಯಕ್ಷರು : ಏನು ಇದು ? ನೀವು ಎಲ್ಲರೂ ಎದ್ದು ನಿಂತುಕೊಂಡರೆ ಹೇಗೆ ? ನಿಮಗೆ ಅವಕಾಶವನ್ನು ಕೊಟ್ಟಿದ್ದೇನೆ, ಈಗ ಆಡಳಿತ ಪಕ್ಷದ ಕಡೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ, ಎಲ್ಲರೂ ದಯಮಾಡಿ ಕುಳಿತುಕೊಳ್ಳಿ, ನಿಮಗೂ ಅವಕಾಶವನ್ನು ಕೊಡುತ್ತೇನೆ.

ಶ್ರೀ ಕೆ. ಚಂದ್ರಶೇಖರ್ : ಹತ್ತು ನಿಮಿಷಗಳ ಕಾಲ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಎಂ.ಪಿ. ಪ್ರಕಾಶ್‌ರವರೇ, ಮಾತನಾಡಿ; ದಯಮಾಡಿ ಸಹಕರಿಸಬೇಕು. ಇವತ್ತು ಸಂಜೆ 6 ಗಂಟೆಯವರೆಗೆ ಚರ್ಚೆ ಎಂದು ಇದೆ. ಅದರಲ್ಲಿ ಭಾರತೀಯ ಜನತಾ ಪಕ್ಷಕ್ಕೆ 2 ಗಂಟೆ 50 ನಿಮಿಷ ಬರುತ್ತದೆ. ಕಾಂಗ್ರೆಸ್ ಪಕ್ಷಕ್ಕೆ 2 ಗಂಟೆ 20 ನಿಮಿಷ ಬರುತ್ತದೆ, ಜೆ.ಡಿ.ಎಸ್. ಪಕ್ಷಕ್ಕೆ 2 ಗಂಟೆಗಳು ಬರುತ್ತದೆ, ಜೆ.ಡಿ.ಯು.ಗೆ 10 ನಿಮಿಷ ಬರುತ್ತದೆ, ಇತರೇ ಇಂಡಿಫೆಂಡೆಂಡ್ಸ್‌ಗೆ 40 ನಿಮಿಷಗಳು ಬರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಎಂ.ಪಿ. ಪ್ರಕಾಶ್‌ರವರಿಗೆ ಎಷ್ಟು ಸಮಯ ಇದೆ ?